ಕರ್ನಾಟಕ ಸರ್ಕಾರ

Azim Premji Foundation

# ಕಲಿಕಾ ಚೇತರಿಕೆ ಉಪಕ್ರಮ

**2022–23**

## ಕಲಿಕಾ ಚೇತರಿಕೆ ಉಪಕ್ರಮದ ಹಿನ್ನೆಲೆ:

ಕೋವಿಡ್–19 ಕಾರಣದಿಂದಾಗಿ ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ ಶಾಲೆಗಳು ಔಪಚಾರಿಕವಾಗಿ ಪೂರ್ಣಾವಧಿಯವರೆಗೆ ನಡೆಯದ ಕಾರಣ ವಿದ್ಯಾರ್ಥಿಗಳ ಬೌದ್ಧಿಕ ವಿಕಾಸ ಹಾಗೂ ಶೈಕ್ಷಣಿಕ ಪ್ರಗತಿಯ ಮೇಲೆ ದೀರ್ಘಕಾಲಿಕವಾದ ಪರಿಣಾಮ ಬೀರಿರುವುದನ್ನು ಹಲವು ಅಧ್ಯಯನಗಳು ದೃಢಪಡಿಸಿವೆ. ಲಾಕ್‌ಡೌನ್ ಸಮಯದಲ್ಲಿ ಶಾಲೆಗಳು ಮುಚ್ಚಲ್ಪಟ್ಟಾಗ ವಿದ್ಯಾಗಮ, ವಠಾರ, ಸಂವೇದ, ವಿಶೇಷ ಸೇತುಬಂಧ ಇತ್ಯಾದಿ ಪರ್ಯಾಯ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂಪರ್ಕವಿಟ್ಟುಕೊಂಡು ಕಲಿಸುವ ಪ್ರಕ್ರಿಯೆಗಳು ನಡೆದಿವೆ. ಕೆಲವು ಅಧ್ಯಯನಗಳ ಪ್ರಕಾರ ಮಕ್ಕಳು ಹಿಂದಿನ ವರ್ಷದ ಕನಿಷ್ಠ ಒಂದು ನಿರ್ದಿಷ್ಟ ಸಾಮರ್ಥ್ಯವನ್ನು ಮರೆತಿದ್ದಾರೆ ಎಂದು ಹೇಳುತ್ತವೆ. ಅಂದರೆ ಸರಾಸರಿ **92%** ಮಕ್ಕಳು ಹಿಂದಿನ ವರ್ಷದ ಕನಿಷ್ಠ ಒಂದು ನಿರ್ದಿಷ್ಟ ಭಾಷಾ ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆ/ಮರೆತಿದ್ದಾರೆ ಮತ್ತು ಸರಾಸರಿ **82%** ಮಕ್ಕಳು ಹಿಂದಿನ ವರ್ಷದ ಕನಿಷ್ಠ ಒಂದು ನಿರ್ದಿಷ್ಟ ಗಣಿತ ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆ/ಮರೆತಿದ್ದಾರೆ ಎಂದು ಅಧ್ಯಯನಗಳ ವರದಿ ಹೇಳುತ್ತದೆ. ಇದು ಇತರೆ ವಿಷಯಗಳಿಗೂ ಕೂಡ ಅನ್ವಯಿಸುತ್ತದೆ. ಹಾಗೆ ನಿಪುಣ್ ಭಾರತ್ ಮಿಷನ್‌ನಲ್ಲಿ ಹೇಳಿರುವಂತೆ ದೇಶದ ಸುಮಾರು 5 ಕೋಟಿ ಮಕ್ಕಳಿಗೆ ಬುನಾದಿ ಸಾಕ್ಷರತೆ ಮತ್ತು ಗಣಿತೀಯಜ್ಞಾನ ಬರುತ್ತಿಲ್ಲ ಎಂದು ವ್ಯಕ್ತಪಡಿಸಿದೆ. ಆ ಸಂಖ್ಯೆ ಕೋವೀಡ್‌ನಿಂದಾಗಿ ಇನ್ನು ಹೆಚ್ಚಾಗಿರಬಹುದೆಂದು ಊಹಿಸಿದರೆ ಬಹುಶಹ ತಪ್ಪಾಗಲಾರದು.

ಈ ಹಿನ್ನೆಲೆಯಲ್ಲಿ ಶಾಲೆಗಳು ಪುನರಾರಂಭವಾದಾಗ ಪರ್ಯಾಯ ಶೈಕ್ಷಣಿಕ ಯೋಜನೆಗಳ ಮೂಲಕ ಕಲಿಸುವಿಕೆಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳಲು ಯತ್ನಿಸಲಾಗಿದೆ. ಅದೇ ರೀತಿಯಲ್ಲಿ **'ಕಲಿಕಾ ಚೇತರಿಕೆ–2023'** ಉಪಕ್ರಮವೂ ಕೂಡ ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ಕಲಿಕಾ ನಷ್ಟ ಮತ್ತು ಕಲಿಕಾ ಹಿನ್ನಡೆಯನ್ನು ಸರಿದೂಗಿಸುವ ಸಲುವಾಗಿ ಜಾರಿಗೊಳಿಸಲಾಗಿದೆ. ಈ ಉಪಕ್ರಮದ ಮೂಲಕ 2022–23 ಶೈಕ್ಷಣಿಕ ವರ್ಷದಲ್ಲಿ ರಾಜ್ಯಾದ್ಯಂತ ಎಲ್ಲಾ ಶಾಲೆಗಳಲ್ಲಿ ಕಲಿಕಾ ನಷ್ಟವನ್ನು ಸರಿದೂಗಿಸಲು ಬೋಧನಾ ಕಲಿಕಾ ಪ್ರಕ್ರಿಯೆಯು ಇದಕ್ಕೆ ಪೂರಕವಾಗಿ ನಡೆಯುತ್ತವೆ. **"ಕಲಿತದ್ದನ್ನು ಮರೆತದ್ದು, ಕಲಿಯದೇ ಬಿಟ್ಟದ್ದು, ಪ್ರಸ್ತುತ ಕಲಿಯಬೇಕಾದ್ದು"** ಇವೆಲ್ಲವನ್ನೂ ಸರಿದೂಗಿಸಲು ಮತ್ತು ಸಮಯೋಚಿತವಾಗಿ ನಿರ್ವಹಿಸಲು ಸೃಜಿಸಲಾಗಿರುವ ಮಹತ್ತ್ವಾಕಾಂಕ್ಷಿ ಉಪಕ್ರಮವೇ **'ಕಲಿಕಾ ಚೇತರಿಕೆ'**. ಹಾಗೆಯೇ ಮಹತ್ತ್ವಾಕಾಂಕ್ಷೆಯ ರಾಷ್ಟ್ರೀಯ ಶಿಕ್ಷಣ ನೀತಿ–2020ಅನ್ನು ಅನುಷ್ಠಾನ ಮಾಡುವ ಜೊತೆಗೆ 'ನಿಪುಣ್ ಭಾರತ್ ಮಿಷನ್'ನ ಆಶಯದಂತೆ 2026ರ ವೇಳೆಗೆ 3ನೇ ತರಗತಿವರೆಗಿನ ಎಲ್ಲ ವಿದ್ಯಾರ್ಥಿಗಳಲ್ಲಿ ಬುನಾದಿ ಸಾಕ್ಷರತೆ ಮತ್ತು ಗಣಿತೀಯ ಜ್ಞಾನವನ್ನು ಖಾತ್ರಿಪಡಿಸುವ ಗುರಿಯೂ ನಮ್ಮ ಮುಂದಿದೆ. ಈ ಹಿನ್ನೆಲೆಯಲ್ಲಿ ಕಲಿಕಾ ಚೇತರಿಕೆ ಉಪಕ್ರಮ ಮಹತ್ತ್ವದ್ದಾಗಿದೆ.

## ಕಲಿಕಾ ಚೇತರಿಕೆ ಉಪಕ್ರಮದ ಗುರಿ:

- ರಾಷ್ಟ್ರೀಯ ಶಿಕ್ಷಣ ನೀತಿ–2020ರ ಆಶಯದಂತೆ ಬುನಾದಿ ಸಾಕ್ಷರತೆ ಹಾಗೂ ಸಂಖ್ಯಾಜ್ಞಾನವನ್ನು ಬೆಳೆಸುವುದು.
- 2022–23ನೇ ಸಾಲಿನ ಶೈಕ್ಷಣಿಕ ವರ್ಷವನ್ನು **'ಕಲಿಕಾ ಚೇತರಿಕೆ ವರ್ಷ'** ಎಂದು ಘೋಷಿಸುವುದರ ಮೂಲಕ ರಾಜ್ಯಾದ್ಯಂತ ನಿರ್ದೇಶಿತ ಏಕರೂಪದ ಶೈಕ್ಷಣಿಕ ಪ್ರಕ್ರಿಯೆಯನ್ನು ಜಾರಿಗೊಳಿಸುವುದನ್ನು ನಿಶ್ಚಿತಗೊಳಿಸುವುದು.
- ಎಲ್ಲ ವಿದ್ಯಾರ್ಥಿಗಳ ಭಾವನಾತ್ಮಕ ಅಗತ್ಯತೆಗಳ ಬೆಂಬಲಕ್ಕೆ ಗಮನ ಹರಿಸಿ ಕಲಿಕಾ ಪ್ರಕ್ರಿಯೆಗೆ ಪೂರಕವಾಗಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದನ್ನು ಖಾತ್ರಿಪಡಿಸುವುದು.
- ಎಲ್ಲ ವಿದ್ಯಾರ್ಥಿಗಳು ಬುನಾದಿ ಸಾಕ್ಷರತೆ, ಸಂಖ್ಯಾಜ್ಞಾನ ಮತ್ತು ಹಿಂದಿನ ಎರಡು ತರಗತಿಗಳ ಅತ್ಯಗತ್ಯ ಕಲಿಕಾ ಫಲಗಳು ಹಾಗೂ ಪ್ರಸಕ್ತ ತರಗತಿಯ ಅತ್ಯಗತ್ಯ ಕಲಿಕಾ ಫಲಗಳನ್ನು ಸಾಧಿಸುವಂತೆ ಕ್ರಮವಹಿಸುವುದು.
- ಒಟ್ಟಾರೆಯಾಗಿ 2023–24 ಶೈಕ್ಷಣಿಕ ಸಾಲಿನ ಆರಂಭದ ವೇಳೆಗೆ ಪ್ರತಿ ವಿದ್ಯಾರ್ಥಿಯು ತನ್ನ ತರಗತಿ ಮಟ್ಟದ ಕಲಿಕೆಯನ್ನು ಯಾವುದೇ ಅಡೆತಡೆ ಇಲ್ಲದೆ ಸಾಧಿಸಲು ಸಾಧ್ಯವಾಗುವಂತೆ ಸಜ್ಜುಗೊಳಿಸುವುದು.

## ಕಲಿಕಾ ಚೇತರಿಕೆ ಉಪಕ್ರಮದ ರಚನೆ:

ಕಲಿಕಾ ಚೇತರಿಕೆ ಉಪಕ್ರಮವು ಮುಖ್ಯವಾಗಿ ಇರುವ ಶಿಕ್ಷಕರ ಕೈಪಿಡಿ ಮತ್ತು ಕಲಿಕಾ ಹಾಳೆಗಳನ್ನು ಬಳಸಿ ಮಕ್ಕಳಲ್ಲಿ ಕಲಿಕಾ ಫಲಗಳನ್ನು ಕಟ್ಟಿಕೊಡುವ ಮಹತ್ತರ ಗುರಿ ಉದ್ದೇಶವನ್ನು ಹೊಂದಿದೆ. ಈ ಕಾರ್ಯಕ್ರಮವು 2022–2023 ಶೈಕ್ಷಣಿಕ ವರ್ಷವಿಡಿ ನಡೆಯಲಿದ್ದು, ಅದರ ರಚನೆಯು ಕೂಡ ವಿದ್ಯಾರ್ಥಿಗಳು ಹಿಂದಿನ ಎರಡು ಶೈಕ್ಷಣಿಕ ವರ್ಷ ಮತ್ತು ಪ್ರಸ್ತುತ ಶೈಕ್ಷಣಿಕ ವರ್ಷದ ಆದ್ಯತಾ ಕಲಿಕಾ ಫಲಗಳನ್ನು ಗಳಿಸಿಕೊಳ್ಳುವ ಮೂಲ ಉದ್ದೇಶವನ್ನು ಹೊಂದಿದೆ. ಈ ರೀತಿಯ ತರಗತಿವಾರು ಆದ್ಯತಾ ಕಲಿಕಾಫಲಗಳನ್ನು, ಅವಶ್ಯಕತೆಗೆ ತಕ್ಕಂತೆ ಮರುಹೊಂದಾಣಿಸಲಾಗಿದೆ. ಇದರ ಜೊತೆಗೆ, ಪ್ರಸ್ತುತ ಸಂದರ್ಭದಲ್ಲಿ, ಹಲವು ವಿದ್ಯಾರ್ಥಿಗಳು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನವನ್ನು ಮರೆತಿರುವುದರಿಂದ, ಹಾಗೂ ನಿಪುಣ್ ಭಾರತ್‌ಕೂಡ ಖಾತ್ರಿಪಡಿಸುವುದರಿಂದ, ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನಕ್ಕೂ ಗಮನಹರಿಸಬೇಕಾಗಿದೆ.

**ನಲಿ–ಕಲಿ ತರಗತಿಯಲ್ಲಿ ಕಲಿಕಾ ಚೇತರಿಕೆ ಉಪಕ್ರಮದ ರಚನೆ:**

ನಮಗೆಲ್ಲ ತಿಳಿದಿರುವ ಹಾಗೆ, ನಲಿ–ಕಲಿಯ 1ನೇ ಏಣಿಯ ವಿದ್ಯಾರ್ಥಿಗಳು ಈಗ ತಾನೆ ಶಾಲೆಗೆ ಪ್ರವೇಶಿಸುವುದರಿಂದ, ಅವರಿಗೆ ಶಾಲಾವಾತಾವರಣಕ್ಕೆ ಮತ್ತು ಕಲಿಕೆಗೆ ಅಣಿಗೊಳಿಸುವುದು ಪ್ರತಿ ವರ್ಷವು ಅವಶ್ಯಕ ಮತ್ತು ಅನಿವಾರ್ಯವಾಗಿರುತ್ತದೆ. 1ನೇ ಏಣಿಯ ವಿದ್ಯಾರ್ಥಿಗಳನ್ನು ಕಲಿಕೆಗೆ ಅಣಿಗೊಳಿಸಲು, ಕಲಿಕಾ ಚೇತರಿಕೆಯ ಅಡಿಯಲ್ಲಿ, ಶಾಲೆ ಪ್ರಾರಂಭವಾದ ಮೊದಲ 72 ದಿನಗಳಲ್ಲಿ "ವಿದ್ಯಾಪ್ರವೇಶ" ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಮತ್ತು ಇದನ್ನು ನಿಪುಣ್ ಭಾರತ್‌ನ ಮೂರು ಗುರಿ ಉದ್ದೇಶದ ಆಶಯದಿಂದ ಕೈಗೆತ್ತಿಕೊಳ್ಳಲಾಗಿದೆ ಹಾಗೂ ನಿಪುಣ್ ಭಾರತ್ ಮಿಷನ್ ವರದಿಯ ಆಧಾರವಾಗಿ ರಚಿಸಲಾಗಿದೆ.

**ಸೂಚನೆ:** ನಮ್ಮ ರಾಜ್ಯದಲ್ಲಿ ನಲಿ–ಕಲಿ ಪದ್ಧತಿ ಜಾರಿಯಿರುವುದರಿಂದ, 2 ಮತ್ತು 3ನೇ ತರಗತಿಯ ವಿದ್ಯಾರ್ಥಿಗಳನ್ನು ಪ್ರತ್ಯೇಕ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಲು ಕಷ್ಟ ಸಾಧ್ಯವಾಗುವುದರಿಂದ, ಅವರನ್ನು ಕೂಡ ವಿದ್ಯಾ ಪ್ರವೇಶ ಕಾರ್ಯಕ್ರಮ ಅನುಷ್ಠಾನದಡಿಯಲ್ಲಿ ನೋಡುವುದು ಅವಶ್ಯಕವಾಗಿದೆ. ಜೊತೆಗೆ, ಕಳೆದ ಎರಡು ವರ್ಷ ತರಗತಿಗಳು ಹೆಚ್ಚಿನ ಸಮಯ ನಿರಂತತೆ ಇಲ್ಲದಿರುವ ಕಾರಣ, ಪ್ರಸ್ತುತ 2 ಮತ್ತು 3ನೇ ತರಗತಿಯಲ್ಲಿರುವ ಮಕ್ಕಳು ಕೂಡ 1ನೇ ತರಗತಿಯಲ್ಲಿದ್ದಾಗ, ಕಲಿಕೆಗೆ ಅಣಿಗೊಳ್ಳಿಸುವ ಪ್ರಯತ್ನಗಳು ಸರಿಯಾಗಿ ಆಗದಿರುವುದರಿಂದ, ಆ ತರಗತಿಯ ವಿದ್ಯಾರ್ಥಿಗಳನ್ನು ವಿದ್ಯಾ ಪ್ರವೇಶದ ಅನುಷ್ಠಾನ ಅವರಿಗೂ ಕೂಡ ಮಾಡುವ ಇಲಾಖೆಯ ನಿರ್ಧಾರ ಸರಿಯಾಗಿದೆ.

ವಿದ್ಯಾ ಪ್ರವೇಶ ಮುಗಿದ ನಂತರ ಮುಂದಿನ 1 ತಿಂಗಳು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನಕ್ಕೆ ಒತ್ತು ಕೊಡುವುದು, ತದನಂತರದ 6 ತಿಂಗಳು ನಲಿ–ಕಲಿ ಬೋಧನಾ ವಿಧಾನದಲ್ಲಿ ಕಲಿಕಾ ಚೇತರಿಕೆಯನ್ನು ಇಲಾಖೆಯ ಆದೇಶದಂತೆ ತರಗತಿಯಲ್ಲಿ ಅಳವಡಿಸಿಕೊಳ್ಳುವುದು.

**ನಲಿ–ಕಲಿ ತರಗತಿ ಅಡಿಯಲ್ಲಿ ಕಲಿಕಾಚೇತರಿಕೆ ರಚನೆಯನ್ನು ಈ ಕೆಳಗಿನ ಚಿತ್ರಣದ ಮೂಲಕ ಸಾಮನ್ಯೀಕರಿಸಲಾಗಿದೆ.**

**3 ತಿಂಗಳು: ವಿದ್ಯಾಪ್ರವೇಶ (ನಿಪುಣ್ ಭಾರತ್)** + **1 ತಿಂಗಳು: ಬುನಾದಿ ಸಾಕ್ಷರತೆ & ಸಂಖ್ಯಾಜ್ಞಾನ (ನಿಪುಣ್ ಭಾರತ್)** + **6 ತಿಂಗಳು: ನಲಿ–ಕಲಿಯಲ್ಲಿ ಕಲಿಕಾ ಚೇತರಿಕೆ**

**4–9ನೇ ತರಗತಿ ಅಡಿಯಲ್ಲಿ ಕಲಿಕಾ ಚೇತರಿಕೆ ಉಪಕ್ರಮದ ರಚನೆ:**

4ರಿಂದ 9ನೇ ತರಗತಿಯಲ್ಲಿ ಡಿ.ಎಸ್.ಆರ್.ಟಿ.ಸಿ ರಚಿಸಿದ ವಿಷಯವಾರು ಕಲಿಕಾ ಫಲಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ಶೈಕ್ಷಣಿಕ ವರ್ಷದ ಕಲಿಕಾ ಫಲಗಳೊಂದಿಗೆ ಹಿಂದಿನ ಎರಡು ತರಗತಿಯ ಕಲಿಕಾ ಫಲಗಳನ್ನು, ಆದ್ಯತೀಕರಿಸುವ ಮೂಲಕ ಕಲಿಕಾ ಫಲಗಳನ್ನು ಮರುಹೊಂದಾಣಿಸಲಾಗಿದೆ. ಇದರ ಜೊತೆಗೆ, ಪ್ರಸ್ತುತ ಸಂದರ್ಭದಲ್ಲಿ, ಹಲವು ವಿದ್ಯಾರ್ಥಿಗಳು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನವನ್ನು ಮರೆತಿರುವುದರಿಂದ, ಹಾಗೂ ಎನ್.ಇ.ಪಿ–2020 ಖಾತ್ರಿಪಡಿಸಿದಂತೆ, ಈ ಶೈಕ್ಷಣಿಕ ವರ್ಷವು ನಿಪುಣ್ ಭಾರತ್ ಆಶಯದಂತೆ, ಮೂಲಸಾಕ್ಷರತೆ ಮತ್ತು ಸಂಖ್ಯಾಜ್ಞಾನಕ್ಕೂ ಗಮನಹರಿಸಬೇಕಾಗಿದೆ ಮತ್ತು ಇದಕ್ಕೆ ಪೂರಕವಾಗಿ ಕಲಿಕಾ ಫಲಗಳನ್ನು ಕಲಿಕಾ ಚೇತರಿಕೆಯ ರಚನೆಯ ಸಾಹಿತ್ಯದಲ್ಲಿಯೂ ಪ್ರತಿ ತರಗತಿಯಲ್ಲಿ ಅಳವಡಿಸಲಾಗಿದೆ.

**4–9ನೇ ತರಗತಿ ಅಡಿಯಲ್ಲಿ ಕಲಿಕಾಚೇತರಿಕೆ ರಚನೆಯನ್ನು ಈ ಕೆಳಗಿನ ಚಿತ್ರಣದ ಮೂಲಕ ಸಾಮನ್ಯೀಕರಿಸಲಾಗಿದೆ.**

**ಬುನಾದಿ ಸಾಕ್ಷರತೆ & ಸಂಖ್ಯಾಜ್ಞಾನ (ನಿಪುಣ್ ಭಾರತ)** + **ಹಿಂದಿನ ಎರಡು ತರಗತಿಗಳ ವಿಷಯವಾರು ಆದ್ಯತಾ ಕಲಿಕಾ ಫಲಗಳು** + **ಪ್ರಸ್ತುತ ತರಗತಿಯ ವಿಷಯವಾರು ಆದ್ಯತಾ ಕಲಿಕಾ ಫಲಗಳು**

## ಶಿಕ್ಷಣ ಸಂದರ್ಭದಲ್ಲಿ ಕಲಿಕಾ ಫಲಗಳು – ಏನು? ಏಕೆ? ಹೇಗೆ?

**(ಕಲಿಕಾಫಲಗಳು=ಕಲಿಕಾಫಲಿತಗಳು/ಫಲಿತಾಂಶಗಳು/ನಿರೀಕ್ಷೆಗಳು/ನಿರೀಕ್ಷಿತ ಕಲಿಕಾ ಫಲಗಳು)**

**ಕಲಿಕಾ ಫಲಗಳು ಎಂದರೆ,** ಶಿಕ್ಷಣದಲ್ಲಿ ಕಲಿಯುವ ವಿವಿಧ ವಯೋಮಾನದ/ಹಂತದ ಮಕ್ಕಳು ಕಲಿಕೆಯ ಮೂಲಕ ಆಯಾ ಹಂತ/ವಯೋಮಾನಕ್ಕೆ ಅನುಗುಣವಾಗಿ ಕಲಿತು ಗಳಿಸಿಕೊಳ್ಳಲೇಬೇಕಾದ ಕೌಶಲಗಳು, ಸಾಮರ್ಥ್ಯಗಳು, ವಿಷಯಾಂಶಗಳು ಹಾಗೂ ಮೌಲ್ಯಗಳು. **ಕಲಿಕಾ ಫಲಗಳು** ಮಕ್ಕಳು ಆಯಾ ಹಂತದ ಪಠ್ಯ ಹಾಗೂ ಪಠ್ಯೇತರ ಅಭ್ಯಾಸಗಳ ಮೂಲಕ ಗಳಿಸಿಕೊಳ್ಳಲೇಬೇಕಾದ ಶೈಕ್ಷಣಿಕ ಸಾಧನೆಯನ್ನು ಒಳಗೊಂಡಿರುತ್ತವೆ. ಭಾಷೆಯ ಸಂಬಂಧವಾಗಿ ಭಾಷಾ ಕೌಶಲಗಳ ಬಳಕೆಯಲ್ಲಿ ವ್ಯಕ್ತಿಯು ಪಡೆಯಬಹುದಾದ ಸಾರ್ಥಕತೆಯನ್ನೇ **'ಕಲಿಕಾ ಫಲ'**ವೆಂದು ತೆಗೆದುಕೊಳ್ಳಬೇಕಾಗುತ್ತದೆ. ಇದು ಸಾರ್ವಕಾಲಿಕ ಹಾಗೂ ಸಾರ್ವದೇಶಿಕ ಮಾನಕವಾಗಬಲ್ಲುದು. ಇದರ ಜೊತೆಗೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆ ಮತ್ತು ವ್ಯಕ್ತಿತ್ವ ನಿರ್ಮಾಣವನ್ನು ಮಾಪನಕ್ಕೆ ಒಳಪಡಿಸಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಭಾಷಾ ಸಿದ್ಧಿಯನ್ನು ಅಳೆಯಲು ಭಾಷಾ ಕುಶಲತೆ ಮತ್ತು ವ್ಯಕ್ತಿತ್ವ ಲಕ್ಷಣಗಳಾದ ಕೆಲವು ಅಂಶಗಳನ್ನು ಇಲ್ಲಿ ಗುರುತಿಸಲಾಗಿದೆ.

ಶಿಕ್ಷಣದ ಗುಣಮಟ್ಟವನ್ನು ಖಾತರಿಪಡಿಸಲು **ಕಲಿಕಾ ಫಲಗಳು** ಅವಶ್ಯಕ. ಇವು ಬೋಧನೆ ಮತ್ತು ಕಲಿಕೆಯನ್ನು ಸಮರೂಪಿಯಾಗಿಸುವುದಕ್ಕೆ ಬದಲಾಗಿ ಆ ಪ್ರಕ್ರಿಯೆಗಳಿಗೆ ಹೆಚ್ಚಿನ ಆಯಾಮವನ್ನು ಒದಗಿಸುತ್ತವೆ. ಮಾನಕಗಳು ಸಂರಚನಾತ್ಮಕ ಸಿದ್ಧಾಂತಗಳನ್ನು ಆಧರಿಸಿರುತ್ತವೆ. ಈ ಸಿದ್ಧಾಂತದ ಅನ್ವಯ ವಿದ್ಯಾರ್ಥಿಗಳು ವೈವಿಧ್ಯಮಯವಾಗಿ ಕಲಿಯುತ್ತಾರೆ ಹಾಗೂ ಕಲಿವಿನ ವೇಗ ವಿಭಿನ್ನವಾಗಿರುತ್ತದೆ. **ಕಲಿಕಾ ಫಲಗಳು** ಶಿಕ್ಷಣದ ಹಾಗೂ ವಿದ್ಯಾರ್ಥಿ ಸಮುದಾಯಕ್ಕೆ ಅನೇಕ ಅನುಕೂಲತೆಗಳನ್ನು ಮಾಡಿಕೊಡುತ್ತವೆ. ಅವುಗಳು ವಿದ್ಯಾರ್ಥಿಗಳ ಕಲಿವಿನ ನಿರೀಕ್ಷಿತ ಮಟ್ಟವನ್ನು ಹೆಚ್ಚಿಸುವುದರೊಂದಿಗೆ ತರಗತಿಯ ಪ್ರಕ್ರಿಯೆಗಳಲ್ಲಿ ಪಠ್ಯವಸ್ತುವಿನ ರಚನೆಯಲ್ಲಿ ಬದಲಾವಣೆಯನ್ನು ಅಪೇಕ್ಷಿಸುತ್ತವೆ. ಅವುಗಳು ಚಟುವಟಿಕೆಯಾಧಾರಿತ ಕಲಿವಿನೊಂದಿಗೆ ಅತಿ ಸಂಕೀರ್ಣವಾದ ಪರಿಕಲ್ಪನೆಗಳನ್ನು ಮೂಡಿಸುವ ನಿರ್ದಿಷ್ಟವಾದ (ವಸ್ತುನಿಷ್ಠವಾದ) ಬೋಧನಾ ವಿಧಾನಗಳಿಗೆ ಚೌಕಟ್ಟನ್ನು ನೀಡುತ್ತವೆ.

**ಕಲಿಕಾ ಫಲಗಳು** ವಿದ್ಯಾರ್ಥಿಗಳು ಒಂದು ತರಗತಿಯ ಕೊನೆಯ ವೇಳೆಗೆ ಗರಿಷ್ಟ ಏನನ್ನು ಕಲಿತಿರಬೇಕೆಂಬುದನ್ನು ವಿವರಿಸುತ್ತವೆ. ಕಲಿಕಾ ಫಲಗಳು ಗುಣಮಟ್ಟವನ್ನು ಖಾತ್ರಿಗೊಳಿಸುವುದು ಮತ್ತು ಗುರಿಗಳೆಡೆಗೆ ಕಲಿಕೆಯನ್ನು ನಿರ್ದೇಶಿಸುವುದು ಅಥವಾ ಸೂಚಿಸುವುದೇ ಆಗಿದೆ. ಜ್ಞಾನ ಸಂರಚನಾ ಕಲಿಕಾ ಸಿದ್ಧಾಂತ ಹಾಗೂ ವಿದ್ಯಾರ್ಥಿಯೋರ್ವ ಕಲಿಯಲು ಇರುವ ವೈವಿಧ್ಯಮಯ ಕಲಿಕೆಯ ದಾರಿಗಳ ಗುರುತಿಸುವಿಕೆ ಮತ್ತು ಕಲಿಕೆಯ ವೇಗಗಳ ನೆಲೆಯನ್ನಾಧರಿಸಿ **ಕಲಿಕಾ ಫಲಗಳು** ರೂಪುಗೊಂಡಿವೆ.

**ಕಲಿಕಾ ಫಲಗಳು** ವಿದ್ಯಾರ್ಥಿಗಳ ಪ್ರಗತಿಯಲ್ಲಿ ಪ್ರಮುಖವಾಗಿರುವ ಹಾಗೂ ಪರಿಣಾಮಕಾರಿಯಾಗಿರುವ ಸೂಚ್ಯಾಂಕಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ. ವಿದ್ಯಾರ್ಥಿಗಳು, ಉಪಾಧ್ಯಾಯರು ಸ್ಪಷ್ಟವಾಗಿ ತಮ್ಮ ನಿಲುವುಗಳಿಗೆ ತಕ್ಕಂತೆ ಸ್ಪಂದಿಸುವುದಕ್ಕೆ ಅತ್ಯಂತ ಸಹಕಾರಿಯಾಗಿರುತ್ತದೆ. ಮಾನಕಗಳು ಪರಿಣಾಮಕಾರಿಯಾಗಿ ಮೌಲ್ಯಯುತವಾಗಬೇಕೆಂದರೆ, ಶಿಕ್ಷಣಾಸಕ್ತರು ಅದನ್ನು ಅನುಷ್ಠಾನಗೊಳಿಸಬೇಕು. ಮಾನಕಗಳ ಬಗ್ಗೆ ಆಳವಾದ ಚಿಂತನೆಯಿಂದ, ಅನುಷ್ಠಾನದಿಂದ ಕಲಿಕಾ–ಬೋಧನಾ ಪ್ರಕ್ರಿಯೆಯಲ್ಲೇ ಆಮೂಲಾಗ್ರ ಬದಲಾವಣೆಯನ್ನು ನಿರೀಕ್ಷಿಸಬಹುದು.

### ಇದು ಏಕೆ?

ಇಷ್ಟು ದಿನ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಕಡೆಗೆ ಹೆಚ್ಚುಗಮನ ನೀಡುತ್ತಿದ್ದೆವು. ಆ ಪ್ರಕಾರ ಒಂದು ಹಂತದ ಗುರಿಯನ್ನು ತಲುಪುವಾಗ ಮತ್ತೆ ನಮಗೆ ಮುಖ್ಯ ಅನಿಸಿದ್ದು ಮಕ್ಕಳನ್ನು ಕೇವಲ ಶಾಲೆಗೆ ತರುವುದು ಮುಖ್ಯವಲ್ಲ, ತಂದ ನಂತರ ಅವರನ್ನು ಇಲ್ಲೇ ಉಳಿಸಿಕೊಂಡು ಅವರಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವುದು. ಮುಂದೆ ಅವರೇ ಶಿಕ್ಷಣವನ್ನು ತಮ್ಮ ಹಕ್ಕಾಗಿಸಿಕೊಂಡು ಸ್ವತಂತ್ರ ಕಲಿಕಾರ್ಥಿಗಳನ್ನಾಗಿ ಮಾಡುವುದು. ಆ ನಿಟ್ಟಿನಲ್ಲಿ ಶಿಕ್ಷಕ ಕೇಂದ್ರಿತ ಶಿಕ್ಷಣದಿಂದ ಈಗ ನಾವು ಮಕ್ಕಳ ಕೇಂದ್ರಿತ ಶಿಕ್ಷಣಕ್ಕೇ ಪಾದಾರ್ಪಣೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ನೀಡುವ ಜವಬ್ದಾರಿ ನಮಗಿದೆ, ಹಾಗೆಯೇ ಗುಣಮಟ್ಟದ ಶಿಕ್ಷಣವನ್ನು ಪಡೆಯುವ ಹಕ್ಕು ಪ್ರತಿಯೊಬ್ಬ ಮಗುವಿಗೂ ಇದೆ. ಅದಕ್ಕಾಗಿ ಮಕ್ಕಳ ವಯೋಮಿತಿ ಮತ್ತು ಅವರ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರತಿಯೊಂದು ಮಗುವು ಗುಣಮಟ್ಟದ ಶಿಕ್ಷಣ ಪಡೆಯಲು ಮಕ್ಕಳ ಅವಶ್ಯಕ ಕಲಿಕಾ ಮಟ್ಟವನ್ನು ಗುರುತಿಸಿ ಅವರ ಸಾಧನೆಯನ್ನು ಕಾಲಕಾಲಕ್ಕೆ ಅಳೆಯಬೇಕೆಂಬುದನ್ನು ರಾಷ್ಟ್ರೀಯ ಶಿಕ್ಷಣ ನೀತಿ 1986ರ ವರದಿಯಲ್ಲಿ ಮತ್ತು ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005ರಲ್ಲಿ ಪ್ರಸ್ತಾಪಿಸಿದ್ದರೂ ತರಗತಿವಾರು ಕಲಿಕಾ ಫಲಗಳನ್ನು ಹಾಗೂ ಪಠ್ಯಕ್ರಮದ ಆಶಯಗಳ ಬಗ್ಗೆ ಹೆಚ್ಚಿನ ಬೆಳಕನ್ನು ಹರಿಸಲು ಎನ್.ಸಿ.ಆರ್.ಟಿಯು 2016ರಲ್ಲಿ 1–8ನೇ ತರಗತಿಗೆ ತರಗತಿವಾರು, ವಿಷಯವಾರು ಕಲಿಕಾ ಫಲಗಳನ್ನು ಹೊರತಂದಿದೆ. ಇದನ್ನು ಅನುಸರಿಸಿ ಆಯಾ ರಾಜ್ಯದ ಡಿ.ಎಸ್.ಆರ್.ಟಿಯು ತಮ್ಮ ಕಲಿಕಾ ಫಲಗಳನ್ನು ರೂಪಿಸಿವೆ.

ಕರ್ನಾಟಕದ ಸಂದರ್ಭದಲ್ಲಿ ಪ್ರಸ್ತುತ ರಾಜ್ಯ ಪಠ್ಯಕ್ರಮ ಚೌಕಟ್ಟು–2005, ಎನ್ ಸಿ ಆರ್ ಟಿ ಕಲಿಕಾ ಫಲಗಳು–2016 ಮತ್ತು ಎನ್.ಸಿ.ಆರ್.ಟಿ ಕಲಿಕಾ ಮಾನಕಗಳು (ಸಾಮರ್ಥ್ಯಗಳು)–2014 ಇವನ್ನು ಆಧರಿಸಿ ಮೂರು ಆಯಾಮಗಳಲ್ಲಿ; ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಪ್ರತ್ಯೇಕವಾಗಿ ಕಲಿಕಾ ಫಲಗಳನ್ನು ರಚಿಸಿ ತಲುಪಿಸುವ ಕಾರ್ಯ ನಡೆಯುತ್ತಲಿದೆ.

**ಶಿಕ್ಷಕರಿಗೆ:** ಮಕ್ಕಳ ಕಲಿಕಾ ಪ್ರಕ್ರಿಯೆಯಲ್ಲಿ ಅವರ ಜೊತೆಗೆ ಇರುವ ಮತ್ತು ಅವರಿಗೆ ಮಾರ್ಗದರ್ಶಿಸಬಹುದಾದ/ಸಹಕರಿಸಬಹುದಾದ ಶಿಕ್ಷಕರಿಗೆ ಗುರಿಯನ್ನು ಸ್ಪಷ್ಟಪಡಿಸುತ್ತದೆ. ಯಾವ ಪ್ರಕ್ರಿಯೆಗಳನ್ನು ಕೈಗೊಳ್ಳಬಹುದು ಮತ್ತು ಅದನ್ನು ಹೇಗೆ ವಿನ್ಯಾಸಗೊಳಿಸಬಹುದು ಎಂಬುದನ್ನು ತಿಳಿಯಲು ಹಾಗೂ ಪರಿಮಾಣಾತ್ಮಕವಾಗಿ ಮಗುವಿನ ಪ್ರಗತಿಯನ್ನು ನಿರ್ಣಯಿಸುತ್ತದೆ. ಈ ಕಲಿಕಾ ಫಲಗಳನ್ನು ಅರ್ಥಮಾಡಿಕೊಂಡು ಏನು ಮತ್ತು ಹೇಗೆ ಕಲಿಸಬೇಕು ಎಂಬುದಕ್ಕೆ ಇದನ್ನೊಂದು ಕೈಪಿಡಿಯಂತೆ ಶಿಕ್ಷಕರು ಬಳಸಬಹುದಾಗಿದೆ. ತರಗತಿವಾರು, ವಿಷಯವಾರು ಮತ್ತು ಬೋಧನಾ ವಿಧಾನಗಳನ್ನು ಒಳಗೊಂಡ ಕಲಿಕಾ ಫಲಿತಾಂಶಗಳು ಮತ್ತು ಶೈಕ್ಷಣಿಕ ಪ್ರಕ್ರಿಯೆಯ ಪುಸ್ತಕಗಳ ಮೂಲಕ ಮತ್ತು ತರಬೇತಿ ನೀಡುವ ಮೂಲಕ ಅರ್ಥಮಾಡಿಸಲಾಗುತ್ತದೆ.

**ಮಕ್ಕಳಿಗೆ:** ಇದು ವರ್ಷದಲ್ಲಿ ತಾವು ಏನು ಕಲಿಯಬೇಕು. ಅದನ್ನು ವರ್ಷದ ಕೊನೆಯಲ್ಲಿ ಸಾಧಿಸಬೇಕಾದ ಅವಶ್ಯಕತೆಗಳ ತಿಳಿಸುವ ಉದ್ದೇಶದಿಂದ ಇದು ಪ್ರಮುಖವಾಗುತ್ತದೆ. ಮಕ್ಕಳು ತಮ್ಮ ಸ್ವತಂತ್ರ ಕಲಿಕೆಗೆ ಮತ್ತು ಕಲಿಕೆಗೆ ಹೆಚ್ಚು ಉದ್ದೇಶ ಪೂರ್ವಕರಾಗಲು ಹಾಗೂ ತಮ್ಮ ಸ್ವಂತ ಕಲಿಕೆಗೆ ಮೇಲ್ವಿಚಾರಣೆ ಮಾಡಲು ಸಹಾಯ ಮಾಡುತ್ತದೆ. ತರಗತಿವಾರು, ವಿಷಯವಾರು ಸಾಧಿಸಬೇಕಾದ ಕಲಿಕಾಂಶಗಳನ್ನು ಗೋಡೆ ಚಾರ್ಟಗಳನ್ನು ಹಾಕುವ ಮೂಲಕ ಮಕ್ಕಳು ಕಲಿಕಾ ಫಲಗಳನ್ನು ಗಮನಿಸಿ ಮುಂದೆ ಸಾಗುವಂತೆ ಸೂಚನೆ ನೀಡಲಾಗುತ್ತದೆ.

**ಪೋಷಕರಿಗೆ:** ಮಕ್ಕಳ ಕಲಿಕೆಯಲ್ಲಿ ಮಧ್ಯಸ್ಥರಾಗಿ ಮಕ್ಕಳು ಕಲಿಕೆಯಲ್ಲಿ ಅಭಿವೃದ್ಧಿಯೊಂದಲು ಏನು ಕಲಿಯಬೇಕು ಮತ್ತು ಅದಕ್ಕೆ ತಾವು ಹೇಗೆ ಸಹಕರಿಸಿ ಮಗುವನ್ನು ಯಶಸ್ಸಿನತ್ತ ಕೊಂಡೊಯ್ಯಬಹುದು ಎಂಬುದನ್ನು ತಿಳಿಯಲು ಸಹಕಾರಿಯಾಗುತ್ತದೆ. ಪ್ರಸರಣ: ತರಗತಿವಾರು ಮತ್ತು ವಿಷಯವಾರು ಕಲಿಕಾ ಫಲಗಳ ಬ್ರೋಚರ್ಸ್ ಮೂಲಕ ಮತ್ತು ಮಕ್ಕಳ ಪ್ರಗತಿ ನೋಡುವ ಮೂಲಕ ತಿಳಿಯ ಪಡಿಸಲಾಗುತ್ತದೆ.

**ನಿದಿಷ್ಟ ಕಲಿಕಾ ಫಲಗಳನ್ನು ಹೊಂದುವುದರಿಂದ ಆಗುವ ಪ್ರಯೋಜನಗಳು:**

1) ಮಗುವಿನ ಸಾಧನೆಯನ್ನು ಅಳೆಯಬಹುದಾದ ಚಿತ್ರಣವನ್ನು ನೀಡುತ್ತದೆ.
2) ಮಗುವು ಎಷ್ಟು ಕಲಿತಿದೆ ಎಂದು ತಿಳಿಯಲು ಸಹಾಯಕವಾಗುತ್ತದೆ.
3) ನಿರೀಕ್ಷಿತ ಕಲಿಕಾ ಫಲಗಳನ್ನು ಮಗು ಸಾಧಿಸದಿದ್ದಲ್ಲಿ ಇದಕ್ಕೆ ಕಾರಣಗಳನ್ನು ಕಂಡುಹಿಡಿಯಲು ಸಹಾಯಕವಾಗುತ್ತದೆ.
4) ಇದನ್ನಾಧರಿಸಿ ಮಗುವಿಗೆ ಮಾರ್ಗದರ್ಶನ ಮಾಡಲು ಸಹಾಯಕವಾಗುತ್ತದೆ.
5) ಪೋಷಕರ ಸಹಕಾರದೊಂದಿಗೆ ಶಿಕ್ಷಕರು ಮಗುವಿನ ಕಲಿಕೆಯನ್ನು ಅನುಕೂಲಿಸಲು ಸಹಾಯಕವಾಗುತ್ತದೆ.
6) ಮಗುವಿನ ಆಸಕ್ತಿಯನ್ನು ತಿಳಿದು ಅದರ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಿರುವ ಪ್ರಯತ್ನವನ್ನು ಮಾಡಲು ಸಹಾಯಕವಾಗುತ್ತದೆ.

**ಕಲಿಕಾ ಫಲಗಳು ಮತ್ತು ಕಲಿಕಾ ಮಾನಕ/ಸೂಚಕಗಳ ಸಹಸಂಬಂಧ:**

**(ಪ್ರಥಮ ಭಾಷಾ ತರಗತಿ ಕಲಿಕೆಯ ಕೆಲವು ಉದಾಹರಣೆಗಳನ್ನು ಆಧರಿಸಿ)**

ಮಕ್ಕಳು ಆಯಾ ವಯೋಮಾನ ಅಥವಾ ತರಗತಿಗೆ ಅನುಗುಣವಾಗಿ ವಿವಿಧ ಜ್ಞಾನ ಶಾಖೆಗಳ ಅಥವಾ ವಿಷಯಗಳಲ್ಲಿ ಗಳಿಸಬೇಕಾದ ಜ್ಞಾನದ ಮೊತ್ತವನ್ನು ಅಪೇಕ್ಷಿತ ಸಾಮರ್ಥ್ಯ ಎಂದು ಹೇಳಲಾಗುತ್ತಿದ್ದು, ಆ ಸಾಮರ್ಥ್ಯಗಳು ವಿಶಾಲ ದೃಷ್ಟಿಯಲ್ಲಿ ಗಳಿಸಲೇಬೇಕಾದ ಕಲಿಕೆಗಳನ್ನು ಹೇಳುತ್ತದೆ. ಆ ಜ್ಞಾನದ ಮೊತ್ತವನ್ನು ಗಳಿಸಲು ಬೇಕಾದಂತೆ ನಿರ್ದಿಷ್ಟ ಅಂಶಗಳನ್ನು ಸಂಯೋಜಿತವಾಗಿ ಹೇಳುವ ವಿಷಯವೇ ಕಲಿಕಾಫಲವಾಗಿರುತ್ತದೆ. ಅಂದರೆ ವಿಶಾಲವ್ಯಾಪ್ತಿಯಲ್ಲಿ ಹೇಳಿರುವ ಸಾಮರ್ಥ್ಯವನ್ನು ಸಾಧಿಸಲು ಕಲಿಕಾಫಲ ಸಂಯೋಜಿತ ರೀತಿಯಲ್ಲಿ ಸ್ಪಷ್ಟತೆ ನೀಡುವ ವಾಕ್ಯರೂಪವಾಗಿರುತ್ತದೆ. **ಸಾಮರ್ಥ್ಯವು** ಉದಾಹರಣೆಗೆ: (ಮಾತನಾಡುವ ಕ್ಷೇತ್ರದಲ್ಲಿ) - **ಸೃಜನಾತ್ಮಕ ಸ್ವಯಂ ಅಭಿವ್ಯಕ್ತಿ ಮತ್ತು ಸಂಭಾಷಣೆ ಕೌಶಲಗಳನ್ನು ಗಳಿಸುವುದು,** ಎಂದಾಗಿದ್ದರೆ **ಕಲಿಕಾ ಫಲವು: ವಿವಿಧ ಉದ್ದೇಶಗಳಿಗನುಸಾರವಾಗಿ ತಮ್ಮ ಭಾಷೆ/ಶಾಲೆಯ ಭಾಷೆಯ ಪ್ರಯೋಗ ಮಾಡುತ್ತಾರೆ ಮತ್ತು ಮಾತನಾಡುವರು** ಎಂದು ಸಂಯೋಜಿಸಲಾಗುತ್ತದೆ. ಅಂದರೆ ಸಾಮರ್ಥ್ಯ ಹೇಳಿದ ವಿಶಾಲ ದೃಷ್ಟಿಯ ಕಲಿಕೆಯನ್ನು ತರಗತಿ

ಪ್ರಕ್ರಿಯೆಯಲ್ಲಿ ಸಾಧಿಸಬೇಕಾದರೆ ತರಗತಿಯಲ್ಲಿ ನಡೆಯುವ ಪ್ರಕ್ರಿಯೆಗಳಿಗೆ ಸಂವಾದಿಯಾಗಿ ಅರ್ಥವಾಗುವ ರೀತಿಯಲ್ಲಿ ಸಂಯೋಜಿತವಾಗಿ ಪುನಃರಚಿಸಿ ಕಲಿಕಾ ಫಲವನ್ನು ನಿರ್ಧರಿಸಲಾಗಿರುತ್ತದೆ.

ಕಲಿಕಾ ಫಲ ಮೇಲ್ಕಂಡ ಮಾತನಾಡುವ ಕ್ಷೇತ್ರದ ಸಾಮರ್ಥ್ಯವಾದ **ಸೃಜನಾತ್ಮಕ ಸ್ವಯಂ ಅಭಿವ್ಯಕ್ತಿ ಮತ್ತು ಸಂಭಾಷಣೆ ಕೌಶಲಗಳನ್ನು ಗಳಿಸುವುದು,** ಎಂದು ನೋಡುವಾಗ ಅದು ನೇರ ಮಾತನಾಡುವ ಕ್ಷೇತ್ರಕ್ಕೆ ಮಾತ್ರ ಹೇಳಲಾಗಿದೆ ಎಂದು ಕಂಡುಬಂದರೂ ಕಲಿಕಾ ಫಲವಾಗಿ ಸಂಯೋಜಿತವಾಗಿ ಮಾರ್ಪಟ್ಟಾಗ ಅದರಲ್ಲಿ ಮಾತನಾಡುವ ಕ್ಷೇತ್ರದ ಸಾಧನೆಗೆ ಆಲಿಸುವ ಕ್ಷೇತ್ರದ ಅಂಶಗಳನ್ನೂ ಗಮನದಲ್ಲಿ ಇಟ್ಟುಕೊಂಡು ಸಂಯೋಜಿಸಲಾಗಿದೆ. ಸಾಮರ್ಥ್ಯ ಅಪೇಕ್ಷಿಸುವಂತೆ ಮಗುವಿನ ಸೃಜನಾತ್ಮಕ ಅಭಿವ್ಯಕ್ತಿ ಮತ್ತು ಸಂಭಾಷಣೆಯ ಕೌಶಲಗಳ ಅಭಿವೃದ್ಧಿಗೆ ಆಲಿಸಿ ಗ್ರಹಿಸವುದು ಮತ್ತು ಅದನ್ನು ಮನನ ಮಾಡಿಕೊಂಡಿರುವುದು ಹಾಗೂ ಅದನ್ನು ತಾನು ಅಭಿವ್ಯಕ್ತಿಸುವಾಗ ಸಹಸಂಬಂಧಿಕರಿಸಿಕೊಂಡು ಭಾಷಾ ಪ್ರಯೋಗ ಮಾಡಬೇಕಾಗುತ್ತದೆ ಎಂಬುದನ್ನು ಕಲಿಕಾ ಫಲವನ್ನು ವಿಶ್ಲೇಷಣೆ ಮಾಡಿದಾಗ ತಿಳಿಯುತ್ತದೆ. ಅಂದರೆ ಸದರಿ ಕಲಿಕಾ ಫಲ ಈಡೇರಲು ತರಗತಿ ಪ್ರಕ್ರಿಯೆ **ಎಲ್ಲಾ ವಿದ್ಯಾರ್ಥಿಗಳನ್ನು (ವಿವಿಧ ಕಲಿಕಾ ಹಂತದ ಮಕ್ಕಳೊಂದಿಗೆ) ವೈಯಕ್ತಿಕವಾಗಿ, ಸಾಮೂಹಿಕವಾಗಿ ಚಟುವಟಿಕೆ ಮಾಡಲು ಅವಕಾಶ ನೀಡಿ ಪ್ರೋತ್ಸಾಹಿಸುವುದು ಏಕೆಂದರೆ ಅವರು ಎಲ್ಲಾ ವಿದ್ಯಾರ್ಥಿಗಳಿಗೂ, ವಿವಿಧ ಕಲಿಕಾ ಹಂತದ ಮಕ್ಕಳೊಂದಿಗೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಕಲಿಕಾ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶವನ್ನೂ ಕಲ್ಪಿಸುವುದು ಆಗಬೇಕಾಗುತ್ತದೆ.**

ಕಲಿಕಾ ಫಲ ಈಡೇರಿಸಲು ಕಲಿಕಾ ಮಾನಕಗಳು ಅಥವಾ ಸೂಚಕಗಳನ್ನು ಗುರುತಿಸಿಕೊಂಡು ಅದಕ್ಕೆ ತಕ್ಕ ಕಲಿಕಾ ಚಟುವಟಿಕೆಗಳನ್ನು ತರಗತಿಯಲ್ಲಿ ಏರ್ಪಡಿಸಬೇಕಾಗುತ್ತದೆ. ಮೇಲೆ ವಿವರಿಸಿದ ಕಲಿಕಾ ಫಲಕ್ಕೆ ಕಲಿಕಾ ಮಾನಕ/ಸೂಚಕಗಳನ್ನು ಗಮನಿಸುವಾಗ **ಸರಳ ಜನಪ್ರಿಯ ಗೀತೆ ಮತ್ತು ಕಥೆಗಳನ್ನು ಅರ್ಥ ಮಾಡಿಕೊಳ್ಳುವುದು. ಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆ, ಸೂಚನೆಗಳನ್ನು ಅರ್ಥ ಮಾಡಿಕೊಳ್ಳುವುದು. ಸ್ವರಭಾರ ಮತ್ತು ಅಭಿನಯದ ಮೂಲಕ ಸರಳ ಗೀತೆ, ಕಥೆಗಳನ್ನು ಹೇಳುವುದು. ಪರಿಚಿತ ವಸ್ತು, ವಿಷಯಗಳ ಬಗ್ಗೆ ಪ್ರಶ್ನಿಸುವುದು ಹಾಗೂ ಸರಳ ಪ್ರಶ್ನೆಗಳಿಗೆ ವಾಕ್ಯದಲ್ಲಿ ಉತ್ತರಿಸುವುದು. ಈ ರೀತಿಯ ಚಟುವಟಿಕೆಗಳು ನಡೆಯಬೇಕಾಗುತ್ತವೆ. ಈ ರೀತಿಯ ಕಲಿಕಾ ಮಾನಕಗಳನ್ನು ಆಧರಿಸಿದ ತರತಿಯಲ್ಲಿ ಮಕ್ಕಳಿಗೆ ಚಟುವಟಿಕೆಗಳು ಮತ್ತು ಅವಕಾಶಗಳನ್ನು ಏರ್ಪಡಿಸಬೇಕಾದುದು ಇಲ್ಲಿ ಅಪೇಕ್ಷಣೀಯವಾಗುತ್ತದೆ.**

ಉದಾಹರಣೆಗೆ: ಕಲಿಕಾ ಫಲ ಮತ್ತು ಕಲಿಕಾ ಸೂಚಕ/ಮಾನಕಗಳ ಸಂಬಂಧವನ್ನು ಈ ಕೆಳಗಿನ ಕೋಷ್ಟಕದ ಮೂಲಕವೂ ಅರ್ಥೈಸಿಕೊಳ್ಳಬಹುದು.

| **ತರಗತಿ** | **ಕಲಿಕಾ ಫಲ** | **ಕಲಿಕಾಮಾನಕ/ಸೂಚಕ** | **ಕಲಿಕಾ ಪ್ರಕ್ರಿಯೆ** |
|---|---|---|---|
| 1 | ವಿವಿಧ ಉದ್ದೇಶಗಳಿಗನುಸಾರವಾಗಿ ತಮ್ಮ ಭಾಷೆ/ಶಾಲೆಯ ಭಾಷೆಯ ಪ್ರಯೋಗ ಮಾಡುತ್ತಾರೆ ಮತ್ತು ಮಾತನಾಡುವರು. | **ಸರಳ ಜನಪ್ರಿಯ ಗೀತೆ ಮತ್ತು ಕಥೆಗಳನ್ನು ಅರ್ಥ ಮಾಡಿಕೊಳ್ಳುವುದು.** | • ಬಳಕೆಯಲ್ಲಿರುವ ಜನಪ್ರಿಯ ಗೀತೆಗಳನ್ನು ಆಲಿಸಲು ಅವಕಾಶ ಕಲ್ಪಿಸುವುದು.<br>ಉದಾ:- ಗೋವಿನ ಹಾಡು. ಬಾರೋ ಇಲ್ಲಿ ಹರಿ ಇತ್ಯಾದಿ.<br>• ಸರಳ ಮಕ್ಕಳ ನೀತಿಕಥೆಗಳನ್ನು ಆಲಿಸಲು ಅವಕಾಶ ಕಲ್ಪಿಸುವುದು. ಉದಾ:- ಪಂಚತಂತ್ರ ಮತ್ತು ಇತರೇ ಮಕ್ಕಳ ಕಥೆಗಳು. |
| 4 | ಆಲಿಸಿದ ಸಾಹಿತ್ಯ ರಚನೆಗಳ ವಿಷಯವಸ್ತು, ಘಟನೆ, ಚಿತ್ರ, ಪಾತ್ರ, ಶಿರೋನಾಮೆ, ಮುಂತಾದವುಗಳ ಬಗ್ಗೆ ಮಾತಾನಾಡುತ್ತಾರೆ. ಪ್ರಶ್ನೆ ಕೇಳುತ್ತಾರೆ ತನ್ನ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾರೆ ಮತ್ತು ತನ್ನ ಮಾತಿಗೆ ತಾರ್ಕಿಕ ಕಾರಣ ನೀಡುತ್ತಾರೆ. | • **ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆ, ಸರಳ ಭಾಷಣ ಮತ್ತು ಸಂವಾದ ಮತ್ತು ಸೂಚನಾ ಸರಣಿಗಳನ್ನು ಅರ್ಥಮಾಡಿ ಕೊಳ್ಳುವುದು.**<br>• **ಆಲಿಸಿದ ವಿಷಯದ ಸರಳ ಕಾರ್ಯ ಕಾರಣ ಸಂಬಂಧಗಳನ್ನು ಗುರ್ತಿಸುವುದು.** | • ತರಗತಿಯಲ್ಲಿ ಸಂಭಾಷಣೆ, ಸಂವಾದ ಮತ್ತು ಭಾಷಣಗಳನ್ನು ಏರ್ಪಡಿಸಿ ಆಲಿಸಿ ಅರ್ಥೈಸಿಕೊಳ್ಳಲು ಅವಕಾಶ ನೀಡುವುದು.<br>• ಅಪರಿಚಿತ ಸನ್ನಿವೇಶಗಳಲ್ಲಿನ 2 ಪಾತ್ರಗಳ ನಡುವಿನ ಸಂಭಾಷಣೆಗಳನ್ನು ಆಲಿಸಿ ಅರ್ಥೈಸಿಕೊಳ್ಳಲು ಅವಕಾಶ ನೀಡುವುದು.<br>• ಆಟಗಳನ್ನು ಹಾಗೂ ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ |

| | | | |
|---|---|---|---|
| | | | ತರುವ ಸಲುವಾಗಿ ಸೂಚನಾ ಸರಣಿಗಳನ್ನು ನೀಡಿ, ಗ್ರಹಿಸಿ ಪ್ರತಿಕ್ರಿಯಿಸಲು ಅವಕಾಶ ನೀಡುವುದು.<br>• ಆಲಿಸಿದ ಪಠ್ಯದಲ್ಲಿನ ವಿಚಾರ ಸರಣಿ ಮತ್ತು ಘಟನಾವಳಿಗಳನ್ನು ಗುರುತಿಸಲು ಅವಕಾಶ ಕಲ್ಪಿಸುವುದು.<br>• ವಿಚಾರ ಸರಣಿಗಳಲ್ಲಿರುವ ಕಾರ್ಯಕಾರಣ ಸಂಬಂಧಗಳನ್ನು ಗುರುತಿಸಲು ಅವಕಾಶ ಕಲ್ಪಿಸುವುದು. |

**ಕಲಿಕಾ ಫಲಗಳ ಮರುಹೊಂದಾಣಿಕೆ:**

ಈ ಮೇಲೆ ಹೇಳಿದಂತೆ, ಹಿಂದಿನ ಎರಡು ಶೈಕ್ಷಣಿಕ ವರ್ಷಗಳಲ್ಲಿ ಗಳಿಸಿಕೊಳ್ಳಬೇಕಾದ ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳು ಪೂರ್ಣ ಪ್ರಮಾಣದಲ್ಲಿ ಗಳಿಸಿಕೊಳ್ಳಲು ಸಾಧ್ಯವಾಗಿಲ್ಲ. ಶೈಕ್ಷಣಿಕ ಪ್ರಕ್ರಿಯೆಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳಲು ಸಾಧ್ಯವಾಗದ ಕಾರಣ ವಿದ್ಯಾರ್ಥಿಗಳು ಕೆಲವು ಸಾಮರ್ಥ್ಯಗಳನ್ನು ಮರೆತಿದ್ದಾರೆ, ಕೆಲವನ್ನು ಕಲಿಯಲು ಸಾಧ್ಯವಾಗಿಲ್ಲ, ಇನ್ನೂ ಕೆಲವನ್ನು ಕಲಿಯಲೇಬೇಕಿದೆ. ಎರಡು ಶೈಕ್ಷಣಿಕ ವರ್ಷಗಳ ಕಲಿಕಾ ಅಂತರದೊಂದಿಗೆ ತರಗತಿ ಪ್ರವೇಶಿಸಿದ ಮಗುವಿಗೆ ಆಯಾ ತರಗತಿಯ ಪಾಠವನ್ನು ಬೋಧಿಸಲು ಆರಂಭಿಸಿದರೆ ಮಗುವಿಗೆ ಏನನ್ನು ಕಲಿಯಲು ಸಾಧ್ಯವಾಗುವುದಿಲ್ಲ ಎಂಬುದು ನಮಗೆಲ್ಲರಿಗೂ ತಿಳಿದಿರುವ ವಿಷಯ. ಈ ಕಲಿಕಾ ಅಂತರವನ್ನು ಸರಿದೂಗಿಸಲು ಸಾಕಷ್ಟು ವರ್ಷಗಳೇ ಬೇಕಾಗುತ್ತದೆ ಎಂಬುದನ್ನು ಸಮೀಕ್ಷೆಗಳು ಹೇಳುತ್ತಿವೆ. ಆದರೆ ಲಭ್ಯವಿರುವ ಸಮಯ ಮಿತಿಯೊಳಗೆ ನಮಗೆ ಸಾಧ್ಯವಾದಷ್ಟು ಮಕ್ಕಳ ಈ ಕಲಿಕಾ ಅಂತರವನ್ನು ಸರಿದೂಗಿಸುವ ಪ್ರಯತ್ನವನ್ನು ಮಾಡಲೇಬೇಕು. ಆದ್ದರಿಂದ ಮಕ್ಕಳಲ್ಲಿ ಈಗಾಗಲೇ ಎರಡು ವರ್ಷದಿಂದ ಆದ ನಷ್ಟವನ್ನು ಪರಿಗಣಿಸಿ, ಕಲಿಕಾ ಅಂತರವನ್ನು ಸರಿದೂಗಿಸಲು, ಪ್ರಸ್ತುತ ವರ್ಷಕ್ಕೆ ಕಲಿಕಾಫಲಗಳನ್ನು ಮರುಹೊಂದಾಣಿಕೆ ಮಾಡಲಾಗಿದೆ. ಹಾಗಾಗಿ ವಿದ್ಯಾರ್ಥಿಗಳು ಬುನಾದಿ ಸಾಕ್ಷರತೆ ಮತ್ತು ಗಣಿತೀಯ ಜ್ಞಾನ ಹಾಗೂ ಎಲ್ಲ ವಿಷಯಗಳಲ್ಲಿ ಹಿಂದಿನ ಎರಡು ವರ್ಷಗಳಲ್ಲಿ ಗಳಿಸಿಕೊಳ್ಳಲೇಬೇಕಾದ ಆದ್ಯತಾ ಕಲಿಕಾ ಫಲಗಳು ಮತ್ತು ಪ್ರಸಕ್ತ ಶೈಕ್ಷಣಿಕ ವರ್ಷದ ಕಲಿಕಾ ಫಲಗಳನ್ನು ಗಳಿಸಿಕೊಂಡು ನಿರೀಕ್ಷಿತ ಮಟ್ಟದ ಕಲಿಕೆಯನ್ನು ಸಾಧಿಸಬೇಕು ಎಂಬುದೇ ಕಲಿಕಾ ಚೇತರಿಕೆಯ ಕೇಂದ್ರ ಆಶಯ. ಅರ್ಥಾತ್ ಪ್ರತೀ ವಿದ್ಯಾರ್ಥಿಯು ಎಲ್ಲ ವಿಷಯಗಳಲ್ಲಿ ಮೂರು ವರ್ಷಗಳ ಕಲಿಕೆಯನ್ನು ನಿರೀಕ್ಷಿತ ಮಟ್ಟವನ್ನು ತಲುಪಬೇಕು ಎನ್ನುವುದಾಗಿದೆ. ಈ ನಿಟ್ಟಿನಲ್ಲಿ **'ಕಲಿತದ್ದನ್ನು ಮರೆತದ್ದು, ಕಲಿಯದೇ ಬಿಟ್ಟದ್ದು, ಪ್ರಸ್ತುತ ಕಲಿಯಬೇಕಾದ್ದು'** ಸಾಮರ್ಥ್ಯಗಳನ್ನು ಗಳಿಸುವಂತೆ ಮಾಡಲು ಶೈಕ್ಷಣಿಕ ಪ್ರಕ್ರಿಯೆ ಹಾಗೂ ಕಲಿಕಾ ಪ್ರಕ್ರಿಯೆಯಲ್ಲಿ ಬದಲಾವಣೆ ಅಗತ್ಯವಾಗಿದೆ.

ಇದನ್ನು ಮನಗಂಡು ಕಲಿಕಾ ಚೇತರಿಕೆ 2022–23 ವರ್ಷದ ಶೈಕ್ಷಣಿಕ ಪ್ರಕ್ರಿಯೆಯನ್ನು ಮರು ಹೊಂದಿಸಿಕೊಳ್ಳಲಾಗಿದೆ. ಮೂಲತಃ ಈ ಹೊಂದಾಣಿಕೆ ಕಲಿಕಾ ಫಲಗಳ ಆಯ್ಕೆಯಲ್ಲಿ ನಡೆಯುವುದರಿಂದ ಇದನ್ನು **'ಕಲಿಕಾ ಫಲಗಳ ಮರು ಹೊಂದಾಣಿಕೆ'** ಎಂದು ಕರೆಯಬಹುದು. **ಸದರಿ ವರ್ಷದ ಶೈಕ್ಷಣಿಕ ಪ್ರಕ್ರಿಯೆಯು ಹಿಂದಿನ ಎರಡು ತರಗತಿಗಳ ಆಯ್ದ ಅತ್ಯಗತ್ಯ ಕಲಿಕಾಫಲಗಳು ಹಾಗೂ ಪ್ರಸಕ್ತ ತರಗತಿಯ ಆಯ್ದ ಅತ್ಯಗತ್ಯ ಕಲಿಕಾಫಲಗಳನ್ನು ಒಳಗೊಂಡಿರುತ್ತದೆ.** ಈ ಬೋಧನಾ ಕಲಿಕಾ ಪ್ರಕ್ರಿಯೆಯ ಮರು ವಿನ್ಯಾಸ ಕಾರ್ಯವು ಪಠ್ಯಪುಸ್ತಕಗಳ ಪಾಠಗಳನ್ನು ಸುಲಭವಾಗಿ ತೆಗೆದುಹಾಕದೆ ಮಕ್ಕಳ ಮುಂದಿನ ಶೈಕ್ಷಣಿಕ ಕಲಿಕೆಗೆ ಅನುಕೂಲವಾಗುವಂತಹ ಕಲಿಕಾ ಫಲಗಳನ್ನು ಗಮನದಲ್ಲಿರಿಸಿಕೊಂಡು ತರಗತಿ ಚಟುವಟಿಕೆಗಳನ್ನು ರೂಪಿಸಲಾಗಿದೆ. ಇದರೊಟ್ಟಿಗೆ ಮಕ್ಕಳ ಸಾಮಾಜಿಕ–ಭಾವನಾತ್ಮಕ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪಠ್ಯಕ್ರಮವನ್ನು ಮರು ವಿನ್ಯಾಸಗೊಳಿಸಲಾಗಿದೆ. ಪ್ರತೀ ತರಗತಿಗೆ ಹಿಂದಿನ ಎರಡು ವರ್ಷದ ಅತ್ಯಗತ್ಯ ಕಲಿಕಾಫಲಗಳು, ಪ್ರಸ್ತುತ ತರಗತಿಯ ಅಗತ್ಯ ಕಲಿಕಾಫಲಗಳು, ಬುನಾದಿ ಸಾಕ್ಷರತೆ ಮತ್ತು ಗಣಿತಕ್ಕೆ ಸಂಬಂಧಿಸಿದ ಕಲಿಕಾಫಲಗಳನ್ನು ಒಳಗೊಂಡಂತೆ ಕಲಿಕಾ ಸಂಪನ್ಮೂಲಗಳನ್ನು ಸಿದ್ಧಪಡಿಸಲಾಗಿದೆ.

ಕೆಳಗಿನ ಪಟ್ಟಿಯು ಕಲಿಕಾ ಫಲಗಳ ಆಯ್ಕೆಯ ಸ್ವರೂಪದ ಬಗ್ಗೆ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ.

| ತರಗತಿ | ಪೂರ್ವ ತರಗತಿ (ಉದಾ: 3ನೇ) | ಪೂರ್ವ ತರಗತಿ (ಉದಾ: 4ನೇ) | ಪ್ರಸಕ್ತ ತರಗತಿ (ಉದಾ: 5ನೇ) |
|---|---|---|---|
| ಶೈಕ್ಷಣಿಕ ವರ್ಷ | 2020–21 | 2021–22 | 2022–23 |
| ಕಲಿಕಾ ಫಲಗಳು | ಇಲ್ಲಿ ಪೂರ್ವ ತರಗತಿಯ ಒಟ್ಟು ಕಲಿಕಾಫಲಗಳಲ್ಲಿ ಅತ್ಯಗತ್ಯ ಕಲಿಕಾಫಲಗಳನ್ನು ಆದ್ಯತೆಯ ಮೇರೆಗೆ ಆಯ್ಕೆ ಮಾಡಲಾಗಿರುತ್ತದೆ. | ಇಲ್ಲಿ ಪೂರ್ವ ತರಗತಿಯ ಒಟ್ಟು ಕಲಿಕಾಫಲಗಳಲ್ಲಿ ಅತ್ಯಗತ್ಯ ಕಲಿಕಾಫಲಗಳನ್ನು ಆದ್ಯತೆಯ ಮೇರೆಗೆ ಆಯ್ಕೆ ಮಾಡಲಾಗಿರುತ್ತದೆ. | ಇಲ್ಲಿ ಪ್ರಸಕ್ತ ತರಗತಿಯ ಒಟ್ಟು ಕಲಿಕಾಫಲಗಳಲ್ಲಿ ಅತ್ಯಗತ್ಯ ಕಲಿಕಾಫಲಗಳನ್ನು ಆದ್ಯತೆಯ ಮೇರೆಗೆ ಆಯ್ಕೆ ಮಾಡಲಾಗಿರುತ್ತದೆ, ಮತ್ತು ಅವನ್ನು ಕ್ರೋಢೀಕರಿಸಲಾಗಿರುತ್ತದೆ. |

## ಬೋಧನಾ ಕಲಿಕಾ ಪ್ರಕ್ರಿಯೆಯ ಮರು ವಿನ್ಯಾಸದಲ್ಲಿ FLN:

ಕಲಿಕಾ ಅಂತರದಲ್ಲಿ ಮುಖ್ಯವಾಗಿ ಭಾಷೆಯಲ್ಲಿ ಅರ್ಥಪೂರ್ಣ ಓದು, ಬರೆವಣಿಗೆ ಮತ್ತು ಗಣಿತದಲ್ಲಿ ಸಂಖ್ಯಾಜ್ಞಾನವನ್ನು ಒಳಗೊಂಡ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಮೊದಲಾದ ಮೂಲಕ್ರಿಯೆಗಳ ಕಲಿಕೆ. ಈ ಬುನಾದಿ ಸಾಮರ್ಥ್ಯಗಳು ಮುಂದಿನ ಕಲಿಕೆಯ ಆಧಾರವಾಗಿವೆ ಎಂಬುದನ್ನು ಈಗಾಗಲೇ ತಿಳಿದಿದ್ದೇವೆ. ಈಗಿನ ಪರಿಸ್ಥಿತಿಯನ್ನು ಗಮನಿಸಿದಾಗ ಬಹುತೇಕ (1 ರಿಂದ 9) ಎಲ್ಲಾ ತರಗತಿಯ ಮಕ್ಕಳಲ್ಲಿಯೂ ಈ ಕಲಿಕಾ ಅಂತರ ಕಂಡುಬರುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020 ಕೋವಿಡ್ ಸಾಂಕ್ರಾಮಿಕಕ್ಕೆ ಮೊದಲೇ FLN ಪ್ರಾಮುಖ್ಯತೆಯನ್ನು ಎತ್ತಿಹಿಡಿದಿತ್ತು, ಅಂದರೆ ಸಮೀಕ್ಷೆಗಳು ಹೇಳುವ ಪ್ರಕಾರ ಭಾರತದಲ್ಲಿ ಐದು ಕೋಟಿಗೂ ಹೆಚ್ಚು ಮಕ್ಕಳು 4ನೇ ತರಗತಿ ತಲುಪಿದರೂ ಅರ್ಥಪೂರ್ಣವಾಗಿ ಓದುವ ಹಾಗೂ ಗಣಿತದ ಸರಳ ಸಮಸ್ಯೆಗಳನ್ನು ಬಿಡಿಸಲು ಕಷ್ಟಪಡುತ್ತಿದ್ದಾರೆ ಎಂಬುದು ಈ ಸಾಂಕ್ರಾಮಿಕ ಪರಿಸ್ಥಿತಿಯಲ್ಲಿ ಇನ್ನೂ ಬಿಗಡಾಯಿಸಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020 ಈ FLN ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಲು NIPUN Bharat ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮ ಈಗಾಗಲೇ ಅನುಷ್ಠಾನ ಹಂತದಲ್ಲಿ ಇದೆ. ನಾವು ನಿಪುಣ್ ಭಾರತ್ ನಿರ್ದಿಷ್ಟ ಪಡಿಸಿರುವ ಕಲಿಕಾ ಫಲಗಳನ್ನು ನೋಡಿ, ಅವುಗಳಲ್ಲಿ ಈ ಕಲಿಕಾ ಚೇತರಿಕೆ ಉಪಕ್ರಮಕ್ಕೆ ಅಗತ್ಯವಾದ ಕಲಿಕಾ ಫಲಗಳನ್ನು ಮರುಹೊಂದಿಸಿ ಸಾಹಿತ್ಯವನ್ನು (ಶಿಕ್ಷಕರ ಕೈಪಿಡಿ ಮತ್ತು ಮಕ್ಕಳ ಕಲಿಕಾ ಹಾಳೆ) ರಚಿಸಲಾಗಿದೆ. 1 ರಿಂದ 9ನೇ ತರಗತಿಯವರೆಗೆ ಈ FLN ಸಾಹಿತ್ಯ ಅಗತ್ಯವಿರುವುದರಿಂದ ಮೊದಲಿಗೆ ಒಂದರಿಂದ ಮೂರನೇ ತರಗತಿಯ ಮಕ್ಕಳಿಗೆ FLN ಮೂಲಾಧಾರವಾಗಿರುವುದರಿಂದ ಅವರಿಗೆ ಮೊದಲು ಸಾಹಿತ್ಯವನ್ನು ತಯಾರಿಸಿ ಅದೇ ಸಾಹಿತ್ಯವನ್ನು ಇತರ ತರಗತಿಯ ಮಕ್ಕಳಿಗೂ ಉಪಯೋಗಿಸುವ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ.

## 1 ರಿಂದ 3ನೇ ತರಗತಿಯ ಮೂರು ವಿಷಯಗಳ ಕಲಿಕಾ ಫಲಗಳ ಮರುಹೊಂದಾಣಿಕೆಯ ತಾರ್ಕಿಕತೆ:

'ನಿಪುಣ್ ಭಾರತ್ ಮಿಷನ್'ನಲ್ಲಿ ಪ್ರಸ್ತಾಪಿಸಿರುವ ಭಾಷೆ ಮತ್ತು ಗಣಿತ ವಿಷಯದ ಕಲಿಕಾ ಫಲಗಳನ್ನು ಸ್ವೀಕರಿಸಲಾಗಿದೆ. ಅದರ ತಾರ್ಕಿಕ ಹಿನ್ನೆಲೆಯನ್ನು ನೋಡುವುದಾದರೆ.

- 2022–23ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪೂರಕವಾಗಿ ವಿದ್ಯಾಪ್ರವೇಶ ಎಂಬ ವಿನೂತನ ಶಾಲಾ ಸಿದ್ಧತಾ ಮಾಡ್ಯೂಲನ್ನು ಪರಿಚಯಿಸಲಾಗುತ್ತಿದೆ. ಮೂರು ತಿಂಗಳ ಶಾಲಾ ಸಿದ್ಧತಾ ಕಾರ್ಯಕ್ರಮವು 01ನೇ ತರಗತಿಗೆ ಪೂರಕವಾಗಿ ರೂಪುಗೊಂಡಿದ್ದರೂ, ಎಲ್ಲಾ ಹಂತದ ತರಗತಿಗಳಿಗೂ ಶಾಲಾ ಸಿದ್ಧತೆ ಎಂಬುದು ಅನಿವಾರ್ಯ ಮತ್ತು ಅತ್ಯಗತ್ಯ. ಏಕೆಂದರೆ, ಪ್ರತೀ ಮಗುವೂ ಕಲಿಕಾ ಕಂದರವನ್ನು ಅನುಭವಿಸಿ ಬಂದಿದೆ ಎಂಬುದನ್ನು ನಾವು ಒಪ್ಪಲೇಬೇಕು. ಮಗುವನ್ನು ಶಾಲಾ ಸನ್ನಿವೇಶಕ್ಕೆ ಸಿದ್ಧಗೊಳಿಸುವ ಸಂದರ್ಭದಲ್ಲಿ ಅನೇಕ ಅಂಶಗಳ ಕಡೆಗೆ ನಾವು ಗಮನ ಹರಿಸಬೇಕಾಗುತ್ತದೆ. ಕೇವಲ ಭೌತಿಕವಾಗಿ ತರಗತಿ ಪ್ರಕ್ರಿಯೆಗೆ ಹೊಂದಿಸುವುದು ಮಾತ್ರವಲ್ಲದೆ, ಭಾವನಾತ್ಮಕವಾಗಿ ಹಾಗೂ ಸಾಮಾಜಿಕವಾಗಿ ಹೊಂದಿಸುವುದು ತೀರಾ ಅಗತ್ಯ. ಈ ಹಿನ್ನೆಲೆಯಲ್ಲಿ 03 ಮುಖ್ಯ ಗುರಿಗಳನ್ನು ಪ್ರಧಾನವಾಗಿರಿಸಿಕೊಂಡು ವಿದ್ಯಾ ಪ್ರವೇಶ ಕಾರ್ಯಕ್ರಮವು ರೂಪುಗೊಂಡಿದೆ. ಅವುಗಳೆಂದರೆ
    - **ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯ ನಿರ್ವಹಣೆಯಲ್ಲಿ ಮಕ್ಕಳು ಸಮರ್ಥರಾಗುವುದು.**
    - **ಪರಿಣಾಮಕಾರಿ ಸಂವಹನಕಾರರಾಗಿ ಮಕ್ಕಳು ರೂಪುಗೊಳ್ಳುವುದು.**

- **ಸಕ್ರಿಯ ಕಲಿಕಾರ್ಥಿಗಳಾಗಿ, ಪರಿಚಿತ ಪರಿಸರದೊಂದಿಗೆ ಮಕ್ಕಳು ಸಂಪರ್ಕ ಸಾಧಿಸುವುದು.**

- ಈ ಮೂರು ಮುಖ್ಯ ಗುರಿಗಳು ಪರಸ್ಪರ ಅವಲಂಭಿತವಾಗಿದ್ದು, ಸಾಮರ್ಥ್ಯಗಳ ಬೆಳವಣಿಗೆಗೆ ಅವಕಾಶ ನೀಡುವುದರ ಜೊತೆಗೆ ಮಕ್ಕಳ ಸಮಗ್ರ ವಿಕಾಸಕ್ಕೆ ಅನುವು ಮಾಡಿಕೊಡುತ್ತವೆ. 'ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯ' ಎಂಬ ಗುರಿಯು ಭೌತಿಕ ಅಭಿವೃದ್ಧಿ, ಪೌಷ್ಠಿಕತೆ ಹಾಗೂ ಉತ್ತಮ ಆರೋಗ್ಯಕರ ಅಭ್ಯಾಸದ ಸಾಮರ್ಥ್ಯಗಳ ಬೆಳವಣಿಗೆ ಕಡೆಗೆ ಗಮನ ಹರಿಸುತ್ತದೆ. 'ಪರಿಣಾಮಕಾರಿ ಸಂವಹನಕಾರ' ಎಂಬ ಗುರಿಯು ಕೇವಲ ಭಾಷಾ ಸಂವಹನ ಕೌಶಲದ ಕಡೆಗೆ ಗಮನ ಹರಿಸದೆ, ಸಂಖ್ಯಾ ಜ್ಞಾನದ ಬೌದ್ಧಿಕ ಅಂಶಗಳು ಮತ್ತು ಭಾವನಾತ್ಮಕ ಅಭಿವೃದ್ಧಿಯ ಅಂಶಗಳ ಸಂವಹನದ ಕಡೆಗೂ ಗಮನ ಹರಿಸುತ್ತದೆ. 'ಸಕ್ರಿಯ ಕಲಿಕಾರ್ಥಿ'ಗಳು ಎಂಬ ಗುರಿಯು ಸ್ಥಳಿಯ ಪರಿಸರದೊಂದಿಗೆ ತಕ್ಷಣವೇ ಪ್ರತಿಸ್ಪಂದನೆಗೊಳ್ಳಲು ಹಾಗೂ ಪರಿಸರದ ಅರಿವಿನೊಂದಿಗೆ ಬುನಾದಿ ಶಿಕ್ಷಣ ಹಂತದ ಕಲಿಕಾಂಶಗಳನ್ನು ಗ್ರಹಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ, ಈ ಗುರಿಗಳಲ್ಲಿನ ಸಾಮರ್ಥ್ಯಗಳು ಹಾಗೂ ಕಲಿಕಾ ಫಲಗಳು ಭೌತಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸ್ವಾಭಾವಿಕ ಪರಿಸರದ ಪ್ರತಿಸ್ಪಂದನೆಗೆ ಮತ್ತು ಬೆಳವಣಿಗೆ ವಿಫುಲ ಅವಕಾಶಗಳನ್ನು ಒದಗಿಸಿಕೊಡುತ್ತವೆ.

## 4-9ನೇ ತರಗತಿಯ ಕಲಿಕಾ ಫಲಗಳ ಮರುಹೊಂದಾಣಿಕೆಯ ತಾರ್ಕಿಕತೆ:

ಪ್ರತಿ ವಿಷಯದಲ್ಲಿ ತರಗತಿವಾರು ನಿರ್ದಿಷ್ಟಪಡಿಸಿದ ಕಲಿಕಾ ಫಲಗಳು ಇವೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಶಿಕ್ಷಕರು ಕಲಿಕಾ ಫಲಗಳನ್ನು ತರಗತಿವಾರು ಗಮನಿಸಿ ಬೋಧನಾ ಕಲಿಕಾ ಪ್ರಕ್ರಿಯೆಗಳನ್ನು ರೂಪಿಸಿಕೊಂಡು ಹೋಗುತ್ತಿದ್ದರು. ಆದರೆ, ಈಗ ಮಕ್ಕಳಲ್ಲಿ ಕಲಿಕಾ ಅಂತರ ಉಂಟಾಗಿರುವುದರಿಂದ ಆಯಾ ತರಗತಿಯ ವಿಷಯಗಳಿಗೆ ನಿರ್ದಿಷ್ಟಪಡಿಸಿದ ಕಲಿಕಾ ಫಲಗಳನ್ನು ಕಲಿಸಲು ಸಾಧ್ಯವಿಲ್ಲ, ಆದ್ದರಿಂದ ನಾವು ಪ್ರತಿ ತರಗತಿಯ ವಿಷಯದ ಹಿಂದಿನ ಎರಡು ವರ್ಷ ಮತ್ತು ಪ್ರಸ್ತುತ ತರಗತಿಯ ವಿಷಯದ ತೀರ ಅಗತ್ಯವೆನಿಸಿದ ಕಲಿಕಾ ಫಲಗಳನ್ನು ಮರುಹೊಂದಿಸಿ ನೀಡಲಾಗಿದೆ. ಇದರಿಂದಾಗಿ ಕಡಿಮೆ ಸಮಯದಲ್ಲಿ ಅಗತ್ಯ ಕಲಿಕಾ ಫಲಗಳನ್ನು FLN ಜೊತೆಯಲ್ಲಿ ಸಾಧಿಸಲು ಸಹಾಯವಾಗುತ್ತದೆ. ಹೀಗೆ ಪ್ರತಿ ತರಗತಿಯ ವಿಷಯದಲ್ಲಿ 10 ರಿಂದ 15 ಕಲಿಕಾ ಫಲಗಳನ್ನು ನಿರ್ದಿಷ್ಟಪಡಿಸಲಾಗಿದೆ ಮತ್ತು ಇವುಗಳನ್ನು ಡಿ.ಎಸ್.ಇ.ಆರ್.ಟಿ ನಿಗದಿಪಡಿಸಿರುವ ಕಲಿಕಾ ಫಲಗಳಿಂದ ಆಯ್ಕೆ ಮಾಡಲಾಗಿದೆ.

## ಕನ್ನಡ ಭಾಷೆಯ ಕಲಿಕಾ ಫಲಗಳ ಆಯ್ಕೆಯ ಹಿಂದಿನ ತಾರ್ಕಿಕತೆ:

ಭಾಷಾ ಕಲಿಕೆಯ ತತ್ವಗಳು, ಭಾಷೆಯನ್ನು ಅನುಕೂಲಿಸುವ ಪ್ರಕ್ರಿಯೆ ಮತ್ತು ಮಗುವಿನ ಕಲಿಕಾ ಪ್ರಗತಿ ಇವೇ ಮೊದಲಾದ ಆಯಾಮಗಳಿಂದ ಕಲಿಕಾಫಲಗಳನ್ನು ಪ್ರಮುಖವಾಗಿ ಕೆಳಗಿನ ತಾರ್ಕಿಕ ಅಂಶಗಳು ಅಥವಾ ಮಾನದಂಡಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ. ಕಲಿಕಾಫಲಗಳ ಆಯ್ಕೆಯನ್ನು ತರಗತಿ 1 ರಿಂದ 9 ರವರೆಗೆ ಮಾಡಲಾಗಿದೆ.

- ಇಲ್ಲಿ ಆಯ್ಕೆ ಮಾಡಲಾಗಿರುವ ಕಲಿಕಾ ಫಲಗಳು ಭಾಷಾಕಲಿಕೆಯ ನಾಲ್ಕು ಕ್ಷೇತ್ರಗಳನ್ನು ಒಳಗೊಂಡಿದೆ.
    - ಆಲಿಸಿ ಅರ್ಥಮಾಡಿಕೊಳ್ಳುವುದು ಮತ್ತು ಆಲೋಚಿಸಿ ಮಾತನಾಡುವುದು (ಇಲ್ಲಿ ಆಲಿಸುವಿಕೆ ಮತ್ತು ಮಾತುಗಾರಿಕೆ ಕೌಶಲಗಳನ್ನು ಸಂಯುಕ್ತಗೊಳಿಸಲಾಗಿದೆ)
    - ಓದುಗಾರಿಕೆ (ಗ್ರಹಿಕೆ ಮತ್ತು ಸ್ಪಂದನೆ)
    - ಬರವಣಿಗೆ (ಅರ್ಥಬದ್ಧ ಲಿಖಿತ ಅಭಿವ್ಯಕ್ತಿ)
    - ಸೃಜನಶೀಲತೆ (ಕ್ರಿಯಾತ್ಮಕ ಅಭಿವ್ಯಕ್ತಿ, ಅಭಿರುಚಿ, ಆಸಕ್ತಿ, ಮೆಚ್ಚುಗೆ, ಪ್ರಶಂಸೆ ಇತ್ಯಾದಿ)
- ಕಲಿಕಾ ಫಲಗಳನ್ನು ಆಯ್ಕೆ ಮಾಡುವಾಗ ಪ್ರಮುಖ ಮೂರು ಥೀಮುಗಳನ್ನು ಒಳಗೊಂಡಿದೆ.
    - ಭಾಷಾ ಪ್ರಕಾರಯುಕ್ತ ಜ್ಞಾನ ಸಂಬಂಧಿ ಉನ್ನತ ಕೌಶಲಗಳು (Cognitive),
    - ಭಾಷೆಗೆ ಸಂಬಂಧಿಸಿದ ಸಾಮಾಜಿಕ ಅರಿವಿನ ಜ್ಞಾನ ಕೌಶಲಗಳು (Socio cognitive)
    - ಭಾಷಾ ಸಂರಚನೆ ಮತ್ತು ಬಳಕೆ (Language structure and Grammer)
- ಪ್ರತೀ ತರಗತಿಗೂ ಪೂರ್ವ ತರಗತಿ 1, 2 ಮತ್ತು ಪ್ರಸಕ್ತ ತರಗತಿಯನ್ನು ಒಳಗೊಂಡಂತೆ ಸಂಯುಕ್ತ ಕಲಿಕಾಫಲಗಳ ಪಟ್ಟಿಯನ್ನು ರಚಿಸಿಕೊಳ್ಳಲಾಗಿದೆ. ಜೊತೆಗೆ
- **'ಸರಳತೆಯಿಂದ ಸಂಕೀರ್ಣತೆಯೆಡೆಗೆ'** ತತ್ವದ ಆಧಾರದ ಮೇಲೆ ಕಲಿಕಾಫಲಗಳನ್ನು ಆಯ್ಕೆ ಮಾಡಿ ಅವುಗಳನ್ನು ಅನುಕ್ರಮಗೊಳಿಸಲಾಗಿದೆ.
- ಆಯ್ಕೆ ಮಾಡಿಕೊಂಡ ಕಲಿಕಾಫಲಗಳು ವೈವಿಧ್ಯಮಯವಾಗಿರುವಂತೆ ನೋಡಿಕೊಳ್ಳಲಾಗಿದೆ.

- ಪ್ರಸಕ್ತ ತರಗತಿಗೆ ಗುರುತಿಸಿಕೊಂಡ ಕಲಿಕಾಫಲಕ್ಕೆ ಹಿಂದಿನ ಜ್ಞಾನಕ್ಕೆ ಅಗತ್ಯವಾಗಿ ನೆರವಾಗುವ ಕಲಿಕಾಫಲಗಳನ್ನೇ ಪೂರ್ವ ತರಗತಿಗಳಲ್ಲಿ ಗುರುತಿಸಿಕೊಳ್ಳಲಾಗಿದೆ.
- ಸುರುಳಿಯಾಕೃತಿ ಉಪಕ್ರಮವನ್ನು ಅನುಸರಿಸಿ ಕಲಿಕಾ ಫಲಗಳನ್ನು ಆಯ್ಕೆ ಮಾಡಲಾಗಿರುವುದರಿಂದ ಆಯ್ಕೆ ಮಾಡಿಕೊಂಡಿರುವ ಪೂರ್ವ ತರಗತಿಗಳು ಹಾಗೂ ಪ್ರಸ್ತುತ ತರಗತಿಗಳ ಕಲಿಕಾಫಲಗಳ ನಡುವೆ ಸಹಸಂಬಂಧವನ್ನು ಗುರುತಿಸಲಾಗಿದೆ.

## ಗಣಿತ ವಿಷಯದ ಕಲಿಕಾ ಫಲಗಳ ಆಯ್ಕೆಯ ಹಿಂದಿನ ತಾರ್ಕಿಕತೆ:

ಗಣಿತ ವಿಷಯದಲ್ಲಿಯೂ ಕೂಡ, ಕಲಿಕಾಫಲಗಳ ಮರುಹೊಂದಾಣಿಕೆ ಮಾಡುವಾಗ ಗಣಿತದ ಸ್ವರೂಪ, ಎನ್. ಸಿ. ಎಫ್. ಆಶಯಗಳು ಮತ್ತು ಶಾಲಾ ಗಣಿತದ ಉದ್ದೇಶಗಳು ಗಮನಲ್ಲಿಟ್ಟುಕೊಂಡು ರಚಿಸಲಾಗಿದೆ.

ಗಣಿತ ವಿಷಯವನ್ನು ನೋಡುವಾಗ, ಪ್ರತಿ ತರಗತಿಯ ಪರಿಕಲ್ಪನೆಗಳನ್ನು ಈ ಕೆಳಗಿನ 6 ಆದ್ಯ ಥೀಮ್‌ಗಳ ಅಡಿಯಲ್ಲಿ ನೋಡಲಾಗುತ್ತಿದೆ:

1. ಸಂಖ್ಯಾಜ್ಞಾನ
2. ಮೂಲಕ್ರಿಯೆಗಳು
3. ರೇಖಾಗಣಿತ
4. ಅಳತೆ
5. ವಿನ್ಯಾಸ
6. ದತ್ತಾಂಶ ನಿರ್ವಹಣೆ

ಈ ಥೀಮ್‌ಗಳಿಗೆ ಅನುಗುಣವಾಗಿ, ಕಲಿಕಾಫಲಗಳನ್ನು ಮರುಹೊಂದಾಣಿಕೆ ಮಾಡುವಾಗ ಹಿಂದಿನ ಎರಡು ತರಗತಿ ಮತ್ತು ಪ್ರಸ್ತುತ ತರಗತಿಯನ್ನು ಗಮನದಲ್ಲಿಟ್ಟುಕೊಟ್ಟು ರಚಿಸಲಾಗಿದೆ.

***ಸೂಚನೆ:*** *ಹಿರಿಯ ತರಗತಿಗಳಲ್ಲಿ ಸಂಖ್ಯೆಗಳು ಮತ್ತು ಮೂಲಕ್ರಿಯೆಗಳು ಒಟ್ಟೊಟ್ಟಿಗೆ ಹೋಗಿರುವುದು ಕಂಡುಬರುತ್ತದೆ. ಬಹುತೇಕ ಎಲ್ಲಾ ತರಗತಿಗಳಲ್ಲೂ ಕಲಿಕಾ ಫಲಗಳನ್ನು ಮರುಹೊಂದಾಣಿಕೆ ಮಾಡುವಾಗ ಈ ಥೀಮ್‌ಗಳ ನಿರಂತತೆಯನ್ನು ಕಾಯ್ದುಕೊಂಡಿರುವುದನ್ನು ಕಾಣಬಹುದು.*

**4** ಮತ್ತು **5**ನೇ ತರಗತಿಯ ಗಣಿತ ವಿಷಯದಲ್ಲಿ, ಪ್ರಸ್ತುತ ತರಗತಿಯ ಜೊತೆಗೆ ಹಿಂದಿನ ಎರಡು ತರಗತಿಯ ಕಲಿಕಾ ಫಲಗಳ ಆಯ್ಕೆ ಮತ್ತು ಮರುಹೊಂದಾಣಿಕೆಯನ್ನು ಈ ಕೆಳಗಿನ ಕೋಷ್ಟಕದ ಸಹಾಯದಿಂದ ತಿಳಿಯಬಹುದಾಗಿದೆ.

**ಕಲಿಕಾ ಫಲಗಳ ಆಯ್ಕೆ – 4 ನೇ ತರಗತಿ**

**ಆದ್ಯತೆ ನೀಡಿರುವ ಕಲಿಕಾಫಲಗಳು – 2ನೇ ತರಗತಿ (ಹಿಂದಿನ 2 ವರ್ಷದ ತರಗತಿ)**

| ಕ್ರ.ಸಂ | ಕಲಿಕಾ ಫಲಗಳು | ಪರಿಗಣಿಸಿದೆ/ ಪರಿಗಣಿಸಿಲ್ಲ | ಕಾರಣ |
|---|---|---|---|
| 1 | 99ರ ವರೆಗಿನ ಸಂಖ್ಯೆಗಳನ್ನು ಓದುವರು ಮತ್ತು ಬರೆಯುವರು | ಪರಿಗಣಿಸಿಲ್ಲ | 3ನೇ ತರಗತಿಯಲ್ಲಿ ಇದೇ ಕಲಿಕಾ ಫಲ ಇದ್ದು ಅಲ್ಲಿ 0 ಯಿಂದ 999 ವರೆಗಿನ ಸಂಖ್ಯೆಗಳನ್ನು ಕಲಿಸಬಹುದಾಗಿದೆ. |
| 2 | 2–ಅಂಕಿ ಸಂಖ್ಯೆಗಳನ್ನು ಹೋಲಿಸಲು ಮತ್ತು ಬರೆಯಲು ಸ್ಥಾನಬೆಲೆ ನಕ್ಷೆ ಉಪಯೋಗಿಸುವರು. | ಪರಿಗಣಿಸಿಲ್ಲ | 3ನೇ ತರಗತಿಯಲ್ಲಿ ಬಿಡಿ, ಹತ್ತು, ನೂರುರ ಸ್ಥಾನಬೆಲೆಗನುಗುಣವಾಗಿ ಸಂಖ್ಯೆಗಳನ್ನು ಹೋಲಿಸಲು ಮತ್ತು ಬರೆಯಲು ಅನುಕೂಲಿಸಬಹುದಾಗಿದೆ. |
| 3 | 2–ಅಂಕಿ ಸಂಖ್ಯೆಗಳ ಮೊತ್ತ ಮತ್ತು ವ್ಯತ್ಯಾಸವನ್ನು ಅಂದಾಜಿಸುವರು. | ಪರಿಗಣಿಸಿಲ್ಲ | 3ನೇ ತರಗತಿಯ 5ನೇ ಕಲಿಕಾ ಫಲದಲ್ಲಿ 999 ಕ್ಕೆ ಮೀರದಂತೆ ಮೊತ್ತ ಮತ್ತು ವ್ಯತ್ಯಾಸಗಳನ್ನು ಎರಡು ಸಂಖ್ಯೆಗಳ ನಡುವೆ ಅಂದಾಜಿಸುವುದನ್ನು ಮನವರಿಕೆಮಾಡಬಹುದಾಗಿದೆ. |

| | | | |
|---|---|---|---|
| 4 | ಪುನರಾವರ್ತಿತ ಸಂಕಲನದೊಂದಿಗೆ ಗುಣಾಕಾರ ಮತ್ತು ಸಮ ಹಂಚಿಕೆಯ ಮೂಲಕ ಭಾಗಾಕಾರವನ್ನು ತಿಳಿಸುವರು. | ಪರಿಗಣಿಸಿಲ್ಲ | 4ನೇ ತರಗತಿಯಲ್ಲಿ ಈ ಕಲಿಕಾಫಲವನ್ನೊಳಗೊಂಡಂತೆ ಪುನರಾವರ್ತಿತ ಸಂಕಲನದೊಂದಿಗೆ ಗುಣಾಕಾರ ಮತ್ತು ಸಮ ಹಂಚಿಕೆಯ ಮೂಲಕ ಭಾಗಾಕಾರವನ್ನು ತಿಳಿಸಬಹುದಾಗಿದೆ. |
| 5 | 2–ಅಂಕಿ ಸಂಖ್ಯೆಗಳಿಂದ ದೊಡ್ಡ ಮತ್ತು ಚಿಕ್ಕ ಸಂಖ್ಯೆಗಳನ್ನು ರೂಪಿಸುವರು. (ಪುನರಾವರ್ತಿತ ಅಂಕಿ ಮತ್ತು ಪುನರಾವರ್ತಿತವಲ್ಲದ ಅಂಕಿಗಳಿಂದ) | ಪರಿಗಣಿಸಿಲ್ಲ | 3ನೇ ತರಗತಿಯ 2ನೇ ಕಲಿಕಾಫಲದಲ್ಲಿ ಈ ಕೊರತೆಯನ್ನು ನೀಗಿಸಬಹುದಾಗಿದೆ. |
| 6 | ನಿತ್ಯಜೀವನಕ್ಕೆ ಸಂಬಂಧಿಸಿದ, 2–ಅಂಕಿ ಸಂಖ್ಯೆಗಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಪರಿಗಣಿಸಿಲ್ಲ | 3ನೇ ತರಗತಿಗೆ ಈ ಕಲಿಕಾಫಲವನ್ನು ವರ್ಗಾಹಿಸಿ(carry over), ಅಲ್ಲಿಯ 3ನೇ ಕಲಿಕಾಫಲದಲ್ಲಿ 2–ಅಂಕಿಯ ಸಂಖ್ಯೆಯನ್ನೊಳಗೊಂಡಂತೆ 3–ಅಂಕಿಯ ಸಂಖ್ಯೆಗಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವಂತೆ ಮಾರ್ಗದರ್ಶಿಸಬಹುದಾಗಿದೆ. |
| 7 | ನಿತ್ಯಜೀವನಕ್ಕೆ ಸಂಬಂಧಿಸಿದ 2–ಅಂಕಿ ಸಂಖ್ಯೆಗಳ ವ್ಯವಕಲನದ ಸಮಸ್ಯೆಗಳನ್ನು ಬಿಡಿಸುವರು. | ಪರಿಗಣಿಸಿಲ್ಲ | 3ನೇ ತರಗತಿಗೆ ಈ ಕಲಿಕಾಫಲವನ್ನು ವರ್ಗಾಹಿಸಿ(carry over), ಅಲ್ಲಿಯ 3ನೇ ಕಲಿಕಾಫಲದಲ್ಲಿ 2–ಅಂಕಿಯ ಸಂಖ್ಯೆಯನ್ನೊಳಗೊಂಡಂತೆ 3–ಅಂಕಿಯ ಸಂಖ್ಯೆಗಳ ವ್ಯವಕಲನದ ಸಮಸ್ಯೆಗಳನ್ನು ಬಿಡಿಸುವಂತೆ ಮಾರ್ಗದರ್ಶಿಸಬಹುದಾಗಿದೆ. |
| 8 | 100 ರೂಪಾಯಿಗಳಿಗಿಂತ ಕಡಿಮೆ ಮೊತ್ತವನ್ನು 3–4 ನೋಟುಗಳು ಮತ್ತು ನಾಣ್ಯಗಳು, ಒಂದೇ ಮೌಲ್ಯ ಅಥವಾ ಬೇರೆ ಮೌಲ್ಯಗಳಿಂದ ಪ್ರತಿನಿಧಿಸುವರು. | ಪರಿಗಣಿಸಿಲ್ಲ | 1, 2 ಮತ್ತು 3ನೇ ತರಗತಿಯಲ್ಲಿ ಈ ಕಲ್ಪನೆ ಮೂಡಿರುತ್ತದೆ |
| 9 | 3–ಆಯಾಮದ ಮತ್ತು 2–ಆಯಾಮದ ಆಕೃತಿಗಳನ್ನು ವ್ಯತ್ಯಾಸಿಸುವರು. | ಪರಿಗಣಿಸಿಲ್ಲ | 4ನೇ ತರಗತಿಗೆ 3 ಮತ್ತು 2–ಆಯಾಮದ ಆಕೃತಿಗಳನ್ನು ಹೆಸರಿಸುವರು ಮತ್ತು ನಿತ್ಯಜೀವನದಲ್ಲಿ ಕಂಡು ಬರುವ ಆಕೃತಿಗಳನ್ನು 2d ಮತ್ತು 3d ಗಳಿಗೆ ಹೋಲಿಸುವರು ಎಂಬ ಕಲಿಕಾಫಲದಲ್ಲಿ ಇದನ್ನು ಅರ್ಥೈಸಬಹುದಾಗಿದೆ. |
| 10 | 3–ಆಯಾಮದ ಆಕೃತಿಗಳಾದ ವರ್ಗಘನ, ಆಯತ ಘನ, ಸಿಲಿಂಡರ್, ಶಂಕು ಮತ್ತು ಗೋಲಗಳನ್ನು ಹೆಸರುಗಳಿಂದ ಗುರುತಿಸುವರು. | ಪರಿಗಣಿಸಿಲ್ಲ | |
| 11 | 3–ಆಯಾಮದ ಘನಾಕೃತಿಗಳನ್ನು 2–ಆಯಾಮದ ಸಮತಲಾಕೃತಿಯ ಸೀಮಾರೇಖೆಗಳನ್ನು ಎಳೆಯುವರು. ಉದಾಹರಣೆಗೆ: ಒಂದು ಆಯತಘನವನ್ನು ಪೇಪರ್ ಮೇಲೆ ಇಟ್ಟು ಅದರ | ಪರಿಗಣಿಸಿಲ್ಲ | |

| | | | |
|---|---|---|---|
| | ಸಮತಲವನ್ನು ಟ್ರೇಸ್ ಮಾಡಿದಾಗ ಒಂದು ಆಯತಕಾರ ಬರುತ್ತದೆ ಎಂಬುದನ್ನು ತಿಳಿಯುವರು. | | |
| 12 | 2–ಆಯಾಮದ ಆಕಾರಗಳನ್ನು ಹೆಸರುಗಳಿಂದ ಗುರುತಿಸುವರು. (ವರ್ಗ, ಆಯತ, ತ್ರಿಭುಜ, ವೃತ್ತ) | ಪರಿಗಣಿಸಿಲ್ಲ | |
| 13 | ಸರಳ ಮತ್ತು ವಕ್ರರೇಖೆಗಳ ನಡುವಿನ ವ್ಯತ್ಯಾಸ ತಿಳಿಯುವರು. | ಪರಿಗಣಿಸಿಲ್ಲ | 6ನೇ ತರಗತಿಗೆ ವರ್ಗಾಹಿಸಲಾಗಿದೆ. ಇದು 6ನೇ ತರಗತಿಯಲ್ಲಿರುವ ಮುಂದಿನ ಕಲಿಕಾಫಲದ ಕಲಿಕೆಗೆ ಪೂರಕವಾಗಿದೆ. |
| 14 | ಸರಳ ರೇಖೆಗಳನ್ನು ವಿವಿಧ ದಿಸೆಯಲ್ಲಿ ಪ್ರತಿನಿಧಿಸುವರು/ ಚರ್ಚಿಸುವರು. ಉದಾಹರಣೆ: ಒಂದು ಸರಳ ರೇಖೆಯನ್ನು ತಿರುಗಿಸಿ ಇಟ್ಟರು ಅದು ಸರಳ ರೇಖೆಯೆ ಎಂದು ತಿಳಿಯುವರು. | ಪರಿಗಣಿಸಿಲ್ಲ | |
| 15 | ಉದ್ದ, ದೂರ ಮತ್ತು ಗಾತ್ರಗಳನ್ನು ಅನೌಪಚಾರಿಕ ಮಾನಗಳಾದ ಸರಳು/ ಪೆನ್ಸಿಲ್/ ಲೋಟ/ ಚಮಚ/ ಬಕೆಟ್ ಇವುಗಳಿಂದ ಅಂದಾಜಿಸುವರು ಮತ್ತು ಅಳೆಯುವರು. ಉದಾಹರಣೆಗೆ: ಒಂದು ಟೇಬಲ್‌ನ ಉದ್ದ ನಾಲ್ಕು ಪೆನ್ಸಿಲ್‌ಗಳ ಉದ್ದವಿರಬಹುದು ಎಂಬುದನ್ನು ಅಂದಾಜಿಸುವರು. | ಪರಿಗಣಿಸಿಲ್ಲ | 1 ರಿಂದ 3ನೇ ತರಗತಿಗಳಿಗೆ ಪರಿಗಣಿಸಿರುವುದರಿಂದ 4ನೇ ತರಗತಿಗೆ ಔಪಚಾರಿಕ(ನಿಖರ ಅಳತೆ) ಮಾನಗಳಿಗೆ ಒತ್ತು ನೀಡಲಾಗಿದೆ. |
| 16 | ಸರಳ ತಕ್ಕಡಿ ಮೂಲಕ ಹಗುರ / ಭಾರವಾದ ವಸ್ತುಗಳನ್ನು ಹೋಲಿಸುವರು. ಉದಾಹರಣೆಗೆ: ತಕ್ಕಡಿಯಲ್ಲಿ ಮೇಲೆ ಇರುವುದು ಹಗುರವಾದ ವಸ್ತು. | ಪರಿಗಣಿಸಿಲ್ಲ | |
| 17 | ವಾರದ ದಿನಗಳನ್ನು ಮತ್ತು ವರ್ಷದ ತಿಂಗಳುಗಳನ್ನು ಗುರುತಿಸುವರು. ಉದಾಹರಣೆಗೆ: ಜುಲೈ 1ನೇ ತಾರೀಖು ಯಾವ ವಾರ. | ಪರಿಗಣಿಸಿದೆ | |
| 18 | ಸಂಖ್ಯಾ ವಿನ್ಯಾಸಗಳನ್ನು ವಿಸ್ತರಿಸುವರು ಮತ್ತು ಗುರುತಿಸುವರು. (3, 6, ____, 9, 12) | ಪರಿಗಣಿಸಿದೆ | |
| | ಸಂಗ್ರಹಿಸಿದ ಮಾಹಿತಿಗೆ ಅನುಗುಣವಾಗಿ ತೀರ್ಮಾನಗಳನ್ನು ರಚಿಸುವರು | ಪರಿಗಣಿಸಿಲ್ಲ | 4ನೇ ತರಗತಿಯಲ್ಲಿ ಇದನ್ನೊಳಗೊಂಡಂತೆ ದತ್ತಾಂಶಗಳನ್ನು ಚಿತ್ರ ನಕ್ಷೆಯಲ್ಲಿ ಮತ್ತು ಸ್ಥಂಭಾಲೇಖದಲ್ಲಿ ಅವಲೋಕಿಸಿ, ವಿಶ್ಲೇಷಿಸಿ, ತೀರ್ಮಾನಗಳನ್ನು ರಚಿಸುವರು. |

**ಆದ್ಯತೆ ನೀಡಿರುವ ಕಲಿಕಾಫಲಗಳು – 3ನೇ ತರಗತಿ (ಹಿಂದಿನ ತರಗತಿ)**

| ಕ್ರ.ಸಂ | ಕಲಿಕಾ ಫಲಗಳು | ಪರಿಗಣಿಸಿದೆ/ ಪರಿಗಣಿಸಿಲ್ಲ | ಕಾರಣ |
|---|---|---|---|
| 1 | 999ರ ವರೆಗಿನ ಸಂಖ್ಯೆಗಳನ್ನು ಓದುವುದು ಮತ್ತು ಬರೆಯುವರು, ಸ್ಥಾನ ಬೆಲೆ ಉಪಯೋಗಿಸಿ, ಸಂಖ್ಯೆಗಳ ಬೆಲೆ ತಿಳಿಯುವರು. | ಪರಿಗಣಿಸಿದೆ | |
| 2 | ಸ್ಥಾನ ಬೆಲೆಯೊಂದಿಗೆ 999ರವರೆಗಿನ ಸಂಖ್ಯೆಗಳ ಸ್ಥಾನಗಳನ್ನು ಹೋಲಿಸುವರು. | ಪರಿಗಣಿಸಿದೆ | |
| 3 | ನಿತ್ಯ ಜೀವನದ ಸನ್ನಿವೇಶಗಳಲ್ಲಿನ 3 ಅಂಕಿ ಸಂಖ್ಯೆಗಳ ಸಂಕಲನ ಮತ್ತು ವ್ಯವಕಲನದ ಸಮಸ್ಯೆಗಳನ್ನು ಗುಂಪು ಮತ್ತು ಗುಂಪು ಮಾಡದೇ, ಅವುಗಳ ಮೊತ್ತ ಅಥವಾ ವ್ಯತ್ಯಾಸ 999 ನ್ನು ಮೀರದಂತೆ ಬಿಡಿಸುವರು. | ಪರಿಗಣಿಸಿದೆ | |
| 4 | ಸಂಕಲನ ಮತ್ತು ವ್ಯವಕಲನ ಆಧಾರಿತ ಸಮಸ್ಯೆಗಳನ್ನು ರೂಪಿಸುವರು. | ಪರಿಗಣಿಸಿದೆ | |
| 5 | 999ಕ್ಕೆ ಮೀರದಂತೆ, ಮೊತ್ತ ಮತ್ತು ವ್ಯತ್ಯಾಸಗಳನ್ನು ಎರಡು ಸಂಖ್ಯೆಗಳ ನಡುವೆ ಅಂದಾಜಿಸುವರು. | ಪರಿಗಣಿಸಿದೆ | |
| 6 | 2, 3, 4, 5 ಮತ್ತು 10ರ ವರೆಗಿನ ಮಗ್ಗಿ ಕೋಷ್ಠವನ್ನು ರಚಿಸುವರು ಮತ್ತು ನಿತ್ಯ ಜೀವನದಲ್ಲಿ ಉಪಯೋಗಿಸುವರು. (2 X 1 = 2, 2 X 2 = 4, ಇತ್ಯಾದಿ. ಮಧ್ಯದಲ್ಲಿ ಬಿಟ್ಟರೆ ಅವರು ಸಂಖ್ಯಾ ವಿನ್ಯಾಸವನ್ನು ನೋಡಿ ಖಾಲಿ ಜಾಗವನ್ನು ತುಂಬುವರು.) | ಪರಿಗಣಿಸಿಲ್ಲ | 4ನೇ ತರಗತಿಯಲ್ಲಿ ಈ ಕಲಿಕಾಫಲವನ್ನೊಳಗೊಂಡಂತೆ ಪುನರಾವರ್ತಿತ ಸಂಕಲನದೊಂದಿಗೆ ಗುಣಾಕಾರ ಮತ್ತು 3–ಅಂಕಿ ಸಂಖ್ಯೆಯನ್ನು 1–ಅಂಕಿಯಿಂದ ಗುಣಾಕಾರ ಮಾಡುವುದನ್ನು ತಿಳಿಸಬಹುದಾಗಿದೆ |
| 7 | ಒಂದು ಸನ್ನಿವೇಶ/ಘಟನೆಗೆ ಸೂಕ್ತವಾದ ಸಂಖ್ಯಾ ಕ್ರಿಯೆಯನ್ನು ಅನ್ವಯಿಸುವರು. | ಪರಿಗಣಿಸಿದೆ | |
| 8 | ಸಮಗುಂಪುಗಳಿಂದ / ಹಂಚಿಕೆಯಿಂದ ಭಾಗಾಕಾರದ ಕಲ್ಪನೆಗಳ ಅರ್ಥವನ್ನು ವಿವರಿಸುವರು ಮತ್ತು ಪುನರಾವರ್ತಿತ ವ್ಯವಕಲನದಿಂದ ಇವುಗಳನ್ನು ಕಂಡು ಹಿಡಿಯುವರು. ಉದಾ: 12ನ್ನು 3ರ ಗುಂಪುಗಳಾಗಿ ಮಾಡಲು 12 ನ್ನು 3 ರಿಂದ ಪುನರಾವರ್ತಿಸಿ ಕಳೆದಾಗ 4 ಗುಂಪುಗಳಾಗುತ್ತವೆ ಎಂದು ತಿಳಿಸುವರು. | ಪರಿಗಣಿಸಿಲ್ಲ | 4ನೇ ತರಗತಿಯಲ್ಲಿ ಈ ಕಲಿಕಾಫಲವನ್ನೊಳಗೊಂಡಂತೆ ಸಮ ಹಂಚಿಕೆಯ ಮತ್ತು ಪುನರಾವರ್ತಿತ ವ್ಯವಕಲನದ ಮೂಲಕ ಭಾಗಾಕಾರವನ್ನು ಅರ್ಥೈಸಬಹುದಾಗಿದೆ. |
| 9 | ಸಣ್ಣ ಮೊತ್ತದ ಹಣವನ್ನು ಮರುಗುಂಪು ಮಾಡಿ ಅಥವಾ ಮರುಗುಂಪು ಮಾಡದೆ ಕೂಡುವುದು ಮತ್ತು ಕಳೆಯುವರು. | ಪರಿಗಣಿಸಿದೆ | |
| 10 | ದರಪಟ್ಟಿ ಮತ್ತು ಸರಳ ರಶೀದಿ ತಯಾರಿಸುವರು. | ಪರಿಗಣಿಸಿಲ್ಲ | 5ನೇ ತರಗತಿಯಲ್ಲಿ ಇದೇ ಕಲಿಕಾಫಲದ ಇರುವುದರಿಂದ ಮತ್ತು 5ನೇ ತರಗತಿ ಮಟ್ಟಕ್ಕೆ ಇದು ಸೂಕ್ತವೆನಿಸಿದ ಕಾರಣ ವರ್ಗಾಯಿಸಲಾಗಿದೆ. |
| 11 | ಪೂರ್ಣ ಸಂಖ್ಯೆಯಲ್ಲಿ $\frac{1}{2}$, $\frac{1}{4}$ , $\frac{3}{4}$ ಗಳನ್ನು ಗುರ್ತಿಸುವುದು ಮತ್ತು ಇವುಗಳನ್ನು ನಿತ್ಯ ಜೀವನಕ್ಕೆ ಸಹ ಸಂಬಂಧಿಸಿ ಸಂಕೇತಿಕ ರೂಪದಲ್ಲಿ ಬರೆಯುವರು. | ಪರಿಗಣಿಸಿಲ್ಲ | 4ನೇ ತರಗತಿಯಲ್ಲಿ ಈ ಕೊರತೆಯನ್ನು ಸರಿದೂಗಿಸಬಹುದಾಗಿದೆ. |
| 12 | ಚುಕ್ಕೆ ಕೋಷ್ಠಕದ ಮೂಲಕ ಕಾಗದ ಮಡುಚುವಿಕೆ, ಕಾಗದ ಕತ್ತರಿಸುವಿಕೆಯಲ್ಲಿ ಸರಳರೇಖೆ ಉಪಯೋಗಿಸಿ, | ಪರಿಗಣಿಸಿಲ್ಲ | 5ನೇ ತರಗತಿಗೆ ವರ್ಗಾಯಿಸಲಾಗಿದೆ. |

| | | | |
|---|---|---|---|
| | 2d ಮತ್ತು 3d ಆಕೃತಿಗಳನ್ನು ಗುರ್ತಿಸುವುದು ಮತ್ತು ತಯಾರಿಸುವರು. (ಜಾಲಕೃತಿಗಳನ್ನು ಗುರುತಿಸುವುದು) | | |
| 13 | 2d ಮತ್ತು 3d ಆಕೃತಿಗಳ, ಅಂಚುಗಳ ಸಂಖ್ಯೆ, ಮೂಲೆಗಳ ಸಂಖ್ಯೆ, ಕರ್ಣಗಳ ಸಂಖ್ಯೆ, ಮುಖಗಳ ಸಂಖ್ಯೆ, ಶೃಂಗಗಳ ಸಂಖ್ಯೆ, ಬಾಹುಗಳ ಸಂಖ್ಯೆಗಳ ಕುರಿತು ವಿವರಿಸುವರು. | ಪರಿಗಣಿಸಿಲ್ಲ | 5ನೇ ತರಗತಿಯಲ್ಲಿ ಇದಕ್ಕೆ ಪೂರಕವಾದ ಕಲಿಕಾಫಲವಿರುವ ಕಾರಣ ವರ್ಗಾಯಿಸಲಾಗಿದೆ. |
| 14 | 3d ಆಕೃತಿಗಳನ್ನು ಅನೌಪಚಾರಿಕ ವಿಧಾನದಲ್ಲಿ ರಚಿಸುವರು. | ಪರಿಗಣಿಸಿದೆ | |
| 15 | ಕೊಟ್ಟ ವಿಸ್ತೀರ್ಣವನ್ನು ಹೆಂಚುಗಳೊಂದಿಗೆ ನಡುವೆ ಅಂತರವಿಲ್ಲದೆ, ಒಂದರ ಮೇಲೊಂದು ಕೂಡದೆ ಜೋಡಿಸುವರು. | ಪರಿಗಣಿಸಿಲ್ಲ | 5ನೇ ತರಗತಿಯಲ್ಲಿ ಇದಕ್ಕೆ ಪೂರಕವಾದ ಕಲಿಕಾಫಲವಿರುವ ಕಾರಣ ವರ್ಗಾಯಿಸಲಾಗಿದೆ. |
| 16 | ಆದರ್ಶಮಾನಗಳಾದ ಸೆಂಟಿಮೀಟರ್ ಮತ್ತು ಮೀಟರ್‌ಗಳನ್ನು ಬಳಸಿ ಉದ್ದ ಮತ್ತು ದೂರವನ್ನು ಅಂದಾಜಿಸುವರು ಮತ್ತು ಅಳೆಯುವರು. ಸೆಂಟಿಮೀಟರ್ ಮತ್ತು ಮೀಟರ್‌ಗಳ ನಡುವಿನ ಸಂಬಂಧ ಗುರ್ತಿಸುವರು | ಪರಿಗಣಿಸಿಲ್ಲ | 4ನೇ ತರಗತಿಯಲ್ಲಿ ಉದ್ದ, ತೂಕ, ಗಾತ್ರವನ್ನು ನಿಖರವಾಗಿ ಸೂಕ್ತ ಔಪಚಾರಿಕ ಮಾನಗಳಿಂದ ಅಳೆಯುವುದಕ್ಕೆ ಒತ್ತು ನೀಡಲಾಗುವುದು. |
| 17 | ವಸ್ತುಗಳನ್ನು ತೂಕಮಾಡಲು ಆದರ್ಶ ಮಾನಗಳಾದ ಗ್ರಾಂ, ಕಿ.ಗ್ರಾಂ., ಸರಳ ತುಲಾ ಯಂತ್ರದಲ್ಲಿ ಬಳಸುವರು. | ಪರಿಗಣಿಸಿಲ್ಲ | |
| 18 | ಅನೌಪಚಾರಿಕಮಾನಗಳಿಂದ ವಿವಿಧ ಪಾತ್ರೆಗಳ ಗಾತ್ರವನ್ನು ಹೋಲಿಸುವರು. (ಉದಾ: ಬಕೆಟ್ ಮಗ್ಗಿಗಿಂತ ಜಾಸ್ತಿ ನೀರು ಹಿಡಿಯತ್ತದೆ.) | ಪರಿಗಣಿಸಿಲ್ಲ | |
| 19 | ಕ್ಯಾಲೆಂಡಿರಲ್ಲಿನ ದಿನ ಮತ್ತು ದಿನಾಂಕ ಆಧಾರಿಸಿದ ಸಮಸ್ಯೆಗಳನ್ನು ಬಿಡಿಸುವರು. | ಪರಿಗಣಿಸಿದೆ | |
| 20 | ಗಡಿಯಾರವನ್ನು ಉಪಯೋಗಿಸಿ ಗಂಟೆಗಳಲ್ಲಿ ಸಮಯವನ್ನು ಸರಿಯಾಗಿ ಓದುವರು. (ಗಡಿಯಾರ ಚಿತ್ರವನ್ನು ನೋಡಿ ಅದರ ಸಮಯ ಹೇಳುವುದು.) | ಪರಿಗಣಿಸಿದೆ | |
| 21 | ವಿನ್ಯಾಸಗಳನ್ನು ಸರಳ ಆಕೃತಿಗಳಲ್ಲಿ ಮತ್ತು ಸಂಖ್ಯೆಗಳಲ್ಲಿ ವಿಸ್ತರಿಸುವರು. | ಪರಿಗಣಿಸಿದೆ | |
| 22 | ದತ್ತಾಂಶಗಳನ್ನು ತಾಳೆಗುರುತುಗಳಲ್ಲಿ, ಸೂಕ್ತ ಸ್ಕೇಲ್ ಉಪಯೋಗಿಸಿದ ಚಿತ್ರ ನಕಾಶೆಗಳಲ್ಲಿ ದಾಖಲಿಸುವುದು ಮತ್ತು ತೀರ್ಮಾನಗಳನ್ನು ರಚಿಸುವರು. | ಪರಿಗಣಿಸಿಲ್ಲ | 4ನೇ ತರಗತಿಯಲ್ಲಿ ಇದನ್ನೊಳಗೊಂಡಂತೆ ದತ್ತಾಂಶಗಳನ್ನು ಚಿತ್ರ ನಕ್ಷೆಯಲ್ಲಿ ಮತ್ತು ಸ್ಥಂಭಾಲೇಖದಲ್ಲಿ ಅವಲೋಕಿಸಿ, ವಿಶ್ಲೇಷಿಸಿ, ತೀರ್ಮಾನಗಳನ್ನು ರಚಿಸುವರು. |

**ಆದ್ಯತೆ ನೀಡಿರುವ ಕಲಿಕಾಫಲಗಳು – 4ನೇ ತರಗತಿ (ಪ್ರಸ್ತುತ ತರಗತಿ)**

| ಕ್ರ.ಸಂ | ಕಲಿಕಾ ಫಲಗಳು | ಪರಿಗಣಿಸಿದೆ/ಪರಿಗಣಿಸಿಲ್ಲ | ಕಾರಣ |
|---|---|---|---|
| 1 | 2 ಮತ್ತು 3 ಅಂಕಿಗಳನ್ನು ಗುಣಿಸುವರು. | ಪರಿಗಣಿಸಿದೆ | |
| 2 | ಒಂದು ಸಂಖ್ಯೆಯನ್ನು ಇನ್ನೊಂದು ಸಂಖ್ಯೆಯಿಂದ ವಿವಿಧ ವಿಧಾನಗಳಲ್ಲಿ ಭಾಗಿಸುವರು.<br>• ಚಿತ್ರಗಳಿಂದ, ಸಮಗುಂಪುಗಳಿಂದ, ಪುನರಾವರ್ತಿತ ವ್ಯವಕಲನ ಮಾಡುವರು.<br>• ಈ ವಿಧಾನಗಳನ್ನು ಉಪಯೋಗಿಸಿ ಭಾಗಾಕಾರ ಮತ್ತು ಗುಣಾಕಾರಗಳ ನಡುವಿನ ಅಂತರ ಸಂಬಂಧ ತಿಳಿಯುವರು. | ಪರಿಗಣಿಸಿದೆ | |

| | | | |
|---|---|---|---|
| | • ಅಂದಾಜಿಸುವುದು, ಮೊತ್ತ, ವ್ಯತ್ಯಾಸ ಮತ್ತು ಗುಣಲಬ್ಧ ಮಾಡುವರು. | | |
| 3 | ಹಣ, ಉದ್ದ, ದ್ರವ್ಯರಾಶಿ ಮತ್ತು ಗಾತ್ರಗಳಿಗೆ ನಾಲ್ಕು ಮೂಲಕ್ರಿಯೆಗಳನ್ನು ಉಪಯೋಗಿಸಿ, ನಿತ್ಯ ಜೀವನದ ಸಮಸ್ಯೆಗಳನ್ನು ರಚಿಸುವುದು ಮತ್ತು ಬಿಡಿಸುವರು. | ಪರಿಗಣಿಸಿದೆ | |
| 4 | ಅರ್ಧ, ನಾಲ್ಕನೇ ಒಂದು, ಮೂರನೇ ನಾಲ್ಕು, ಇವುಗಳನ್ನು ಕೊಟ್ಟಿರುವ ಚಿತ್ರಗಳಲ್ಲಿ ಮತ್ತು ಸಂಗ್ರಹಿಸಿದ ವಸ್ತುಗಳಲ್ಲಿ ಗುರುತಿಸುವರು. (ಉದಾ: ಇರುವ 8 ಚೆಂಡುಗಳಲ್ಲಿ 2 ಚೆಂಡುಗಳು ಕೆಂಪು ಚೆಂಡುಗಳು. ಅಂದರೆ $\frac{1}{4}$ ಭಾಗದಷ್ಟು ಚೆಂಡುಗಳು ಕೆಂಪು ಚೆಂಡುಗಳು) | ಪರಿಗಣಿಸಿದೆ | |
| 5 | ಅರ್ಧ, ನಾಲ್ಕನೇ ಒಂದು, ಮೂರನೇ ನಾಲ್ಕು, ಇವುಗಳನ್ನು ಸಂಕೇತಗಳಲ್ಲಿ ಸೂಚಿಸುವರು. $\frac{1}{2}$, $\frac{1}{4}$ , $\frac{3}{4}$ | ಪರಿಗಣಿಸಿದೆ | |
| 6 | $\frac{1}{2}$, ಮತ್ತು $\frac{2}{4}$ ವಿವಿಧ ಭಿನ್ನರಾಶಿಗಳ ಸಮಾನ ಭಿನ್ನರಾಶಿಗಳನ್ನು ತೋರಿಸುವರು. | ಪರಿಗಣಿಸಿಲ್ಲ | 5ನೇ ತರಗತಿಗೆ ವರ್ಗಾಹಿಸಲಾಗಿದೆ |
| 7 | 0.1, 0.2, 0.3......... ಈ ರೀತಿಯ ದಶಮಾಂಶ ಸಂಖ್ಯೆಗಳ ಓದುವುದು ಮತ್ತು ಬರೆಯುವರು. | ಪರಿಗಣಿಸಿಲ್ಲ | 5ನೇ ತರಗತಿಗೆ ವರ್ಗಾಹಿಸಲಾಗಿದೆ |
| 8 | ವೃತ್ತದಲ್ಲಿ, ಕೇಂದ್ರ, ತ್ರಿಜ್ಯ ಮತ್ತು ವ್ಯಾಸ ಗುರುತಿಸುವರು. | ಪರಿಗಣಿಸಿಲ್ಲ | 5ನೇ ತರಗತಿಗೆ ವರ್ಗಾಹಿಸಲಾಗಿದೆ |
| 9 | ಆಕೃತಿಗಳನ್ನು ಪತ್ತೆ ಹಚ್ಚಿ, ಹೊಂದಿಸಲು ಇವುಗಳನ್ನು ಉಪಯೋಗಿಸುವರು. | ಪರಿಗಣಿಸಿದೆ | |
| 10 | ಜಾಲಾಕೃತಿಯಲ್ಲಿ ವರ್ಗಘನ / ಆಯತ ಘನಗಳನ್ನು ರಚಿಸುವರು. | ಪರಿಗಣಿಸಿಲ್ಲ | 5ನೇ ತರಗತಿಯಲ್ಲಿ ಇದಕ್ಕೆ ಪೂರಕವಾದ ಕಲಿಕಾಫಲವಿರುವ ಕಾರಣ ವರ್ಗಾಯಿಸಲಾಗಿದೆ. |
| 11 | ಓರೆಗಾಮಿ / ಕಾಗದ ಕತ್ತರಿಸುವುದರಿಂದ, ಮಸಿ ಹೀರುಸುವಿಕೆಯಿಂದ......... ಇತ್ಯಾದಿಗಳಿಂದ ಸಮಮಿತಿಯ ಪ್ರತಿಫಲನ ಪರಿಕಲ್ಪನೆಯನ್ನು ತಿಳಿಸುವರು. | ಪರಿಗಣಿಸಿಲ್ಲ | 5ನೇ ತರಗತಿಗೆ ವರ್ಗಾಹಿಸಲಾಗಿದೆ |
| 12 | ಸರಳ ಜ್ಯಾಮಿತಿ ಆಕೃತಿಗಳ ವಿಸ್ತೀರ್ಣ ಮತ್ತು ಸುತ್ತಳತೆಯನ್ನು ಕಂಡುಹಿಡಿಯುವರು. (ತ್ರಿಭುಜ, ಆಯತ, ವರ್ಗ). | ಪರಿಗಣಿಸಿಲ್ಲ | 5ನೇ ತರಗತಿಯಲ್ಲಿ ಇದಕ್ಕೆ ಪೂರಕವಾದ ಕಲಿಕಾಫಲವಿರುವ ಕಾರಣ ವರ್ಗಾಯಿಸಲಾಗಿದೆ. |
| 13 | ಮೀಟರ್‌ಗಳನ್ನು ಸೆಂಟಿಮೀಟರ್‌ಗಳಿಗೆ ಮತ್ತು ಸೆಂಟಿ ಮೀಟರ್‌ಗಳನ್ನು ಮೀಟರ್‌ಗೆ ಪರಿವರ್ತಿಸುವರು. | ಪರಿಗಣಿಸಿಲ್ಲ | 5ನೇ ತರಗತಿಯಲ್ಲಿ ಇದಕ್ಕೆ ಪೂರಕವಾದ ಕಲಿಕಾಫಲವಿರುವ ಕಾರಣ ವರ್ಗಾಯಿಸಲಾಗಿದೆ. |
| 14 | ವಸ್ತುವಿನ ಉದ್ದ / ಎರಡು ಸ್ಥಳಗಳ ನಡುವಿನ ದೂರ, ವಿವಿಧ ವಸ್ತುಗಳ ತೂಕ, ದ್ರವಗಳ ಗಾತ್ರ, ಇತ್ಯಾದಿಗಳನ್ನು ಅಂದಾಜಿಸುವರು ಮತ್ತು ಅವುಗಳ ನಿಖರ ಅಳತೆಗಳಿಗೆ ಅನುಗುಣವಾಗಿ ತಾಳೆ ನೋಡುವರು. | ಪರಿಗಣಿಸಿದೆ | |
| 15 | ನಿತ್ಯ ಜೀವನ ಸಂದರ್ಭಗಳಲ್ಲಿನ ಹಣ, ಉದ್ದ, ದೂರ, ತೂಕ, ಗಾತ್ರ ಮತ್ತು ಕಾಲಗಳ ಮೂಲಕ್ರಿಯೆಗಳ ಸಮಸ್ಯೆಗಳನ್ನು ಬಿಡಿಸುವರು. | ಪರಿಗಣಿಸಿದೆ | |
| 16 | ಗಡಿಯಾರದ ಸಮಯವನ್ನು ಗಂಟೆ ಮತ್ತು ನಿಮಿಷಗಳಲ್ಲಿ ಓದುವರು ಮತ್ತು ಎ.ಎಂ. ಮತ್ತು ಪಿ.ಎಂ. ನಲ್ಲಿ ವ್ಯಕ್ತಪಡಿಸುವರು. | ಪರಿಗಣಿಸಿದೆ | |
| 17 | 24 ಗಂಟೆ ಗಡಿಯಾರದೊಂದಿಗೆ 12 ಗಂಟೆಗಳನ್ನು ಸಂಬಂಧ ಕಲ್ಪಿಸುವರು. | ಪರಿಗಣಿಸಿದೆ | |

| | | | |
|---|---|---|---|
| 18 | ಸಮಯದ ಆವರ್ತನೆಯನ್ನು ನಿತ್ಯ ಜೀವನದ ಘಟನೆಗಳೊಂದಿಗೆ ಮುಮ್ಮುಖ ಅಥವಾ ಹಿಮ್ಮುಖ ಎಣಿಕೆಯೊಂದಿಗೆ ಸಂಕಲನ ಮತ್ತು ವ್ಯವಕಲನ ಸಮಸ್ಯೆಗಳನ್ನು ಬಿಡಿಸುವರು. (ಉದಾಹರಣೆ: ಒಂದು ಸಿನಿಮಾ ಬೆಳಿಗ್ಗೆ 8 ಗಂಟೆಗೆ ಶುರುವಾಗಿ 11 ಗಂಟೆಗೆ ಮುಗಿಯುತ್ತದೆ. ಆ ಸಿನಿಮಾ ಎಷ್ಟು ಸಮಯಕ್ಕೆ ಮಾಡಲಾಗಿದೆ ಇತ್ಯಾದಿ.) | ಪರಿಗಣಿಸಿಲ್ಲ | 6ನೇ ತರಗತಿಗೆ ವರ್ಗಾಹಿಸಲಾಗಿದೆ. |
| 19 | ಗುಣಾಕಾರ ಮತ್ತು ಭಾಗಾಕಾರಗಳಲ್ಲಿನ ವಿನ್ಯಾಸಗಳನ್ನು ಗುರುತಿಸುವರು (9ರ ಅಪವರ್ತ್ಯಗಳವರೆಗೆ) | ಪರಿಗಣಿಸಿದೆ | |
| 20 | ಜ್ಯಾಮಿತಿ ವಿನ್ಯಾಸಗಳನ್ನು ಆಧರಿಸಿ, ಸಮಮಿತಿಯ ಏನ್ನು ಅವಲೋಕಿಸಿ, ಗುರುತಿಸಿ ಮತ್ತು ವಿಸ್ತರಿಸುವರು. ಉದಾಹರಣೆ: ______ | ಪರಿಗಣಿಸಿದೆ | |
| 21 | ಸಂಗ್ರಹಿಸಿದ ದತ್ತಾಂಶವನ್ನು ಕೋಷ್ಟಕಗಳಲ್ಲಿ ಮತ್ತು ಸ್ತಂಭಾಲೇಖದಲ್ಲಿ ಗುರುತಿಸುವರು ಮತ್ತು ಇವುಗಳಿಂದ ನಿರೀಕ್ಷೆಗಳನ್ನು ದಾಖಲಿಸುವರು. | ಪರಿಗಣಿಸಿದೆ | |

**ಅಂತಿಮವಾಗಿ ಆದ್ಯತೆ ನೀಡಿರುವ ಕಲಿಕಾಫಲಗಳು: 4ನೇ ತರಗತಿ**

(2 ಮತ್ತು 3ನೇ ತರಗತಿಯ ಮುಖ್ಯ ಕಲಿಕಾಫಲಗಳು ಸೇರಿದಂತೆ)

| ಕ್ರ. ಸಂ | ಥೀಮ್ಸ್ | ಕಲಿಕಾಫಲಗಳು |
|---|---|---|
| 1 | ಸಂಖ್ಯೆಗಳು | ಸ್ಥಾನಬೆಲೆ ಉಪಯೋಗಿಸಿ 9999ರ ವರೆಗಿನ ಸಂಖ್ಯೆಗಳನ್ನು ಓದುವರು ಮತ್ತು ಬರೆಯುವರು. |
| 2 | ಮೂಲಕ್ರಿಯೆಗಳು | ನಿತ್ಯಜೀವನಕ್ಕೆ ಸಂಬಂಧಿಸಿದ 4–ಅಂಕಿ ಸಂಖ್ಯೆಗಳವರೆಗಿನ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು |
| 3 | | ನಿತ್ಯಜೀವನಕ್ಕೆ ಸಂಬಂಧಿಸಿದ 4–ಅಂಕಿ ಸಂಖ್ಯೆಗಳವರೆಗಿನ ವ್ಯವಕಲನದ ಸಮಸ್ಯೆಗಳನ್ನು ಬಿಡಿಸುವರು. |
| 4 | | ನಿತ್ಯಜೀವನಕ್ಕೆ ಸಂಬಂಧಿಸಿದ 3–ಅಂಕಿ ಸಂಖ್ಯೆಯನ್ನು 1–ಅಂಕಿಯಿಂದ ಗುಣಿಸುವರು. |
| 5 | | ಸಂಕಲನ, ವ್ಯವಕಲನ ಮತ್ತು ಗುಣಾಕಾರ ಆಧಾರಿತ ಸಮಸ್ಯೆಗಳನ್ನು ರೂಪಿಸುವರು |
| 6 | | ನಿತ್ಯಜೀವನಕ್ಕೆ ಸಂಬಂಧಿಸಿದ 2–ಅಂಕಿ ಸಂಖ್ಯೆಯನ್ನು 1–ಅಂಕಿಯಿಂದ ಭಾಗಿಸುವರು ಮತ್ತು ಭಾಗಾಕಾರ, ಗುಣಾಕಾರಗಳ ನಡುವಿನ ಅಂತರ ಸಂಬಂಧ ತಿಳಿಯುವರು. |
| 7 | ಸಂಖ್ಯೆಗಳು | $\frac{1}{2}$, $\frac{1}{4}$ , $\frac{3}{4}$ ಇವುಗಳನ್ನು ಕೊಟ್ಟಿರುವ ಚಿತ್ರಗಳಲ್ಲಿ ಮತ್ತು ಸಂಗ್ರಹಿಸಿದ ವಸ್ತುಗಳಲ್ಲಿ ಗುರುತಿಸಿ ಸಂಕೇತಗಳಲ್ಲಿ ಸೂಚಿಸುವರು. |
| 8 | ಅಳತೆ | ಉದ್ದ, ತೂಕ, ಗಾತ್ರಗಳನ್ನು ಸೂಕ್ತ ಮಾನಗಳು(m, cm, kg, g, l, ml) ಮತ್ತು ಸಾಧನಗಳನ್ನು ಉಪಯೋಗಿಸಿ ಅಳೆಯುವರು. |
| 9 | | ಕ್ಯಾಲೆಂಡರಲ್ಲಿನ ದಿನ ಮತ್ತು ದಿನಾಂಕ ಆಧಾರಿಸಿದ ಸಮಸ್ಯೆಗಳನ್ನು ಬಿಡಿಸುವರು. ಗಡಿಯಾರದ ಸಮಯವನ್ನು ಗಂಟೆ ಮತ್ತು ನಿಮಿಷಗಳಲ್ಲಿ ಓದುವರು. am ಮತ್ತು pm ನಲ್ಲಿ ವ್ಯಕ್ತಪಡಿಸುವರು. 24 ಗಂಟೆ ಗಡಿಯಾರದೊಂದಿಗೆ 12 ಗಂಟೆಗಳನ್ನು ಸಂಬಂಧ ಕಲ್ಪಿಸುವರು. |
| 10 | ರೇಖಾಗಣಿತ | 2D ಮತ್ತು 3D ಆಕೃತಿಗಳನ್ನು ಹೆಸರಿಸುವರು.(ಆಯತ, ಚೌಕ, ತ್ರಿಭುಜ, ವೃತ್ತ, ಆಯತ ಘನ, ವರ್ಗ ಘನ, ಸಿಲಿಂಡರ್, ಗೋಳ ಮತ್ತು ಶಂಖ) ನಿತ್ಯ ಜೀವನದಲ್ಲಿ ಕಂಡು ಬರುವ |

| | | |
|---|---|---|
| | | ಆಕೃತಿಗಳನ್ನು 2D ಮತ್ತು 3D ಆಕೃತಿಗಳಿಗೆ ಹೋಲಿಸುವರು. ಅನೌಪಚಾರಿಕ ವಿಧಾನದಲ್ಲಿ ರಚಿಸುವರು. |
| 11 | ವಿನ್ಯಾಸ | ವಿನ್ಯಾಸಗಳನ್ನು ಸರಳ ಆಕೃತಿಗಳಲ್ಲಿ ಮತ್ತು ಸಂಖ್ಯೆಗಳಲ್ಲಿ ವಿಸ್ತರಿಸುವರು. |
| 12 | ದತ್ತಾಂಶ ನಿರ್ವಹಣೆ | ದತ್ತಾಂಶಗಳನ್ನು ಚಿತ್ರ ನಕ್ಷೆಯಲ್ಲಿ ಮತ್ತು ಸ್ಥಂಭಾಲೇಖದಲ್ಲಿ ಅವಲೋಕಿಸಿ, ವಿಶ್ಲೇಷಿಸಿ, ತೀರ್ಮಾನಗಳನ್ನು ಕೈಗೊಳ್ಳುವರು. |

**ಅಂತಿಮವಾಗಿ ಆದ್ಯತೆ ನೀಡಿರುವ ಕಲಿಕಾಫಲಗಳು: 5ನೇ ತರಗತಿ**

(3 ಮತ್ತು 4ನೇ ತರಗತಿಯ ಮುಖ್ಯ ಕಲಿಕಾಫಲಗಳು ಸೇರಿದಂತೆ)

| ಕ್ರ.ಸಂ | ಥೀಮ್ಸ್ | ಕಲಿಕಾ ಫಲಗಳು |
|---|---|---|
| 1 | ಸಂಖ್ಯೆಗಳು | ಸ್ಥಾನಬೆಲೆ ಉಪಯೋಗಿಸಿ 99999 ರವರೆಗಿನ ಸಂಖ್ಯೆಗಳನ್ನು ಓದುವರು ಮತ್ತು ಬರೆಯುವುದು |
| 2 | ಮೂಲಕ್ರಿಯೆಗಳು | ನಿತ್ಯ ಜೀವನಕ್ಕೆ ಸಂಬಂಧಿಸಿದ 5–ಅಂಕಿಗಳ ವರೆಗಿನ ಸಂಕಲನ ಸಮಸ್ಯೆಗಳನ್ನು ಬಿಡಿಸುವರು. |
| 3 | | ನಿತ್ಯ ಜೀವನಕ್ಕೆ ಸಂಬಂಧಿಸಿದ 5–ಅಂಕಿಗಳ ವರೆಗಿನ ವ್ಯವಕಲನ ಸಮಸ್ಯೆಗಳನ್ನು ಬಿಡಿಸುವುದು. |
| 4 | | ನಿತ್ಯ ಜೀವನಕ್ಕೆ ಸಂಬಂಧಿಸಿದ ಮೂರು ಅಂಕಿಸಂಖ್ಯೆಗಳನ್ನು ಎರಡು ಅಂಕಿ ಗಳಿಂದ ಗುಣಿಸುವರು. |
| 5 | | ನಿತ್ಯ ಜೀವನಕ್ಕೆ ಸಂಬಂಧಿಸಿದ 2–3 ಅಂಕಿಗಳ ಸಂಖ್ಯೆಯನ್ನು 1–ಅಂಕಿಯಿಂದ ಭಾಗಿಸುವರು |
| 6 | | ಆದರ್ಶ ಕ್ರಮ ವಿಧಿಯ ಮೂಲಕ ದತ್ತ ಸಂಖ್ಯೆಯನ್ನು ಇನ್ನೊಂದು ಸಂಖ್ಯೆಯಿಂದ ಭಾಗಿಸುವರು |
| 7 | ಸಂಖ್ಯೆಗಳು | ಭಿನ್ನರಾಶಿಗಳಾದ ($\frac{2}{3},\frac{4}{5},\frac{1}{7},\frac{3}{4}$ ಇತ್ಯಾದಿ) ಇವುಗಳನ್ನು ಕೊಟ್ಟಿರುವ ಚಿತ್ರಗಳಲ್ಲಿ ಮತ್ತು ಸಂಗ್ರಹಿಸಿದ ವಸ್ತುಗಳಲ್ಲಿ ಗುರುತಿಸಿ ಸಂಕೇತಗಳಲ್ಲಿ ಸೂಚಿಸುವರು. |
| 8 | | ಭಿನ್ನರಾಶಿಗಳನ್ನು ಸಮಾನ ಭಿನ್ನರಾಶಿ ರೂಪದಲ್ಲಿ ಗುರುತಿಸುವರು. |
| 9 | ಅಳತೆ | ಉದ್ದ, ತೂಕ, ಗಾತ್ರ ಸಮಯದ ಮಾನಗಳನ್ನು ಪರಿವರ್ತಿಸಿ ಗಣಿತದ ನಾಲ್ಕು ಮೂಲ ಕ್ರಿಯೆಗಳನ್ನು ಅನ್ವಯಿಸಿ ಸಮಸ್ಯೆಗಳನ್ನು ಬಿಡಿಸುವರು |
| 10 | | ಕೋನಗಳನ್ನು ಲಂಬ, ಲಘು, ಹಾಗು ವಿಶಾಲಕೋನ ಗಳಾಗಿ ವರ್ಗೀಕರಿಸುವುದು |
| 11 | ರೇಖಾಗಣಿತ | ಮೂರು ಆಯಾಮದ ಆಕೃತಿಗಳ ಜಾಲಾಕೃತಿಯನ್ನು ಗುರುತಿಸುವರು. |
| 12 | ವಿನ್ಯಾಸ | ವಿವಿಧ ರೀತಿಯ ವಿನ್ಯಾಸಗಳನ್ನು ಗುರುತಿಸುವರು. |
| 13 | ದತ್ತಾಂಶ ನಿರ್ವಹಣೆ | ದತ್ತಾಂಶಗಳನ್ನು ಚಿತ್ರನಕ್ಷೆಯಲ್ಲಿ ಮತ್ತು ಸ್ಥಂಭಾಲೇಖದಲ್ಲಿ ಅವಲೋಕಿಸಿ, ವಿಶ್ಲೇಷಿಸಿ, ತೀರ್ಮಾನಗಳನ್ನು ಕೈಗೊಳ್ಳುವರು. |

**ಗಣಿತ ವಿಷಯದ ಕಲಿಕಾ ಫಲಗಳ ಮರುಹೊಂದಾಣಿಕೆ – ತರಗತಿವಾರು:**

| **ತರಗತಿ** | **ಹಿಂದಿನ ಎರಡು ತರಗತಿಯ ಕಲಿಕಾ ಫಲಗಳ ಸಂಖ್ಯೆ** | | **ಪ್ರಸ್ತುತ ತರಗತಿಯ ಕಲಿಕಾ ಫಲಗಳ ಸಂಖ್ಯೆ (ಸಾಮನ್ಯ ದಿನಗಳಲ್ಲಿ)** | **ಒಟ್ಟು** | **ಕಲಿಕಾ ಚೇತರಿಕೆ – ಮರುಹೊಂದಾಣಿಕೆ ಮಾಡಿದ ಕಲಿಕಾ ಫಲಗಳ ಸಂಖ್ಯೆ** | |
|---|---|---|---|---|---|---|
| 4 ನೇ | 19 (2) | 22 (3) | 20 | 61 | 12 | ಅತಿ ಮುಖ್ಯ ಹಾಗೂ ಮುಂದಿನ ತರಗತಿಯ ಕಲಿಕಾ ಫಲಗಳನ್ನು ಸಂಯೋಜಿಸಿ ಮರುಹೊಂದಾಣಿಕೆ ಮಾಡಲಾಗಿದೆ. |
| 5 ನೇ | 22 (3) | 20 (4) | 19 | 61 | 13 | |
| 6 ನೇ | 20 (4) | 19 (5) | 23 | 62 | 11 | |
| 7 ನೇ | 19 (5) | 23 (6) | 22 | 64 | 14 | |
| **ಒಟ್ಟು** | 80 | 84 | 84 | 248 | 50 | |

## ಸಂಪನ್ಮೂಲಗಳ ಪರಿಚಯ ಮತ್ತು ಬಳಕೆ:

ವಿದ್ಯಾರ್ಥಿಗಳ ಕಲಿಕಾ ನಷ್ಟವನ್ನು ಸರಿದೂಗಿಸಲು 2022-23 ಶೈಕ್ಷಣಿಕ ವರ್ಷದ ಶೈಕ್ಷಣಿಕ ಪ್ರಕ್ರಿಯೆಯನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ಎರಡು ರೀತಿಯ ಸಂಪನ್ಮೂಲಗಳನ್ನು ಸೃಜಿಸಲಾಗಿದೆ.

- **ಸುಗಮಕಾರರ ಕೈಪಿಡಿ:** ಸುಗಮಕಾರರ ಕೈಪಿಡಿಯು 1 ರಿಂದ 9 ನೇ ತರಗತಿಯ ಎಲ್ಲಾ ವಿಷಯಗಳಲ್ಲಿ ಮರುಹೊಂದಾಣಿಕೆ ಮಾಡಿಕೊಂಡಿರುವ ಪ್ರಮುಖ ಕಲಿಕಾಫಲಗಳಿಗೆ ಬೋಧನಾ ತರಗತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಮಾರ್ಗದರ್ಶನ ಮಾಡುತ್ತದೆ. ಕಲಿಕಾ ಫಲಗಳನ್ನು ಆಯ್ಕೆ ಮಾಡುವಾಗ ಹಿಂದಿನ ಎರಡು ತರಗತಿಯ ಅತ್ಯಗತ್ಯ ಕಲಿಕಾ ಫಲಗಳು ಹಾಗೂ ಪ್ರಸ್ತುತ ತರಗತಿಯ ಅತ್ಯಗತ್ಯ ಕಲಿಕಾ ಫಲಗಳನ್ನು ಆಯ್ಕೆ ಮಾಡಲಾಗಿದೆ. ಆಯ್ಕೆ ಮಾಡಿದ ಕಲಿಕಾ ಫಲಗಳು ಒಳಗೊಂಡಿರುವ ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳಲ್ಲಿ ಸಾಧಿಸಲು ಅಗತ್ಯವಿರುವ ಚಟುವಟಿಕೆಗಳನ್ನು ಸೃಜಿಸಲಾಗಿದೆ, ಹಾಗೂ ಆ ಚಟುವಟಿಕೆಗಳನ್ನು ತಮ್ಮ ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ಹೇಗೆ ಸಮ್ಮಿಳಿತಗೊಳಿಸಿಕೊಳ್ಳುವ ವಿವರವನ್ನು ಸುಗಮಕಾರರ ಕೈಪಿಡಿ ನೀಡುತ್ತದೆ. ಸುಗಮಕಾರರ ಕೈಪಿಡಿ ರಚನೆಯ ಸಂದರ್ಭದಲ್ಲಿ ಬುನಾದಿ ಸಾಮರ್ಥ್ಯಗಳನ್ನು ಬೆಳೆಸಲು ಅಗತ್ಯವಿರುವ ಬೋಧನಾ ವಿಧಾನ ಮತ್ತು ಚಟುವಟಿಕೆಗಳನ್ನು ನಿರ್ದೇಶಿಸಲಾಗಿದೆ. ಪಠ್ಯಪುಸ್ತಕ ಹಾಗೂ ಪಠ್ಯಪುಸ್ತಕ ಹೊರತುಪಡಿಸಿದ ಚಟುವಟಿಕೆಗಳನ್ನು ಸೃಜಿಸುವ ಸಾಧ್ಯತೆಗಳನ್ನು ಇಲ್ಲಿ ಪರಿಚಯ ಮಾಡಿಕೊಡಲಾಗಿದೆ. ಸುಗಮಕಾರರ ಕೈಪಿಡಿಯಲ್ಲಿ ನಿರ್ದೇಶಿಸಿರುವ ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳಿಗೆ ಸೃಜಿಸಿರುವ 'ಕಲಿಕಾ ಹಾಳೆ'ಯ ಅಭ್ಯಾಸಗಳಿಗೆ ಅಗತ್ಯವಿರುವಲ್ಲಿ ಸಂಪರ್ಕ ಕಲ್ಪಿಸಲಾಗಿದೆ.
- **ಕಲಿಕಾ ಹಾಳೆಗಳು**: ಸುಗಮಕಾರರ ಕೈಪಿಡಿ ಸುಗಮಕಾರರಿಗೆ ಮಾರ್ಗದರ್ಶನ ನೀಡಿದರೆ, ಕಲಿಕಾ ಹಾಳೆಗಳು ವಿದ್ಯಾರ್ಥಿಗಳು ಕೈಗೊಳ್ಳಬೇಕಾದ ಚಟುವಟಿಕೆಗಳ ಗುಚ್ಛವಾಗಿರುತ್ತವೆ. ಕಲಿಕಾ ಹಾಳೆಗಳು ತರಗತಿ ಹಾಗೂ ವಿಷಯವಾರು ಆಯ್ಕೆ ಮಾಡಿದ ಕಲಿಕಾ ಫಲಗಳಿಗೆ ಹಲವಾರು ಚಟುವಟಿಕೆಗಳನ್ನು ಸೃಜಿಸಲಾಗಿದೆ. ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳ ಕಲಿಕೆ ನಿರೀಕ್ಷಿತ ಮಟ್ಟದಲ್ಲಿ ಸಾಧಿತವಾಗಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಂಡು ಚಟುವಟಿಕೆಗಳನ್ನು ರಚಿಸಲಾಗಿದೆ. ಕಲಿಕಾ ಹಾಳೆಗಳಲ್ಲಿ ರಚಿಸಿರುವ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಸ್ವತಃ ಅಥವಾ ಸುಗಮಕಾರರ ಸಹಾಯದಿಂದ ಕೈಗೊಳ್ಳಬೇಕೆಂಬ ಉದ್ದೇಶದಿಂದ ರಚಿಸಲಾಗಿದೆ. ಪ್ರತಿ ಕಲಿಕಾಫಲಕ್ಕಾಗಿ ರಚಿತವಾಗಿರುವ ಚಟುವಟಿಕೆಗಳ ಗುಚ್ಛವನ್ನು ವಿದ್ಯಾರ್ಥಿಗಳಿಗೆ ನೀಡಿ ಕಲಿಕಾ ಪ್ರಕ್ರಿಯೆಯನ್ನು ಕೈಗೊಳ್ಳಲು ಕಲಿಕಾ ಹಾಳೆಗಳನ್ನು ಬಳಸಿಕೊಳ್ಳಬೇಕು. ಪ್ರತಿ ಕಲಿಕಾ ಫಲದ ನಂತರ ಮೌಲ್ಯಮಾಪನ ಪ್ರಕ್ರಿಯೆಯನ್ನು ಪ್ರಸ್ತಾಪಿಸಲಾಗಿದ್ದು ನಮೂದಿಸಿರುವ ಸ್ತರಗಳನ್ನು ಬಳಸಿ ಕಲಿಕೆಯ ಮಟ್ಟವನ್ನು ದೃಢೀಕರಿಸಬೇಕು.

**ಅಭ್ಯಾಸ ಹಾಳೆ ಮತ್ತು ಕಲಿಕಾ ಹಾಳೆಗಳ ವೈಶಿಷ್ಟ್ಯತೆ:**

ಶಿಕ್ಷಕರ ಕೈಪಿಡಿ ⇒

- ಕಲಿಕಾ ಫಲ
- ಕಲಿಕಾಫಲಗಳ ಮಾಹೇವಾರು ಹಂಚಿಕೆ
- ಕಲಿಕಾಫಲದ ವ್ಯಾಪ್ತಿ ಮತ್ತು ಮಹತ್ವ
- ಚಟುವಟಿಕೆಗಳು (ಸಂಖ್ಯೆ, ಉದ್ದೇಶ, ವಿವರ, ಕಲಿಕಾ ಹಾಳೆಯ ಚಟುವಟಿಕೆಯ ಸಂಖ್ಯೆ)
- ಪಠ್ಯಪುಸ್ತಕದಲ್ಲಿ ಸಂಬಂಧಿಸಿದ ಅಧ್ಯಾಯ
- ಮೌಲ್ಯಮಾಪನದ ಸ್ತರಗಳು

ಕಲಿಕಾ ಹಾಳೆಗಳು ⇒

- ಕಲಿಕಾಫಲದ ಹೆಸರು
- ಚಟುವಟಿಕೆಗಳು
- ಸ್ವ ಮೌಲ್ಯಮಾಪನ (ನಾನು ಮತ್ತು ನನ್ನ ಕಲಿಕೆ)
- ಮೌಲ್ಯಮಾಪನದ ಸ್ತರಗಳು (ನನ್ನ ಕಲಿಕೆ ಹೇಗಾಗಿದೆ? ಟಿಕ್ ಗುರುತು ಹಾಕುವೆ)
- ನನ್ನ ಕಲಿಕೆಯ ಬಗ್ಗೆ ಶಿಕ್ಷಕರ ಹಿಮ್ಮಾಹಿತಿ
- ಶಿಕ್ಷಕರ ಸಹಿ

## ಕಲಿಕಾ ಚೇತರಿಕೆ ಕಾರ್ಯಕ್ರಮದಲ್ಲಿ ಮೌಲ್ಯಮಾಪನದ ಸ್ವರೂಪ:

ಕಲಿಕಾ ನಷ್ಟವನ್ನು ಸರಿದೂಗಿಸುವ ಉದ್ದೇಶದಿಂದಲೇ ಜಾರಿಯಾಗುತ್ತಿರುವ ಕಲಿಕಾ ಚೇತರಿಕೆ ಉಪಕ್ರಮ ಪ್ರಸಕ್ತ ಶೈಕ್ಷಣಿಕ ವರ್ಷದ ಮೌಲ್ಯಮಾಪನ ಪ್ರಕ್ರಿಯೆಯಯನ್ನು ತುಸು ಭಿನ್ನವಾಗಿ ಎದುರು ನೋಡುತ್ತಿದೆ. ಶಾಲಾಧಾರಿತ ಮೌಲ್ಯಮಾಪನ ಪ್ರಕ್ರಿಯೆಯನ್ನು ಯಥಾವತ್ತಾಗಿ ಹಿಂದಿನಂತೆಯೇ ಸಾಧನ ಮತ್ತು ತಂತ್ರಗಳ ಬಳಕೆಯನ್ನು ಉಳಿಸಿಕೊಂಡಿದೆ. ಮೌಲ್ಯಮಾಪನದ ವಿಧಾನಗಳಲ್ಲಿ ತುಸು ಬದಲಾವಣೆಯನ್ನು ಮಾಡಿಕೊಳ್ಳಲಾಗಿದೆ. ಸ್ಥೂಲವಾಗಿ ಹೇಳುವುದಾದರೆ ಇದು ಪಠ್ಯ ಆಧಾರಿತವಾಗಿ ನಡೆಯುತ್ತಿದ್ದ ಮೌಲ್ಯಮಾಪನವಾಗಿರದೆ, **ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಮರು ಹೊಂದಿಸಿಕೊಂಡ ಕಲಿಕಾಫಲಗಳನ್ನು ಆಧರಿಸಿ** ಕಲಿಕಾ ಹಾಳೆ ಮತ್ತು ತರಗತಿಯಲ್ಲಿ ನಡೆಯುವ ಚಟುವಟಿಕೆಯಲ್ಲಿ ಮಗು ಭಾಗವಹಿಸುವಿಕೆಯನ್ನು ಆಧರಸಿ ನಡೆಯುವ ಮೌಲ್ಯಮಾಪನವಾಗಿರಲಿದೆ. ಮೌಲ್ಯಮಾಪನದ ಹಂತಗಳು ಈ ಹಿಂದಿನಂತೆಯೇ ಯಥಾವತ್ತಾಗಿ ಇರುತ್ತವೆ. ಆದರೆ ಅವು ಒಳಗೊಳ್ಳುವ ಕ್ಷೇತ್ರ ಮಾತ್ರ ಕಲಿಕಾಫಲಗಳಾಗಿರುತ್ತವೆ.

- **ನೈದಾನಿಕ ಮೌಲ್ಯಮಾಪನ (Diagnostic Assessment)** ನೈದಾನಿಕ ಮೌಲ್ಯಮಾಪನವು ಪ್ರತಿ ವಿದ್ಯಾರ್ಥಿಯ ಪ್ರಸ್ತುತ ಕಲಿಕಾ ಮಟ್ಟವನ್ನು ಗುರುತಿಸಿಕೊಳ್ಳುವ ಮೂಲ ಉದ್ದೇಶವನ್ನು ಒಳಗೊಂಡಿದೆ. ನೈದಾನಿಕ ಮೌಲ್ಯಮಾಪನವನ್ನು ಮೇ ತಿಂಗಳ ಕೊನೆಯಲ್ಲಿ ನೀಡುವುದು ಮತ್ತು ಈ ಮೌಲ್ಯಮಾಪನವು ಲಿಖಿತ ರೂಪದ ಬದಲಿಗೆ ನೈದಾನಿಕ ಚರ್ಚೆ, ಓದು ಬರೆಹದ ಮೂಲಕ ಕೈಗೊಳ್ಳುವುದಾಗಿದೆ. ನೈದಾನಿಕ ಮೌಲ್ಯಮಾಪನವನ್ನು ಕೈಗೊಳ್ಳುವಾಗ ರೂಪಿಸಿಕೊಳ್ಳಬಹುದಾದ ಪ್ರಶ್ನೆ ಪತ್ರಿಕೆಗಳು ಮೂಲ ಸಾಕ್ಷರತೆ ಮತ್ತು ಹಿಂದಿನ ತರಗತಿಗಳ ಕಲಿಕಾಫಲಗಳನ್ನು ಒಳಗೊಂಡಿರಬೇಕು. ಈ ಮಾಪನದ ಮೂಲಕ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಸ್ಪಷ್ಟಪಡಿಸಿಕೊಳ್ಳಬೇಕು. ನಲಿ-ಕಲಿ ತರಗತಿಗೆ ನೈದಾನಿಕ ಮೌಲ್ಯಮಾಪನವು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಮಟ್ಟವನ್ನು ಆಧರಿಸಿರುತ್ತದೆ. ಉದಾ: ಭಾಷೆಯಲ್ಲಿ ಮೂಲಾಕ್ಷರ, ಗುಣಿತಾಕ್ಷರ, ಒತ್ತಕ್ಷರ, ಪದ-ವಾಕ್ಯಗಳ ರಚನೆ ಮತ್ತು ಗ್ರಹಿಕೆ, ಸರಳ ಓದು ಮತ್ತು ಬರೆಹ ಇತ್ಯಾದಿ ಹಾಗೂ ಗಣಿತದಲ್ಲಿ ಸಂಖ್ಯೆ ಮತ್ತು ಮೂಲಕ್ರಿಯೆಯನ್ನು ಗಮನಹರಿಸುವುದಾಗಿರುತ್ತದೆ. ಉಳಿದ 4 ರಿಂದ 9ನೇ ತರಗತಿಗಳಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಜೊತೆಗೆ ಹಿಂದಿನ ಎರಡು ತರಗತಿಗಳ ಅತ್ಯಗತ್ಯ ಕಲಿಕಾ ಫಲಗಳ ಮಟ್ಟವನ್ನು ಆಧರಿಸಿರುತ್ತದೆ. ಪ್ರಸಕ್ತ ತರಗತಿಯ ಹಾಗೂ ಹಿಂದಿನ ಎರಡು ತರಗತಿಯ ಅತ್ಯಗತ್ಯ ಕಲಿಕಾಫಲಗಳು-ಇದನ್ನು ಶಿಕ್ಷಕರ ಕೈಪಿಡಿಯಲ್ಲಿ ನಮೂದಿಸಲಾಗಿದೆ. ಉದಾ: ಮೂಲ ಸಾಕ್ಷರತೆಯ ಹಂತದಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ? ಹಿಂದಿನ ತರಗತಿ ಕಲಿಕಾಫಲಗಳ ಹಂತದಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ? ಎಂಬುದರ ಆಧಾರದ

ಮೇಲೆ ಸುಗಮಕಾರರು ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಆದರೆ ನಲಿ–ಕಲಿ ವಿದ್ಯಾರ್ಥಿಗಳಿಗೆ ಬಳಸುವ ಸಾಧನವು ಪ್ರಮುಖವಾಗಿ ಆರಂಭಿಕ ಸಾಕ್ಷರತೆ ಮತ್ತು ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಒಳಗೊಂಡಿರಬೇಕು. ಇದನ್ನು ತರಗತಿಯ ಸನ್ನಿವೇಶಕ್ಕೆ ಅನುಗುಣವಾಗಿ ಸುಗಮಕಾರರು ತಾವೇ ಸ್ವತಃ ರಚಿಸಿಕೊಳ್ಳಬೇಕು. ಇದಕ್ಕಾಗಿ ಸುಗಮಕಾರರ ಕೈಪಿಡಿಯಲ್ಲಿ ನೀಡಲಾಗಿರುವ ನೈದಾನಿಕ ಮೌಲ್ಯಮಾಪನ ಸಾಧನವನ್ನು ಮಾದರಿಯಾಗಿ ಬಳಸಿಕೊಳ್ಳಬಹುದು. ಈ ಮೌಲ್ಯಮಾಪನ ಪ್ರಕ್ರಿಯೆಯು ವಿದ್ಯಾರ್ಥಿಗಳ ಕಲಿಕಾ ಅಗತ್ಯತೆಗಳನ್ನು ಅರ್ಥೈಸಿಕೊಂಡು ಬೆಂಬಲ ನೀಡಲು ಸುಗಮಕಾರರಿಗೆ ಸಹಾಯ ಮಾಡುತ್ತದೆ.

**ದಿನಾಂಕ 25-04-2022ರ ಸುತ್ತೋಲೆಯಲ್ಲಿ ಹೊರಡಿಸಿದ ಹಾಗೆ: 4ರಿಂದ 9ನೇ ತರಗತಿಗೆ**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| **ನೈದಾನಿಕ ಅವಲೋಕನ & ಪ್ರಗತಿ ದಾಖಲು:** ಪ್ರಸ್ತುತ ಸಾಲಿನಲ್ಲಿ ನೈದಾನಿಕ ಲಿಖಿತ ಪರೀಕ್ಷೆ ಇರುವುದಿಲ್ಲ. ನೈದಾನಿಕ ಚರ್ಚೆ, ಓದು ಬರೆಹದ ಮೂಲಕ ಮಕ್ಕಳ ಪ್ರಗತಿಯನ್ನು ಗಮನಿಸಿ. ಈ ನೈದಾನಿಕ ಅವಲೋಕನದ ಮೂಲಕ ಮಕ್ಕಳ ಪ್ರಗತಿಯನ್ನು ದಾಖಲಿಸಿಕೊಳ್ಳಿ. ಭಾಷೆ & ಗಣಿತದಲ್ಲಿ ಅವರ ಮೂಲಭೂತ ಕಲಿಕಾ ಪ್ರಗತಿಯ ಅವಲೋಕನಕ್ಕೆ ಹೆಚ್ಚು ಒತ್ತು ನೀಡಿರಿ.<br><br>ಕಲಿಕಾ ನಷ್ಟ ಅಥವಾ ಅಂತರದ ಕಾರಣಕ್ಕಾಗಿಯೇ ಕಲಿಕಾ ಹಾಳೆಗಳನ್ನು ಮಾಡಲಾಗಿರುವುದರಿಂದ ನೈದಾನಿಕ ಅವಲೋಕನಕ್ಕಾಗಿ ಮೊದಲು ಒಂದು ವಾರ ಕಲಿಕೆಯ ಮೂಲಭೂತ ಅಂಶಗಳ ಪುನರ್ಬಲನದ ಕೆಲಸ, ಮಕ್ಕಳ ಮನಗೆಲ್ಲುವ ಮತ್ತು ಮಾನಸಿಕ, ಭಾವನಾತ್ಮಕ ಸುರಕ್ಷತೆ ನೀಡುವ ಕೆಲಸ ನಿರ್ವಹಿಸಬೇಕಾಗುತ್ತದೆ. | ---- | ಶಾಲಾ ಆರಂಭದ ಮೊದಲನೆಯ ವಾರ |

- **ರೂಪಣಾತ್ಮಕ ಮೌಲ್ಯಮಾಪನ (Formative Assessment):** ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 4 ರೂಪಾಣಾತ್ಮಕ ಮೌಲ್ಯಮಾಪನಗಳು ಇರಲಿವೆ. ಇದು ನಿಗದಿತ ಕಾಲಾವಧಿಯಲ್ಲಿ ವಿದ್ಯಾರ್ಥಿಗಳು ಗಳಿಸಿಕೊಂಡ ಸಾಮರ್ಥ್ಯಗಳು ಅಥವಾ ಸಾಧನೆ ಮಾಡಿದ ಕಲಿಕಾ ಪ್ರಗತಿಯನ್ನು ಮೌಲ್ಯಮಾಪನ ಮಾಡಿ ಹಿಮ್ಮಾಹಿತಿ ನೀಡುವ ಪ್ರಕ್ರಿಯೆಯಾಗಿದೆ. ರೂಪಣಾತ್ಮಕ ಮೌಲ್ಯಮಾಪನವು ಸಿಸಿಇ ಸಲಹೆ ಮಾಡುವ ಮಾದರಿಯಲ್ಲಿಯೇ ಇರುತ್ತದೆ. ವಿದ್ಯಾರ್ಥಿಯ ನಿರಂತರ ಕಲಿಕೆಯ ಮಾಪನವನ್ನು ಇದು ದಾಖಲಿಸುತ್ತದೆ. ಪ್ರಸಕ್ತ ಶೈಕ್ಷಣಿಕ ಪ್ರಕ್ರಿಯೆಯು ಕಲಿಕಾಫಲಗಳ ಆಧಾರದ ಮೇಲೆ ನಡೆಯುವುದರಿಂದ ಮೌಲ್ಯಮಾಪನ ಪ್ರಕ್ರಿಯೆಯಲ್ಲೂ ಕಲಿಕಾಫಲಗಳನ್ನು ಆಧರಿಸಿಯೇ ಕಲಿಕೆಯ 'ಮೌಲ್ಯ ನಿರ್ಧರಣೆ' ನಡೆಯಬೇಕಾಗುತ್ತದೆ. ಪ್ರತೀ ಕಲಿಕಾಫಲದ ತರಗತಿ ಪ್ರಕ್ರಿಯೆಯ ನಂತರ ನೀಡಿರುವ ಮೌಲ್ಯಮಾಪನದ ಸ್ತರಗಳನ್ನು ಬಳಸಿಕೊಂಡು ರೂಪಣಾತ್ಮಕ ಮೌಲ್ಯಮಾಪನ ಕೈಗೊಳ್ಳುವುದು.

**ದಿನಾಂಕ 25-04-2022ರ ಸುತ್ತೋಲೆಯಲ್ಲಿ ಹೊರಡಿಸಿದ ಹಾಗೆ: 4ರಿಂದ 9ನೇ ತರಗತಿಗೆ**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| **ರೂಪಣಾತ್ಮಕ ಮೌಲ್ಯಾಂಕನ–1:**<br>ಕಲಿಕಾ ಹಾಳೆಗಳು ಮೌಲ್ಯಾಂಕನದ ಆಕರಗಳಾಗಿ ಬಳಸುವಂತೆ ತಯಾರಿಸಿದೆ. ಹಾಗೆಯೇ ಕೃತಿಸಂಪುಟಕ್ಕೆ ಅವುಗಳನ್ನು ನೇರವಾಗಿ ಸಂಗ್ರಹಿಸುವಂತೆಯೂ ತಯಾರಿಸಿದೆ. ಅವುಗಳನ್ನು ಸಂಗ್ರಹಿಸಿ, ಅವಲೋಕಿಸಿ 15 ಅಂಕಗಳಿಗೆ ದತ್ತಾಂಶಗಳನ್ನು ಕ್ರೋಢೀಕರಿಸಿರಿ. ಮಕ್ಕಳ ಪ್ರಗತಿಗೆ ಆಧಾರಾಂಶಗಳು ಕಲಿಕಾ ಹಾಳೆಗಳ ಚಟುವಟಿಕೆಗಳು ಆಗಿರುತ್ತವೆ. 9ನೇ ತರಗತಿಗೆ ಅಗತ್ಯವೆನಿಸಿದ್ದಲ್ಲಿ ಪುಟ್ಟ ಲಿಖಿತ ಪರೀಕ್ಷೆಯನ್ನೂ ರೂಪಣಾತ್ಮಕ ಮೌಲ್ಯಾಂಕನದ ಭಾಗವಾಗಿ ಮಾಡಬಹುದು. | 15 | 18-07-2022 ರಿಂದ 20-07-2022 |
| **ರೂಪಣಾತ್ಮಕ ಮೌಲ್ಯಾಂಕನ–2:** | | |

| | | |
|---|---|---|
| ಕಲಿಕಾ ಹಾಳೆಗಳು ಮೌಲ್ಯಾಂಕನದ ಆಕರಗಳಾಗಿ ಬಳಸುವಂತೆ ತಯಾರಿಸಿದೆ. ಹಾಗೆಯೇ ಕೃತಿಸಂಪುಟಕ್ಕೆ ಅವುಗಳನ್ನು ನೇರವಾಗಿ ಸಂಗ್ರಹಿಸುವಂತೆಯೂ ತಯಾರಿಸಿದೆ. ಅವುಗಳನ್ನು ಸಂಗ್ರಹಿಸಿ, ಅವಲೋಕಿಸಿ 15 ಅಂಕಗಳಿಗೆ ದತ್ತಾಂಶಗಳನ್ನು ಕ್ರೋಢೀಕರಿಸಿರಿ. ಅಗತ್ಯವೆನಿಸಿದ್ದಲ್ಲಿ ಪುಟ್ಟ ಲಿಖಿತ ಪರೀಕ್ಷೆಯನ್ನೂ ರೂಪಣಾತ್ಮಕ ಮೌಲ್ಯಾಂಕನದ ಭಾಗವಾಗಿ ಮಾಡಬಹುದು. | 15 | 22-09-2022<br>ರಿಂದ<br>24-09-2022 |
| **ರೂಪಣಾತ್ಮಕ ಮೌಲ್ಯಾಂಕನ–3:**<br>ರೂಪಣಾತ್ಮಕ ಮೌಲ್ಯಾಂಕನ–1ರಲ್ಲಿ ಹೇಳಿದಂತೆ ಕ್ರಮವಹಿಸಿರಿ. | 15 | 26-12-2022<br>ರಿಂದ<br>28-12-2022 |
| **ರೂಪಣಾತ್ಮಕ ಮೌಲ್ಯಾಂಕನ–4:**<br>ರೂಪಣಾತ್ಮಕ ಮೌಲ್ಯಾಂಕನ–2ರಲ್ಲಿ ಹೇಳಿದಂತೆ ಕ್ರಮವಹಿಸಿರಿ. | 15 | 04-02-2023<br>ರಿಂದ<br>06-02-2023 |

- **ಸಂಕಲನಾತ್ಮಕ ಮೌಲ್ಯಮಾಪನ (Summative Assessment):** ಎಂದಿನಂತೆ ಈ ಶೈಕ್ಷಣಿಕ ವರ್ಷದಲ್ಲಿಯೂ 2 ಸಂಕಲನಾತ್ಮಕ ಮೌಲ್ಯಮಾಪನಗಳು ಇರಲಿವೆ. ಆಯಾ ಅವಧಿಗೆ ನಿಗದಿಯಾಗಿರುವ ಅಥವಾ ಸಾಧನೆಯಾಗಿರುವ ಕಲಿಕಾ ಪ್ರಗತಿಯನ್ನು ಸಂಕಲನಾತ್ಮಕವಾಗಿ ಮೌಲ್ಯಮಾಪನ ಮಾಡಲಾಗುತ್ತದೆ. ಇವು ಸಿಸಿಇ ಹೇಳುವಂತೆ ಪ್ರಶ್ನೆ ಪತ್ರಿಕೆ ಆಧಾರಿತವಾಗಿ ನಡೆಯಲಿವೆ. ತಮ್ಮ ತರಗತಿ ಸನ್ನಿವೇಶಕ್ಕೆ ಅನುಗುಣವಾಗಿ ಸುಗಮಕಾರರು ಸ್ವತಃ ಪ್ರಶ್ನೆ ಪತ್ರಿಕೆಗಳನ್ನು ರಚಿಸಿಕೊಳ್ಳಬೇಕು. ನಂತರ ಸುಗಮಕಾರರು ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಾಂಕನ ಮಾಡಿ ಗುಣಾಂಕಗಳನ್ನು ನೀಡಿ ಅವುಗಳನ್ನು ಶ್ರೇಣಿಗೆ ಪರಿವರ್ತಿಸಿ ಪ್ರಗತಿಪತ್ರದಲ್ಲಿ ದಾಖಲಿಸುವುದು.

**ದಿನಾಂಕ 25-04-2022ರ ಸುತ್ತೋಲೆಯಲ್ಲಿ ಹೊರಡಿಸಿದ ಹಾಗೆ: 4ರಿಂದ 9ನೇ ತರಗತಿಗೆ**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| **ಸಂಕಲನಾತ್ಮಕ ಮೌಲ್ಯಮಾಪನ– 1:**<br>ಈ ವರ್ಷ ಕಲಿಕಾ ಹಾಳೆಗಳಲ್ಲಿ ನಿಗದಿಪಡಿಸಿದ ಒಟ್ಟು ಕಲಿವಿನ ಫಲದ ಸಂಂಖ್ಯೆಗಳ ಶೇ 40 ರಷ್ಟು ಕಲಿಕಾ ಫಲಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸುವುದು. ಲಿಖಿತ ಪರೀಕ್ಷೆಯ ಪ್ರಶ್ನೆಗಳು ಸಾಮರ್ಥ್ಯ/ಕಲಿಕಾಫಲಗಳ ಗಳಿಕೆ ಪರೀಕ್ಷಿಸುವಂತಿರಬೇಕು ಹೊರತು ವಿಷಯ/ಘಟಕ ಅಂಶವನ್ನಲ್ಲ.<br><br>**1ರಿಂದ 5ನೇ ತರಗತಿಗಳಿಗೆ:** 20 ಲಿಖಿತ + 20 ಮೌಖಿಕ = 40 ಅಂಕಗಳಿಗೆ ಪರೀಕ್ಷೆ ನಡೆಸಿ, ಇಂಗ್ಲೀಷ್ ಭಾಷೆಗೆ 10 ಲಿಖಿತ + 30 ಮೌಖಿಕ = 40 ಅಂಕಗಳಿಗೆ ಪರೀಕ್ಷೆ ನಡಿಸುವುದು.<br><br>**6ರಿಂದ 8ನೇ ತರಗತಿಗಳಿಗೆ:** 30 ಲಿಖಿತ + 10 ಮೌಖಿಕ = 40 ಅಂಕಗಳಿಗೆ ಪರೀಕ್ಷೆ ನಡೆಸುವುದು.<br><br>9ನೇ ತರಗತಿಗೆ 10ನೇ ತರಗತಿಯ ಮಾದರಿಯಲ್ಲಿ ವೇಟೇಜ್ ನೀಡಿ ಪರೀಕ್ಷೆ ಸಡೆಸುವುದು.<br><br>ಮೊದಲನೆಯ ಸಂಕಲನಾತ್ಮಕ ಪರೀಕ್ಷೆಯಲ್ಲಿ ಎರಡು ಹಂತದ ಪ್ರಶ್ನೆ ಪತ್ರಿಕೆ ತಯಾರಿಸಿಕೊಳ್ಳಬಹುದಾಗಿದೆ.<br><br>▪ ಮೊದಲ ಹಂತದಲ್ಲಿ ಚುರುಕಾಗಿ ಕಲಿಕಾ ಫಲಗಳನ್ನು ಗಳಿಸಿದ | 40 | 17-10-2022<br>ರಿಂದ<br>25-10-2022 |

| | | |
|---|---|---|
| ಮಕ್ಕಳಿಗೆ ಅನ್ವಯಿಸುವ ಪ್ರಶ್ನೆ ಪತ್ರಿಕೆ.<br>▪ ನಂತರದ ಹಂತದಲ್ಲಿ ಕಲಿಕಾ ಫಲಗಳನ್ನು ಗಳಿಸಲು ಸಮಸ್ಯೆಯಾದ ತೀರ ಹಿಂದುಳಿದ ಮಕ್ಕಳಿಗೆ ಪ್ರತ್ಯೇಕ ಪ್ರಶ್ನೆ ಪತ್ರಿಕೆಯಲ್ಲಿ ಮೌಲ್ಯಾಂಕನ ಮಾಡಿ ಅವರ ಮಾನಸಿಕ ಸುರಕ್ಷತೆಯನ್ನು ಕಾಪಾಡುವುದು. | | |
| **ಸಂಕಲನಾತ್ಮಕ ಮೌಲ್ಯಮಾಪನ– 2:**<br>ಈ ವರ್ಷ ಕಲಿಕಾ ಹಾಳೆಗಳಲ್ಲಿ ನಿಗದಿಪಡಿಸಿದ ಒಟ್ಟು ಕಲಿವಿನ ಫಲದ ಸಂಖ್ಯೆಗಳ ಶೇ 60 ರಷ್ಟು ಕಲಿಕಾ ಫಲಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸುವುದು. (ಮೊದಲ ಸ.ಮೌ ಅಡಿ ಶೇ 40 ರ ಪರೀಕ್ಷೆಯಾಗಿರುತ್ತದೆ) ಲಿಖಿತ ಪರೀಕ್ಷೆಯ ಪ್ರಶ್ನೆಗಳು ಸಾಮರ್ಥ್ಯ/ಕಲಿಕಾಫಲಗಳ ಗಳಿಕೆ ಪರೀಕ್ಷಿಸುವಂತಿರಬೇಕು ಹೊರತು ವಿಷಯ/ಘಟಕ ಅಂಶವನ್ನಲ್ಲ.<br><br>**1ರಿಂದ 5ನೇ ತರಗತಿಗಳಿಗೆ:** 20 ಲಿಖಿತ + 20 ಮೌಖಿಕ = 40 ಅಂಕಗಳಿಗೆ ಪರೀಕ್ಷೆ ನಡೆಸಿ, ಇಂಗ್ಲೀಷ್ ಭಾಷೆಗೆ 10 ಲಿಖಿತ + 30 ಮೌಖಿಕ = 40 ಅಂಕಗಳಿಗೆ ಪರೀಕ್ಷೆ ನಡಿಸುವುದು.<br><br>**6ರಿಂದ 8ನೇ ತರಗತಿಗಳಿಗೆ:** 30 ಲಿಖಿತ + 10 ಮೌಖಿಕ = 40 ಅಂಕಗಳಿಗೆ ಪರೀಕ್ಷೆ ನಡೆಸುವುದು.<br><br>9ನೇ ತರಗತಿಗೆ 10ನೇ ತರಗತಿಯ ಮಾದರಿಯಲ್ಲಿ ವೇಟೇಜ್ ನೀಡಿ ಪರೀಕ್ಷೆ ಸಡೆಸುವುದು. | 40 | 01-04-2023<br>ರಿಂದ<br>05-04-2023 |

**ವರ್ಷದ ಕೊನೆಯಲ್ಲಿ ಒಟ್ಟು ಫಲಿತಾಂಶ ಪ್ರಕಟಣೆ:**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| ಫಲಿತಾಂಶ ಪ್ರಕಟಣೆ | ಒಟ್ಟು 100 ಅಂಕಗಳಿಗೆ | **1-8**ನೇ ತರಗತಿಗಳಿಗೆ ಸಮುದಾಯದತ್ತ ಶಾಲೆ ಕಾರ್ಯಕ್ರಮ ದಿನದಂದು ಫಲಿತಾಂಶ ಪ್ರಕಟಿಸುವುದು. |

**ಕೆಳಗಿನ ಪಟ್ಟಿಯು ಕಲಿಕಾ ಚೇತರಿಕೆ ಉಪಕ್ರಮದ ಒಟ್ಟು ಮೌಲ್ಯಮಾಪನದ ಚಿತ್ರಣವನ್ನು ನೀಡುತ್ತದೆ: 4ರಿಂದ 9ನೇ ತರಗತಿಗೆ**

| ಮೌಲ್ಯಮಾಪನದ ಹಂತ | ಅವಧಿ | ಮೌಲ್ಯಮಾಪನದ ಕ್ಷೇತ್ರ |
|---|---|---|
| **ನೈದಾನಿಕ** | **ಮೇ ಅಂತ್ಯದೊಳಗೆ** | ಆರಂಭಿಕ ಸಾಕ್ಷರತೆ/ಪೂರ್ವ ತರಗತಿಯ ಕಲಿಕಾ ಫಲಗಳು |
| **ರೂಪಣಾತ್ಮಕ–1** | ಜುಲೈ ತಿಂಗಳ ಕೊನೆಯ ವಾರ | ಆರಂಭಿಕ ಸಾಕ್ಷರತೆ/ಪೂರ್ವ ತರಗತಿಯ ಕಲಿಕಾ ಫಲಗಳು |
| **ರೂಪಣಾತ್ಮಕ–2** | ಸೆಪ್ಟಂಬರ್ ತಿಂಗಳ ಎರಡನೇ ವಾರ | ಆರಂಭಿಕ ಸಾಕ್ಷರತೆ/ಪೂರ್ವ ತರಗತಿಯ ಕಲಿಕಾ ಫಲಗಳು |
| **ಸಂಕಲನಾತ್ಮಕ–1** | ಸೆಪ್ಟಂಬರ್ ತಿಂಗಳ ಕೊನೆಯ ವಾರ | ಆರಂಭಿಕ ಸಾಕ್ಷರತೆ/ಪೂರ್ವ ತರಗತಿಯ ಕಲಿಕಾ ಫಲಗಳು |
| **ರೂಪಣಾತ್ಮಕ–3** | ಡಿಸೆಂಬರ್ ತಿಂಗಳ ಕೊನೆಯ ವಾರ | ಪೂರ್ವ ತರಗತಿಯ ಕಲಿಕಾ ಫಲಗಳು |
| **ರೂಪಣಾತ್ಮಕ–4** | ಮಾರ್ಚ್ ತಿಂಗಳ ಮೂರನೇ ವಾರ | ಪೂರ್ವ ಮತ್ತು ತರಗತಿಯ ಪ್ರಸಕ್ತ ಕಲಿಕಾ ಫಲಗಳು |
| **ಸಂಕಲನಾತ್ಮಕ–2** | ಮಾರ್ಚ್ ತಿಂಗಳ ಕೊನೆಯ ವಾರ | ಪೂರ್ವ ಮತ್ತು ತರಗತಿಯ ಪ್ರಸಕ್ತ ಕಲಿಕಾ ಫಲಗಳು |

## ನಲಿ–ಕಲಿ ತರಗತಿಯಲ್ಲಿನ ಮೌಲ್ಯಮಾಪನ:

### ವಿದ್ಯಾಪ್ರವೇಶ ಕಾರ್ಯಕ್ರಮದಲ್ಲಿನ ಮೌಲ್ಯಮಾಪನದ ವಿಧಾನಗಳು:

ವಿದ್ಯಾಪ್ರವೇಶದಲ್ಲಿ ಎರಡು ವಿಧಾನದ ಮೌಲ್ಯಮಾಪನ ಪ್ರಕ್ರಿಯೆಯನ್ನು ನಡೆಸಲಾಗುವುದು. ಒಂದನೆಯದು ಪ್ರತಿ ಹದಿನೈದು ದಿನಗಳಿಗೊಮ್ಮೆ ನಡೆಸುವ **'ನನ್ನ ಸಾಧನೆ'** ಎಂಬ ಪಕ್ರಿಯೆ. ಹದಿನೈದು ದಿನಗಳ ಕಾಲ ಮಕ್ಕಳು ಮಾಡಿದ ಚಟುವಟಿಕೆಯನ್ನು ಆಧರಿಸಿ ಇದನ್ನು ಮಾಡುವುದು. ಪ್ರತಿ ಮಗುವಿಗೂ ವೈಯಕ್ತಿಕವಾಗಿ ಪ್ರತ್ಯೇಕ ಹಾಳೆಯ ಮೂಲಕ ದಾಖಲೆಯನ್ನು ನಿರ್ವಹಿಸುವುದು ಮತ್ತು ಮಗುವಿನ ಪೋರ್ಟ್ ಫೋಲಿಯೋದಲ್ಲಿ (ಕೃತಿಸಂಪುಟ) ಸಂಗ್ರಹಿಸಿಡಬೇಕು. ಇನ್ನೊಂದು ವಿಧವಾದ ಮೌಲ್ಯಮಾಪನ ಎಂದರೆ, ಪ್ರತಿ ತಿಂಗಳಿಗೊಮ್ಮೆ 03 ತಿಂಗಳುಗಳ ಕಾಲ ನಡೆಸುವ **'ಸಮಗ್ರ'** ಮೌಲ್ಯಮಾಪನವಾಗಿರುತ್ತದೆ. ಇದನ್ನು ಸಹ ಪ್ರತಿ ಮಗುವಿಗೆ ಪ್ರತ್ಯೇಕವಾದ ಹಾಳೆಯ ಮೂಲಕ ದಾಖಲಿಸಿ, ಪೋಷಕರಿಂದಲೂ ಸಹಿ ಪಡೆಯಬೇಕು ನಂತರ ಈ ಹಾಳೆಗಳನ್ನು ಪೋರ್ಟ್ ಫೋಲಿಯೋದಲ್ಲಿ (ಕೃತಿಸಂಪುಟ) ಸಂಗ್ರಹಿಸಿಡಬೇಕು ಮತ್ತು ಕ್ರೋಢಿಕರಣ ವಹಿಯಲ್ಲಿಯೂ ದಾಖಲಿಸುವುದು.

### ಕಲಿಕಾ ಚೇತರಿಕೆ ಉಪಕ್ರಮದಲ್ಲಿನ ಮೌಲ್ಯಮಾಪನ ವಿಧಾನಗಳು:

ಕಲಿಕಾ ಚೇತರಿಕೆ ಉಪಕ್ರಮ ಅನುಷ್ಠಾನ ಸಂದರ್ಭದಲ್ಲಿ ನಡೆಸುವ ಮೌಲ್ಯಮಾಪನವನ್ನು ಈ ಹಿಂದಿನ ವರ್ಷಗಳಲ್ಲಿ ನಡೆಸುತ್ತಿದ್ದಂತೆ ನಿಗದಿಪಡಿಸದ ತಿಂಗಳ ಅಂತ್ಯಕ್ಕೆ ಗುರಿ ಮತ್ತು ಮಕ್ಕಳ ಸಾಧನೆಯನ್ನು ಆಧರಿಸಿ ಶೇಕಡಾವನ್ನು ಕಂಡುಹಿಡಿದು ನಂತರ ಶ್ರೇಣಿಗೆ ಪರಿವರ್ತಿಸಿ ದಾಖಲೆಗಳಲ್ಲಿ ನಮೂದಿಸುವುದು.

**ನಲಿ–ಕಲಿ ತರಗತಿಗಳಲ್ಲಿ ಅನುಷ್ಠಾನಗೊಳಿಸಬೇಕಾದ ಮೌಲ್ಯಮಾಪನದ ವೇಳಾಪಟ್ಟಿ**

| **ಮೌಲ್ಯಮಾಪನ ವಿಧಗಳು** | **ಅನುಷ್ಠಾನದ ವೇಳಾಪಟ್ಟಿ** |
|---|---|
| ರೂಪಣಾತ್ಮಕ ಮೌಲ್ಯಮಾಪನ–FA-01 | ಅಕ್ಟೋಬರ್-22 |
| ರೂಪಣಾತ್ಮಕ ಮೌಲ್ಯಮಾಪನ–FA-02 | ನವೆಂಬರ್-22 |
| ಸಂಕಲನಾತ್ಮಕ ಮೌಲ್ಯಮಾಪನ–SA-01 | ಡಿಸೆಂಬರ್-22 |
| ರೂಪಣಾತ್ಮಕ ಮೌಲ್ಯಮಾಪನ–FA-03 | ಜನವರಿ-23 |
| ರೂಪಣಾತ್ಮಕ ಮೌಲ್ಯಮಾಪನ–FA-04 | ಫೆಬ್ರವರಿ-23 |
| ಸಂಕಲನಾತ್ಮಕ ಮೌಲ್ಯಮಾಪನ–SA-02 | ಮಾರ್ಚ್-23 |

**ಸೂಚನೆ:** 2022-23ನೇ ಸಾಲಿನ ಕಲಿಕಾ ಚೇತರಿಕೆ ಉಪಕ್ರಮದ ಅನುಷ್ಠಾನಕ್ಕಾಗಿ ಮಾರ್ಪಡಿಸಿದ ಕಲಿಕಾ ಏಣಿಯನ್ನು ನೀಡಲಾಗಿದೆ. ಅದರಂತೆಯೇ, ಮಕ್ಕಳ ಪ್ರಗತಿ ನೋಟವನ್ನು ಸಹ ಶಿಕ್ಷಕರು ಮಾರ್ಪಡಿಸಿಕೊಳ್ಳಬೇಕು. ಮಕ್ಕಳ ಪ್ರಗತಿ ನೋಟದಲ್ಲಿ ಈ ಹಿಂದಿನಂತೆ ಪ್ರಗತಿಯನ್ನು ದಾಖಲಿಸುವುದು ಕಡ್ಡಾಯ. ಶಿಕ್ಷಕರು ಪ್ರತಿ ದಿನ ನಿರ್ವಹಿಸುವ ಚಟುವಟಿಕೆಗಳ ದಾಖಲೆಗಾಗಿ ದಿನಚರಿ ಪ್ರಕ್ರಿಯೆಯನ್ನು ಯಥಾವತ್ತು ಮುಂದುವರೆಸುವುದು.

## ವಿದ್ಯಾಪ್ರವೇಶ ಮತ್ತು ಕಲಿಕಾ ಚೇತರಿಕೆ

### ವಿದ್ಯಾಪ್ರವೇಶ – ಏನು? ಏಕೆ?

ಹೊಸ ಶಿಕ್ಷಣ ನೀತಿ–2020 ರ ಆಶಯದಂತೆ ಒಂದನೆಯ ತರಗತಿ ಮಕ್ಕಳಿಗೆ 3 ತಿಂಗಳ ಅಥವಾ 12 ವಾರಗಳ "ಆಡುತ್ತಾ ಕಲಿಯುವ" ಶಾಲಾ ಸಿದ್ಧತಾ ಕಾರ್ಯಕ್ರಮದ ಭಾಗವಾಗಿ ವಿದ್ಯಾ ಪ್ರವೇಶವನ್ನು ಶಿಫಾರಸ್ಸು ಮಾಡಲಾಗಿದೆ. ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದಾಗಿ ಶಾಲಾ ಶಿಕ್ಷಣದಿಂದ ದೂರ ಉಳಿದ ಮಕ್ಕಳನ್ನು ಶಾಲಾ ಸನ್ನಿವೇಶಕ್ಕೆ ಆತ್ಮೀಯವಾಗಿ ಆಹ್ವಾನಿಸಲು, ಕಲಿಕಾ ಪ್ರಕ್ರಿಯೆಗೆ ಅವರನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲು ಇದರಲ್ಲಿ ಅವಕಾಶ ಕಲ್ಪಿಸಿದೆ. ಎಲ್ಲಾ ಮಕ್ಕಳಿಗೂ ಮನೆ ಮತ್ತು ಶಾಲೆಯಲ್ಲಿ ಸಂತಸದಾಯಕ, ಭಾವನಾತ್ಮಕ, ಸುರಕ್ಷಿತ ಕಲಿಕಾ ವಾತಾವರಣವನ್ನು ಖಾತ್ರಿಪಡಿಸುವ ಅಗತ್ಯತೆ ಬಗ್ಗೆ ಇದು ಮಾರ್ಗದರ್ಶಿಸುತ್ತದೆ. ಒತ್ತಡ ಮುಕ್ತ ವಾತಾವರಣದಲ್ಲಿ ಮಕ್ಕಳು ಸಂತಸದಾಯಕವಾಗಿ ಕಲಿಯುವ ಅವಕಾಶಗಳೊಂದಿಗೆ ದಿವ್ಯಾಂಗ ಮಕ್ಕಳ ಅಗತ್ಯತೆಯನ್ನೂ ಗುರುತಿಸಿಕೊಳ್ಳುವುದರ ಕಡೆಗೂ ಆದ್ಯ ಗಮನ ನೀಡುತ್ತದೆ. ಮಗುವಿನ ಮಾತೃಭಾಷೆ ಅಥವಾ ಮನೆಯ ಭಾಷೆಯನ್ನು ಸ್ವೀಕರಿಸುವುದರ ಜೊತೆಗೆ ಉಳಿದ ಭಾಷಾ ಕಲಿಕೆಗೂ ತರಗತಿ ಕೋಣೆಗಳು ಅವಕಾಶ ಕಲ್ಪಿಸಬೇಕು ಎನ್ನುವುದನ್ನು ನಿರ್ದೇಶಿಸುತ್ತದೆ.

### ವಿದ್ಯಾ ಪ್ರವೇಶದ ಉದ್ದೇಶಗಳು:

- ವಿವಿಧ ಸನ್ನಿವೇಶ/ಹಿನ್ನೆಲೆಗಳಿಂದ ಶಾಲೆಯನ್ನು ಪ್ರವೇಶಿಸುವ ವಿದ್ಯಾರ್ಥಿಗಳಲ್ಲಿ ಶಾಲಾ ಸಿದ್ಧತೆಯೊಂದಿಗೆ ಒಂದನೇ ತರಗತಿ ಕಲಿಕೆಗೆ ಅಣಿಗೊಳಿಸುವುದು.
- ಸರಳ/ಮೃದು ಧೋರಣೆಯೊಂದಿಗೆ ಒಂದನೇ ತರಗತಿ ಕಲಿಕೆಗೆ ಮಕ್ಕಳನ್ನು ಮಾನಸಿಕವಾಗಿ, ಭಾವನಾತ್ಮಕವಾಗಿ, ಶಾರೀರಿಕವಾಗಿ ಸಿದ್ಧಗೊಳಿಸುವುದು.
- ಆಟ ಕೇಂದ್ರಿತ, ಸಂತಸದಾಯಕ ವಾತಾವರಣದಲ್ಲಿ, ವಯೋಮಾನ ಆಧರಿಸಿದ ಯುಕ್ತ ಕಲಿಕಾ ಅನುಭವಗಳನ್ನು ಒದಗಿಸಿಕೊಡುವ ಮೂಲಕ ಸಮಗ್ರ ಅಭಿವೃದ್ಧಿಯ ಕಡೆಗೆ ಮಕ್ಕಳನ್ನು ಮುನ್ನಡೆಸುವುದು.
- ಆಟಗಳ ಮೂಲಕ ಓದು–ಬರಹದ ಕಲಿಕೆ ಮತ್ತು ಸಂಖ್ಯಾ ಜ್ಞಾನ ಕೌಶಲವನ್ನು ಗಳಿಸುವುದರೊಂದಿಗೆ ಬುನಾದಿ ಸಾಮರ್ಥ್ಯಗಳಲ್ಲಿ ಹಿಡಿತ ಸಾಧಿಸುವುದು.


### ವಿದ್ಯಾ ಪ್ರವೇಶದ ಬೋಧನಾ ತತ್ವ:

1. **ಆಟದ ಮಾಧ್ಯಮ**
   - ಮುಕ್ತ ಆಟ:– ಮುಕ್ತ ಆಟಗಳು ಮಕ್ಕಳ ಆಯ್ಕೆಗಳಿಗೆ ಮತ್ತು ಸ್ವಯಂ ತೀರ್ಮಾನಗಳಿಗೆ ಹಾಗೂ ಇತರರ ಅಭಿರುಚಿ ಆಸಕ್ತಿಯೊಂದಿಗೆ ಅವರ ಹಕ್ಕುಗಳನ್ನು ಗ್ರಹಿಸಿಕೊಳ್ಳಲು ನೆರವಾಗುತ್ತವೆ.
   - ಆಸಕ್ತಿದಾಯಕ ತರಗತಿ ಕೋಣೆಯ ಪ್ರಕ್ರಿಯೆಗೆ ಶಿಫಾರಸ್ಸು ಮಾಡುವುದಲ್ಲದೆ ಅನ್ವೇಷಣಾ ಪ್ರವೃತ್ತಿಗೆ, ಸಂಗೀತಾಭಿರುಚಿಗೆ, ಗೊಂಬೆಗಳ ಮೂಲೆಗಳನ್ನು ಸಿದ್ಧಗೊಳಿಸುವುದರ ಬಗ್ಗೆ ಬೆಳಕು ಚೆಲ್ಲುತ್ತದೆ.
   - ನಿರ್ದೇಶಿತ ಆಟಗಳು:– ಈ ಆಟಗಳು ಶಿಕ್ಷಕರ ನಿರ್ದೇಶನದೊಂದಿಗೆ ಕೂಡಿದ್ದು ಸರಿಯಾದ ಮಾರ್ಗದರ್ಶನವನ್ನು ನೀಡುವುದರ ಮೂಲಕ ಇಂತಹ ಆಟಗಳನ್ನು ಆಡಿಸಬೇಕಿದೆ. ಪೂರಕ ಒಳಾಂಗಣ ಮತ್ತು ಹೊರಾಂಗಣ ವಾತಾವರಣವನ್ನು ಸೃಜಿಸಿಕೊಡುವ ಮೂಲಕ ನಿರೀಕ್ಷಿತ ಕಲಿಕೆಯ ಫಲಗಳನ್ನು ತಲುಪಬಹುದು.
2. **ಸಂವಹನ**
   - ಆಟ ಕೇಂದ್ರಿತ ಕಲಿಕಾ ಪ್ರಕ್ರಿಯೆಯು ಮಗು ಮತ್ತು ಶಿಕ್ಷಕ, ಮಗು ಮತ್ತು ಸಹವರ್ತಿ, ಮಗು ಮತ್ತು ಒಡಹುಟ್ಟಿದವರ ನಡುವಿನ ಸಂವಹನಕ್ಕೆ ಆದ್ಯತೆ ನೀಡುತ್ತದೆ.
   - 03 ರೀತಿಯ ಸಂವಹನವನ್ನು ವಿದ್ಯಾಪ್ರವೇಶದಲ್ಲಿ ಗುರುತಿಸಲಾಗಿದೆ.
     1. ಸಹವರ್ತಿ ನಡುವಿನ ಸಂವಹನ,
     2. ಸಾಮಗ್ರಿಯೊಂದಿಗಿನ ಸಂವಹನ,
     3. ಹಿರಿಯರು ಅಥವಾ ಶಿಕ್ಷಕರೊಂದಿಗಿನ ಸಂವಹನ
3. **ಪರಿಸರ**
   - ಮಕ್ಕಳು ಸ್ವಭಾವಿಕವಾಗಿ ಕುತೂಹಲಕಾರಿಗಳಾಗಿದ್ದು, ಪ್ರತಿಯೊಂದರ ಬಗ್ಗೆ ತಿಳಿದುಕೊಳ್ಳಲು ಹೆಚ್ಚು ಆಸಕ್ತಿ ಹೊಂದಿರುತ್ತಾರೆ.

- ಮಕ್ಕಳ ಆಸಕ್ತಿಯನ್ನು ಒಪ್ಪಿಕೊಳ್ಳುವ ಮತ್ತು ಪ್ರೇರೇಪಿಸುವ ನಿಟ್ಟಿನಲ್ಲಿ ನಮ್ಮ ಚಟುವಟಿಕೆಗಳ ಸಾಮಗ್ರಿಗಳು ವಿನ್ಯಾಸಗೊಳ್ಳಬೇಕು.
- ಕೌಶಲ್ಯಾಧಾರಿತ ವಸ್ತುಗಳು, ಮಾಡಿಕಲಿ ಚಟುವಟಿಕಾ ಸಾಮಗ್ರಿಗಳು, ಊಹಾ ಶಕ್ತಿಯನ್ನು ಹೆಚ್ಚಿಸುವಂತಹ ಚಿತ್ರ ಸರಣಿಗಳೊಂದಿಗೆ ಮುಕ್ತವಾಗಿ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವಂತಹ ತರಗತಿ ಸನ್ನಿವೇಶವನ್ನು ನಿರ್ಮಿಸುವುದು ಅತಿ ಅವಶ್ಯ

**4. ಯೋಜನೆ ಮತ್ತು ನಿರ್ವಹಣೆ**

- ಮೂಲ ಸಾಮರ್ಥ್ಯ ಹಾಗೂ ಕಲಿಕೆಯ ಫಲಗಳನ್ನು ಅಭಿವೃದ್ಧಿ ಗುರಿಗಳ ಅಡಿಯಲ್ಲಿ ನಿರ್ಧರಿಸಲಾಗಿದೆ.
- ನನ್ನ ಸಮಯ (Free Indore play) ಶೀರ್ಷಿಕೆ ಅಡಿಯಲ್ಲಿ 8 ರೀತಿಯ ಚಟುವಟಿಕಾ ಮೂಲೆಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು ಶಿಕ್ಷಕರು ಅಗತ್ಯ ಸಾಮಗ್ರಿಗಳ ಸಂಗ್ರಹದೊಂದಿಗೆ ಯೋಜನೆ ತಯಾರಿಸಿಕೊಳ್ಳುವುದು.
- ದಿನವಾರು ಚಟುವಟಿಕೆಗಳಿಗೆ ಸಲಹಾತ್ಮಕ ಸೂಚನೆ ಮತ್ತು ಮಾರ್ಗದರ್ಶನಗಳನ್ನು ನೀಡಲಾಗಿದೆ.
- ಯೋಜನೆಯ ಸಿದ್ಧತೆಯ ಪೂರ್ವದಲ್ಲಿ ಶಿಕ್ಷಕರು ಚಟುವಟಿಕೆ/ಪಠ್ಯಕ್ರಮ ಬಯಸುವ ಸಾಮಗ್ರಿಗಳ ಅಗತ್ಯತೆಯ ಕಡೆಗೆ ಗಮನ ಹರಿಸಿ, ಸ್ಥಳೀಯ ಸಂಪನ್ಮೂಲಗಳನ್ನು ಹಾಗೂ ವೆಚ್ಚರಹಿತ ಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳುವುದು.
- ಮಕ್ಕಳನ್ನು ಪುನರಾವರ್ತಿತ ಚಟುವಟಿಕೆಗಳಿಗೆ ಒಳಪಡಿಸುವ ಸಂದರ್ಭದಲ್ಲಿ ಅಗತ್ಯವಿರುವ ಹೆಚ್ಚುವರಿ ಕಲಿಕಾಹಾಳೆಗಳನ್ನು ಬಳಕೆ ಮಾಡಿಕೊಳ್ಳುವ ಮೂಲಕ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವುದು.




**ಆದ್ಯತೆಗೆ ಒಳಪಡುವ ಅಂಶಗಳು**

- ಮೊದಲು ಪ್ರತಿ ಮಗುವಿನ ಹಿನ್ನಲೆಯನ್ನು ಅರ್ಥ ಮಾಡಿಕೊಳ್ಳಬೇಕು
  - ಸಾಧ್ಯವಾದಲ್ಲಿ ಪ್ರತಿ ಮಗುವಿನ ಮನೆಗೆ ಭೇಟಿ ನೀಡುವುದು
  - ಮಗುವಿನ ಕುಟುಂಬದೊಂದಿಗಿನ ಸಂಬಂಧವನ್ನು ಧನಾತ್ಮಕವಾಗಿ ವಿಸ್ತರಿಸುವುದು
- ಪ್ರತಿ ಮಗುವೂ ಅವನ ಅಥವಾ ಅವಳ ಸಾಮರ್ಥ್ಯದ ಮೇಲೆ ಸ್ವತಂತ್ರವಾಗಿ ಕಲಿಯುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು
- ಶಿಕ್ಷಕರ ಪಾತ್ರ ನಿರ್ವಹಣೆಯೆಂದರೆ, ಮಕ್ಕಳನ್ನು ಪ್ರೇರೇಪಿಸುವುದು, ಅವರ ಹೃದಯಕ್ಕೆ ಮೃದುಧೋರಣೆಯ ಪ್ರತಿಸ್ಪಂದನೆ ನೀಡುವುದು
- ನೀವು ಯೋಜನೆ ರೂಪಿಸಿಕೊಂಡಿದ್ದರೂ, ತರಗತಿಯ ಸನ್ನಿವೇಶಕ್ಕೆ ಹಾಗೂ ಮಕ್ಕಳ ಆಸಕ್ತಿಗೆ ಅನುಗುಣವಾಗಿ ಅದನ್ನು ಅಗತ್ಯ ಬದಲಾವಣೆಗೆ ಒಳಪಡಿಸಬಹುದಾಗಿದೆ.
- ಯೋಜನೆಯನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಶಿಕ್ಷಕ ನಿರ್ದೇಶಿತ, ಮಗು ನಿರ್ದೇಶಿತ ಹಾಗೂ ಒಳಾಂಗಣ, ಹೊರಾಂಗಣ ಮತ್ತು ದೊಡ್ಡ-ಚಿಕ್ಕ ಗುಂಪುಗಳ ಚಟುವಟಿಕೆಗಳ ಅನುಷ್ಠಾನವನ್ನು ಮರೆಯುವಂತಿಲ್ಲ.

- ➢ ಸಾಧ್ಯವಾದಷ್ಟು ಸ್ಥಳೀಯವಾಗಿ ಲಭ್ಯವಾಗುವ ಸಾಮಗ್ರಿ ಮತ್ತು ಗೊಂಬೆಗಳ ಬಳಕೆಯಿರಲಿ. ಮಕ್ಕಳು ತಮ್ಮ ಕೌಶಲ್ಯವನ್ನು ಬಳಸಿ ಸಾಮಗ್ರಿಗಳನ್ನು ಸುಲಭವಾಗಿ ಉಪಯೋಗಿಸಲು ಮತ್ತು ಸುರಕ್ಷಿತ ಕ್ರಮಗಳು ಒಳಗೊಂಡಿರುವಂತೆ ನೋಡಿಕೊಳ್ಳುವುದು.

**ವಿದ್ಯಾಪ್ರವೇಶ–ಅಭಿವೃದ್ಧಿ ಗುರಿ ಆಧರಿಸಿದ ಸಾಮರ್ಥ್ಯ ಮತ್ತು ಕಲಿಕಾ ಫಲಗಳು**

**ಅಭಿವೃದ್ಧಿ ಗುರಿ–1: ಉತ್ತಮ ಆರೋಗ್ಯ ಮತ್ತು ಸ್ವಾಸ್ಥ್ಯ ನಿರ್ವಹಣೆಯಲ್ಲಿ ಮಕ್ಕಳು ಸಮರ್ಥರಾಗುವುದು**

| ಕ್ರ.ಸ | ನಿಪುಣ್ ಕ್ರ.ಸಂ | ಕಲಿಕಾ ಫಲಗಳು |
|---|---|---|
| 1 | HW 3.1 | ತನ್ನ ಹಾಗೂ ಇತರರ ದೈಹಿಕ ಗುಣಲಕ್ಷಣಗಳು ಲಿಂಗ, ಆಸಕ್ತಿ, ಇಷ್ಟ ಮತ್ತು ಇಷ್ಟವಿಲ್ಲದಿರುವ ಬಗ್ಗೆ ವಿವರಿಸುವರು.<br>Describes self and others in terms of physical characteristics, gender, interests, likes and dislikes. |
| 2 | HW 3.2 | ಅವಿಭಕ್ತ ಕುಟುಂಬದ ಸದಸ್ಯರ ನಡುವಿನ ಸಂಬಂಧಗಳನ್ನು ತಿಳಿದು ವ್ಯಕ್ತಪಡಿಸುವರು.<br>Exhibits the understanding ofrelationship with extended family members. |
| 3 | HW 3.3 | ಚಟುವಟಿಕೆಗಳಲ್ಲಿ ಸ್ವಾತಂತ್ರ್ಯವನ್ನು ಪ್ರದರ್ಶಿಸುವರು.<br>Demonstrates independence in activities. |
| 4 | HW 3.4 | ಏಕಕಾಲದಲ್ಲಿ ಸೂಚನೆಗಳು ಮತ್ತು ಸರಳ ನಿಯಮಗಳನ್ನು ಪಾಲಿಸುವರು.<br>Follows instructions and simple rules at the same time. |
| 5 | HW 3.5 | ದೈನಂದಿನ ಚಟುವಟಿಕೆಗಳಲ್ಲಿ ಆಗುವ ಬದಲಾವಣೆಗೆಗಳಿಗೆ, ಹೊಂದಿಕೊಳ್ಳುವರು.<br>Shows adaptability to any changes in routine/ daily schedule. |
| 6 | HW 3.6 | ಯೋಜಿತ ಕಾರ್ಯಗಳು/ ವಿಷಯಗಳನ್ನು ಪೂರ್ಣಗೊಳಿಸುವುದರ ಮೇಲೆ ಗಮನ ಕೇಂದ್ರೀಕರಿಸುವರು.<br>Focuses attention to complete tasks/topics assigned by others. |
| 7 | HW 3.7 | ಭಾವನೆಗಳನ್ನು ಶಾಬ್ದಿಕ ಮತ್ತು ಅಶಾಬ್ದಿಕವಾಗಿ ವ್ಯಕ್ತಪಡಿಸುವರು. (ಸಂಜ್ಞೆಗಳು, ಚಿತ್ರಗಳು)<br>Expresses emotions through verbal and non-verbal modes (gestures, drawings). |
| 8 | HW 3.8 | ಆಧ್ಯತೆ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ಆಯ್ಕೆ ಮಾಡುವರು ಹಾಗೂ ಜವಾಬ್ದಾರಿ ತೆಗೆದುಕೊಳ್ಳುವರು.<br>Takes responsibility and makes choices basedon one's own preferences and interests. |
| 9 | HW 3.9 | ಗೊಂದಲಗಳಿಗೆ ಪರಿಹಾರಗಳನ್ನು ಸೂಚಿಸುವರು ಮತ್ತು ವಯೋಮಾನಕ್ಕೆ ಅನುಗುಣವಾಗಿ ಹೊಂದಾಣಿಕೆ ಮಾಡಿಕೊಳ್ಳುವರು.<br>Suggests solutions to conflicts and makes age appropriate adjustments. |
| 10 | HW 3.10 | ಆಟ ಆಡುವಾಗ ಮತ್ತು ಸಮಾಲೋಚನೆ ಮಾಡುವಾಗ ಇತರರ ಸಲಹೆಗಳಿಗೆ ಮನ್ನಣೆ/ಸಹಮತವನ್ನು ವ್ಯಕ್ತಪಡಿಸುವರು.<br>Demonstrates willingness to include other's ideas during interaction and play. |
| 11 | HW 3.11 | ದೊಡ್ಡ ಮತ್ತು ಸಣ್ಣ ಗುಂಪು ಚಟುವಟಿಕೆಗಳಲ್ಲಿ ಅಗತ್ಯವಿರುವ ಮಕ್ಕಳಿಗೆ ಸಹಾಯ ಮಾಡುವರು.<br>Helps peers who are in need during large and small group activities. |
| 12 | HW 3.12 | ವಿಭಿನ್ನ ಹಿನ್ನೆಲೆಯುಳ್ಳ ಹಾಗೂ ವಿಶೇಷ ಚೇತನ ಮಕ್ಕಳ ಬಗ್ಗೆ ಸ್ವೀಕಾರ ಭಾವನೆ ಮತ್ತು ಸಂವೇದನಾಶೀಲತೆಯನ್ನು ಪ್ರದರ್ಶಿಸುವರು.<br>Demonstrates sensitivity and acceptability towards children from diverse backgrounds including children with special needs. |

| | | |
|---|---|---|
| 13 | HW 3.13 | ಪ್ರಾಥಮಿಕ ಆರೋಗ್ಯ, ಸ್ವಚ್ಛತೆ, ಸುರಕ್ಷತೆ ಮತ್ತು ಸ್ವಾಸ್ಥ್ಯ ಅಭ್ಯಾಸಗಳು ಹಾಗೂ ಆರೋಗ್ಯಕರ ಆಹಾರಾಭ್ಯಾಸಗಳನ್ನು ನಿರ್ವಹಿಸುವರು ಮತ್ತು ಸುಧಾರಿತ ಸ್ವಾತಂತ್ರ್ಯವನ್ನು ಪ್ರದರ್ಶಿಸುವರು.<br>**Maintains and displays basic health, hygiene, sanitation practices, and healthy eating practices with increased independence.** |
| 14 | HW 3.14 | ಒಳ್ಳೆಯ ಮತ್ತು ಕೆಟ್ಟ ಸ್ಪರ್ಶದ ಬಗ್ಗೆ ಜಾಗೃತರಾಗಿರುವರು ಮತ್ತು ಅಪರಿಚಿತರಿಂದ ಅಂತರವನ್ನು ಕಾಯ್ದುಕೊಳ್ಳುವರು.<br>**Demonstrates awareness about good touch and bad touch and maintains distance from strangers.** |
| 15 | HW 3.15 | ಮನೆ, ಶಾಲಾ ಪೂರ್ವ ಅವಧಿ ಮತ್ತು ಆಟದ ಮೈದಾನಗಳಲ್ಲಿ ಸಾಮಾನ್ಯ ಸುರಕ್ಷತಾ ನಿಯಮಗಳನ್ನು ಅನುಸರಿಸುವರು.<br>**Follows basic rules of safety at home, preschool and playground.** |

| | | |
|---|---|---|
| 16 | HW 3.16 | ಸಮಗ್ರ ಚಲನಾ ಕೌಶಲಗಳನ್ನು ಸೂಕ್ತ ಸಹಕಾರದೊಂದಿಗೆ ಪ್ರದರ್ಶಿಸುವರು. (ಉದಾ: ಓಡುವುದು, ನೆಗೆಯುವುದು, ಎಸೆಯುವುದು, ಒದೆಯುವುದು, ಹಿಡಿಯುವುದು ಇತ್ಯಾದಿ)<br>**Demonstrates gross motor skills with greater coordination, control and strength; e.g., running, jumping, throwing, kicking and catching, etc.** |
| 17 | HW 3.17 | ಸಂಗೀತ ಮತ್ತು ಚಾಲನಾ ಚಟುವಟಿಕೆಗಳಲ್ಲಿ ಅವಕಾಶ ಸೃಷ್ಟಿಸಿಕೊಂಡು ಸೃಜನಾತ್ಮಕವಾಗಿ ಮತ್ತು ಸಕ್ರಿಯವಾಗಿ ಭಾಗವಹಿಸುವರು.<br>**Explores space and participates actively and creatively in music and movement activities.** |
| 18 | HW 3.18ಎ | ನಿಖರತೆ ಮತ್ತು ನಿಯಂತ್ರಣದೊಂದಿಗೆ ಸಮಗ್ರ ಚಲನಾ ಕೌಶಲಗಳನ್ನು ಪ್ರದರ್ಶಿಸುವರು.<br>**Exhibits fine motor skills with precision and control.** |
| 19 | HW 3.18ಬಿ | ಗೆರೆ ಹಾಕಿ ಕತ್ತರಿಸುವುದು, ನೀರು ಸುರಿಯುವುದು, ಅಂಗಿಯ ಗುಂಡಿ ಹಾಕುವುದು ಇತ್ಯಾದಿ ಸಂಕೀರ್ಣ ಕಾರ್ಯಗಳನ್ನು ಪೂರ್ಣಗೊಳಿಸಲು ಸಂಯೋಜಿತ ಚಲನೆಗಳನ್ನು ಬಳಸುವರು.<br>**Uses coordinated movements to complete complex tasks like cutting along a line, pouring, buttoning, etc.** |
| 20 | HW 3.18ಸಿ | ಚಿತ್ರ ಬಿಡಿಸಲು, ಬಣ್ಣ ಹಚ್ಚಲು, ಬರೆಯಲು ಸಾಮಗ್ರಿಗಳನ್ನು ಸೂಕ್ತ ರೀತಿಯಲ್ಲಿ ಹಿಡಿಯುವರು. (ಹೆಬ್ಬೆರಳು ಮತ್ತು ತೋರ್ಬೆರಳುಗಳ ಸಮನ್ವಯದೊಂದಿಗೆ)<br>**Uses the pincer grip (coordination of the index finger and thumb to hold an item) to hold and manipulate tools for drawing, painting, and writing.** |

ಮುಖ್ಯ ಘಟಕಾಂಶಗಳು

| ಕ್ರ.ಸಂ. | ಸಾಮರ್ಥ್ಯಗಳು |
|---|---|
| **ಆಲಿಸುವುದು ಮತ್ತು ಮಾತನಾಡುವುದು (Talking and Listening)** | |
| **1.** | ಅರ್ಥಗ್ರಹಿಕೆಯೊಂದಿಗೆ ಆಲಿಸುವುದು. (Listening with comprehension) |
| **2.** | ಸೃಜನಾತ್ಮಕ ಸ್ವ–ಅಭಿವ್ಯಕ್ತಿ ಮತ್ತು ಸಂವಹನ (Creative Self Expression and Conversation) |
| **3.** | ಭಾಷೆ ಮತ್ತು ಸೃಜನಾತ್ಮಕ ಚಿಂತನೆ (Language and Creative thinking) |
| **4.** | ಪದಸಂಪತ್ತಿನ ಅಭಿವೃದ್ಧಿ (Vocabulary Development) |
| **5.** | ಸಂವಹನ ಮತ್ತು ಮಾತನಾಡುವ ಕೌಶಲ (Conversation and talking skills) |
| **6.** | ಭಾಷೆಯ ಅರ್ಥಪೂರ್ಣ ಬಳಕೆ (Meaningful uses of language) |

| ಅರ್ಥಗ್ರಹಿಕೆಯೊಂದಿಗೆ ಓದು (Reading with comprehension) | |
|---|---|
| **1.** | ಪುಸ್ತಕಗಳ ಜೊತೆಗಿನ ಒಡನಾಟ–ಬಾಂಧವ್ಯ (Bonding with Books) |
| **2.** | ಮುದ್ರಿತ ಸಾಹಿತ್ಯದ ಅರ್ಥಪೂರ್ಣ ಗ್ರಹಿಕೆ (Print Awareness and Meaning Making) |
| **3.** | ಭಾವಾಭಿವ್ಯಕ್ತಿಯೊಂದಿಗೆ ಓದು (Pretend Reading) |
| **4.** | ಧ್ವನಿ ಸಂಕೇತ/ ಧ್ವನಿ ವಿಜ್ಞಾನದ ಗ್ರಹಿಕೆ (Phonological Awareness) |
| **5.** | ಧ್ವನಿ ಮತ್ತು ಸಂಕೇತಗಳ ಸಂಯೋಜನೆ (Sound Symbol Association) |
| **6.** | ಅನುಭವ ಮತ್ತು ಪೂರ್ವ ಜ್ಞಾನದ ಆಧಾರದ ಮೇಲೆ ಊಹಿಸುವಿಕೆ (Prediction and use of previous experiences with knowledge) |
| **7.** | ಸಂತೋಷ, ಮನರಂಜನೆ ಹಾಗೂ ಇತರೆ ಉದ್ದೇಶಗಳಿಗಾಗಿ ಸ್ವತಂತ್ರ ಓದು (Independent reading for pleasure and various purposes.) |

| ಉದ್ದೇಶಿತ ಬರಹ (Writing with purpose) | |
|---|---|
| **1.** | ಆರಂಭಿಕ ಸಾಕ್ಷರತಾ ಕೌಶಲಗಳು (Early literacy skills) |
| **2.** | ಸ್ವ–ಅಭಿವ್ಯಕ್ತಿಗಾಗಿ ಬರವಣಿಗೆ (Writing for self-expression) |
| **3.** | ಪದಗಳ ರಚನೆಯಲ್ಲಿ ಅಕ್ಷರ ಮತ್ತು ಧ್ವನಿ ಸಂಕೇತಗಳ ಬಳಕೆ (Make use of her/ his knowledge of letter and sounds, invents spellings to write) |
| **4.** | ಭಾಷಾ ನಿಯಮಗಳನ್ನು ಅನುಸರಿಸಿದ ಬರಹ (Make efforts to write in conventional ways) |
| **5.** | ಓದಿದ ಪಠ್ಯಕ್ಕೆ ಚಿತ್ರ/ ಪದ/ ಅರ್ಥಪೂರ್ಣ ವಾಕ್ಯಗಳ ಮೂಲಕ ಪ್ರತಿಕ್ರಿಯೆ (Response to reading with drawings/ words and meaningful sentences) |
| **6.** | ಪ್ರಾಸಪದಗಳ ಬರವಣಿಗೆ (Writing of rhyming words) |
| **7.** | ನಾಮಪದಗಳು ಮತ್ತು ಕ್ರಿಯಾಪದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳ ರಚನೆ (Write meaningful sentences using naming words and action words) |
| **8.** | ಸ್ವಯಂ–ಅಭಿವ್ಯಕ್ತಿಗಾಗಿ ಸಂದೇಶಗಳ ಬರವಣಿಗೆ (Write messages to express themselves) |
| **9.** | ಮಿಶ್ರಿತ ಭಾಷಾ ಸಂಕೇತಗಳ ಬಳಕೆ (Using mixed language codes) |
| **10.** | ಮನೆ ಹಾಗೂ ಶಾಲೆಯಲ್ಲಿನ ವಿವಿಧ ಸನ್ನಿವೇಶಗಳನ್ನು ಆಧರಿಸಿದ ಬರವಣಿಗೆ<br>ಉದಾ: ಪಟ್ಟಿ ಮಾಡುವುದು, ಹಿರಿಯರಿಗೆ ಶುಭಾಶಯ ಬರವಣಿಗೆ, ಸ್ನೇಹಿತರಿಗೆ ಆಹ್ವಾನ ಪತ್ರ ಬರೆಯುವುದು.<br>(Write for different purposes in the classroom's activities and at home, such as making list, writing greeting to grandparents, messages/ invitation to friends, etc.) |

ವಿದ್ಯಾ ಪ್ರವೇಶ್ ನೀಡಿರುವ ಮೇಲಿನ ಸಾಮರ್ಥ್ಯಗಳೊಂದಿಗೆ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಈ ಎರಡು ಹೆಚ್ಚುವರಿ ಸಾಮರ್ಥ್ಯಗಳನ್ನು ಸೇರಿಸಿಕೊಳ್ಳಲಾಗಿದೆ.

1. ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಗುರುತಿಸಿ ಓದು ಮತ್ತು ಬರೆಹ. (Identify and write the GUNITHAKSHARA and OTTAKSHARA letters)
2. ಸ್ವತಂತ್ರವಾಗಿ ಪದ ಹಾಗೂ ವಾಕ್ಯಗಳ ರಚನೆ (Create words and sentences independently)

| ಕ್ರ.ಸಂ. | ನಿಪುಣ್ ಕ್ರ.ಸಂ | ಕಲಿಕಾ ಫಲಗಳು |
|---|---|---|
| 1. | 3.1 | ಅಪರಿಚಿತ ಶಿಕ್ಷಕರು, ಹೊಸ ಗೆಳೆಯರು, ಶಾಲಾ ಸಿಬ್ಬಂದಿ, ಇತರೆ ವಯಸ್ಕರು ಮೊದಲಾದವರೊಂದಿಗೆ ಶಾಲೆ ಮತ್ತು ಮನೆಯ ವಾತಾವರಣದಲ್ಲಿ ತಮ್ಮದೇ ಭಾಷೆಯಲ್ಲಿ ಸಂಭಾಷಣೆಯಲ್ಲಿ ತೊಡಗುವರು.<br>ECL1 3.1: Engages in conversation in school and home with unfamiliar teachers, new friends, school staff, other adults, etc., in their own language. |
| 2. | 3.2 | ಓದುವ ಮೂಲೆ/ ಗ್ರಂಥಾಲಯದಿಂದ ಪುಸ್ತಕವನ್ನು ಆಯ್ದುಕೊಳ್ಳುವರು. ಚಿತ್ರದ ಸಹಾಯದಿಂದ ಕಥೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದರೊಂದಿಗೆ ಮುದ್ರಿತ/ಬರೆದ ಪಠ್ಯವನ್ನು ಊಹಿಸುವರು.<br>ECL1 3.2: Selects book from reading corners/ reading area and attempts to understand the story with the help of pictures and can predict the written text. |
| 3. | 3.3 | ಕಥೆ/ಪದ್ಯವನ್ನು ಆಲಿಸಿದ ನಂತರ ತಮ್ಮ ಅನುಭವವನ್ನು ತಮ್ಮದೇ ಮಾತುಗಳಲ್ಲಿ ವ್ಯಕ್ತಪಡಿಸುವರು ಮತ್ತು ಅವುಗಳ ಬಗ್ಗೆ ಮಾತನಾಡುವರು. ಗೆಳೆಯರೊಂದಿಗೆ ಹಂಚಿಕೊಳ್ಳುವರು.<br>ECL1 3.3: Expresses their experiences of reading poems/ stories in their own language and talks about it and shares it with friends. |

**ಅಭಿವೃದ್ಧಿ ಗುರಿ–2ರ ಕಲಿಕಾ ಫಲಗಳು (ನಿಪುಣ್ ಭಾರತ್–13, ಕರ್ನಾಟಕ ಸಮಗ್ರ ಶಿಕ್ಷಣದಿಂದ–3)**

| | | |
|---|---|---|
| 4. | 3.4a | ತಮ್ಮದೇ ಭಾಷೆಯಲ್ಲಿ ಆಸಕ್ತಿದಾಯಕ ಶಿಶುಗೀತೆ/ ಪದ್ಯ/ ಹಾಡನ್ನು ಹಾಡುವಾಗ ಸೂಕ್ತ ಧ್ವನಿ/ ಸ್ವರಭಾರದ ಏರಿಳಿತ ಬಳಸುವರು.<br>ECL1 3.4: (a) Uses appropriate intonation and modulation of voice while reciting interesting poems/ songs in their own language. |
| 5. | 3.4b | ಪರಿಚಿತ ಶಿಶುಪ್ರಾಸ/ ಪದ್ಯಗಳನ್ನು ಸೂಕ್ತ ಸ್ವರಭಾರದೊಂದಿಗೆ ನಿರರ್ಗಳವಾಗಿ ಹೇಳುವರು<br>ECL1 3.4: (b) Recites with fluency with appropriate intonation parts of familiar poems in their own language. |
| 6. | 3.5 a | ತಮ್ಮ ನೆಚ್ಚಿನ ಕಥೆ ಪುಸ್ತಕವನ್ನು ಶಿಕ್ಷಕರಿಗೆ ಕಥೆಯನ್ನು ಹೇಳಲು ನೀಡುವರು.<br>ECL1 3.5: (a) Gives their favourite storybooks to the teacher to narrate the story. |
| 7. | 3.5 b | ಚಿತ್ರದಲ್ಲಿರುವ ವಸ್ತುಗಳನ್ನು ಅವಧಾನದಿಂದ/ ಏಕಾಗ್ರತೆಯಿಂದ ವೀಕ್ಷಿಸುವರು ಮತ್ತು ಅವುಗಳ ಬಗ್ಗೆ ಮಾತನಾಡುವರು. ಅಕ್ಷರಗಳನ್ನು ಹುಡುಕಿ ಅವುಗಳ ಹೆಸರು ಬರೆಯುವರು.<br>ECL1 3.5: (b) Observes attentively the objects in the pictures and talks about them and write their name by using invented spellings. |
| 8. | 3.6 a | ಮುದ್ರಿತ ಪಠ್ಯವನ್ನು ಅರ್ಥಗ್ರಹಿಕೆಯೊಂದಿಗೆ ಓದುವರು.<br>ECL1 3.6: (a) Reads with the understanding of print awareness. |
| 9. | 3.6 b | ಕಥೆಯನ್ನು ಅರ್ಥಗ್ರಹಿಕೆಯೊಂದಿಗೆ ಓದುವರು ಮತ್ತು ಘಟನೆಗಳಿಗೆ ಚಿತ್ರಗಳನ್ನು ಅನುಕ್ರಮವಾಗಿ ಜೋಡಿಸುವರು.<br>ECL1 3.6: (b) Reads the story by understanding and arranging the pictures in the sequence of events. |
| 10. | 3.7 | ಪರಿಚಿತ ಕಥೆ ಮತ್ತು ಪದ್ಯಗಳಲ್ಲಿನ ಪದಗಳಲ್ಲಿ ಬರುವ ಪುನರಾವರ್ತಿತ ಧ್ವನಿಯನ್ನು ಗುರ್ತಿಸುವರು.<br>ECL1 3.7: Identifies repeated sounds in words occurring in familiar stories and poems. |
| 11. | 3.8 a | ಸರಳವಾಗಿರುವ ಕಥೆ, ಪದ್ಯ ಮತ್ತು ಹಾಡುಗಳಲ್ಲಿ ಪುನರಾವರ್ತಿತ ಧ್ವನಿ, ಪದ ಮೊದಲಾದವುಗಳನ್ನು ಗುರ್ತಿಸುವರು.<br>ECL1 3.8: (a) Identifies repeated sounds, words, etc., in stories, poems and songs. |
| 12. | 3.8 b | ಚಿತ್ರ ಮತ್ತು ಮುದ್ರಿತ ಪಠ್ಯ, ಪೂರ್ವಾನುಭವ ಮತ್ತು ಮಾಹಿತಿ, ಅಕ್ಷರ–ಧ್ವನಿ ಸಂಯೋಜನೆ ಮೊದಲಾದವುಗಳ ಸಹಾಯದಿಂದ ಪಠ್ಯವನ್ನು ಊಹಿಸುವರು.<br>ECL1 3.8: (b) Predicts about the written text with the help of pictures and print, previous experiences and information, letter-sound association, etc. |
| 13. | 3.9 | ತಮ್ಮ, ಗೆಳೆಯರ ಹಾಗೂ ಸುತ್ತಲಿನ ವಸ್ತುಗಳ ಹೆಸರು ಬರೆಯಲು ಆಸಕ್ತಿ ಬೆಳೆಸಿಕೊಳ್ಳುವರು.<br>ECL1 3.9: Takes interest in writing (invented spellings) one's own name, names of their friends and objects around them. |

| | | |
|---|---|---|
| ವಿದ್ಯಾ ಪ್ರವೇಶ್ ನೀಡಿರುವ ಮೇಲಿನ ಕಲಿಕಾ ಫಲಗಳೊಂದಿಗೆ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಈ ಎರಡು ಹೆಚ್ಚುವರಿ ಕಲಿಕಾ ಫಲಗಳನ್ನು ಸೇರಿಸಿಕೊಳ್ಳಲಾಗಿದೆ. | | |
| 14. | SSK- 1 | ಬರವಣಿಗೆಯ ಸರಿಯಾದ ಕ್ರಮವನ್ನು ಅಭ್ಯಾಸ ಮಾಡುವರು.<br>Practice the correct mode of writing. |
| 15. | SSK-2. | ವರ್ಣಮಾಲೆಯ ಅಕ್ಷರಗಳನ್ನು ಗುರ್ತಿಸಿ ಓದಿ, ಬರೆಯುವರು.<br>Recognize and read the letters of the alphabet. |
| 16. | SSK-3. | ಕಲಿತ ಅಕ್ಷರಗಳಿಂದ ಸರಳ ಪದ, ಪದಗುಚ್ಛಗಳನ್ನು ರಚಿಸುವರು.<br>They will create simple word and phrases from learned letters. |

**ಅಭಿವೃದ್ಧಿ ಗುರಿ–3: ಸಕ್ರಿಯ ಕಲಿಕಾರ್ಥಿಗಳಾಗಿ, ಪರಿಚಿತ ಪರಿಸರದೊಂದಿಗೆ ಮಕ್ಕಳು ಸಂಪರ್ಕ ಸಾಧಿಸುವುದು.**

## ಮುಖ್ಯ ಘಟಕಾಂಶಗಳು

| | |
|---|---|
| 1 | **ಸಂವೇದನಾ ಅಭಿವೃದ್ಧಿ (Sensory Development)** |
| 2 | ಜ್ಞಾನಾತ್ಮಕ ಕೌಶಲಗಳು (Cognitive Skills) |
| 3 | ಪರಿಸರಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು (Concept related to environment) |
| 4 | ಪರಿಕಲ್ಪನೆ ಮೂಡಿಸುವುದು. (Concept Formation) |
| 5 | ಸಂಖ್ಯಾಜ್ಞಾನ (Number Sense) |
| 6 | ಸಂಖ್ಯಾ ಮೂಲಕ್ರಿಯೆಗಳು (Number Operations) |
| 7 | ಅಳತೆ (Measurement) |
| 8 | ಆಕೃತಿಗಳು (Shapes) |
| 9 | ದತ್ತಾಂಶ ನಿರ್ವಹಣೆ (Data Handling) |
| | ವಿನ್ಯಾಸ (Pattern) |
| | ಕ್ಯಾಲೆಂಡರ್ ಚಟುವಟಿಕೆ (Calendar Activity) |
| | ತಂತ್ರಜ್ಞಾನ ಬಳಕೆ (Use of Technology) |

## ವಿದ್ಯಾಪ್ರವೇಶ ಗುರಿ–3 ರ ಸಾಮರ್ಥ್ಯಗಳು

| 1. ಸಂವೇದನಾ ಅಭಿವೃದ್ಧಿ | |
|---|---|
| * ನೋಟ (Sight) | * ವಾಸನೆ (Smell) |
| * ಶಬ್ದ (Sound) | * ರುಚಿ (Taste) |
| * ಸ್ಪರ್ಶ (Touch) | |

| **2. ಜ್ಞಾನಾತ್ಮಕ ಕೌಶಲಗಳು (Cognitive Skills)** | |
|---|---|
| * ವೀಕ್ಷಣೆ **(Observation)** | * ಸೃಜನಾತ್ಮಕ ಚಿಂತನೆ **(Creative Thinking)** |
| * ಗುರುತಿಸುವುದು **(Identification)** | * ವಿಮರ್ಶಾತ್ಮಕ ಚಿಂತನೆ **(Critical Thinking)** |
| * ಸ್ಮರಣೆ **(Memorisation)** | * ಸಮಸ್ಯಾ ಪರಿಹಾರ **(Problem Solving)** |
| * ಜೋಡಣೆ **(Matching)** | * ತಾರ್ಕಿಕ ಚಿಂತನೆ **(Reasoning)** |
| * ವರ್ಗೀಕರಣ **(Classification)** | * ಕುತೂಹಲ **(Curiosity)** |
| * ವಿನ್ಯಾಸ **(Patterns)** | * ಪ್ರಾಯೋಗಿಕತೆ **(Experimentation)** |
| * ಅನುಕ್ರಮ ಚಿಂತನೆ **(Sequential Thinking)** | * ಪರಿಶೋಧನೆ **(Exploration)** |

| 3. ಪರಿಸರಕ್ಕೆ ಸಂಬಂಧಿಸಿದ ಪರಿಕಲ್ಪನೆಗಳು (Concept related to environment) | |
|---|---|
| * ನೈಸರ್ಗಿಕ – ಪ್ರಾಣಿಗಳು, ಹಣ್ಣುಗಳು, ತರಕಾರಿಗಳು, ಆಹಾರ (Natural-animals, fruits, vegetables, food) | * ಸಾಮಾಜಿಕ – ನಾನು, ಕುಟುಂಬ, ಸಾರಿಗೆ, ಹಬ್ಬ, ಸಮುದಾಯದ ಸಹಾಯಕರು ಇತ್ಯಾದಿ (Social - myself, family, transport, festival, community helpers, etc.) |
| * ಭೌತಿಕ – ನೀರು, ಗಾಳಿ, ಕಾಲಗಳು, ಸೂರ್ಯ, ಚಂದ್ರ, ಹಗಲು ಮತ್ತು ರಾತ್ರಿ (Physical - water, air,season,sun, moon, day and night) | |

| 4. ಪರಿಕಲ್ಪನೆ ಮೂಡಿಸುವುದು. (Concept Formation) | |
|---|---|
| * ಬಣ್ಣಗಳು (Colours) | * ತೂಕ (weight) |
| * ಆಕಾರಗಳು (shapes) | * ಎತ್ತರ (height) |
| * ದೂರ (distance) | * ಕಾಲ (time) |
| * ಅಳತೆ (measurement) | * ಸ್ಥಳಾವಕಾಶದ ಅರಿವು (Spatial sense) |
| * ಗಾತ್ರ (size) | * ಒಂದಕ್ಕೊಂದನ್ನು ಹೊಂದಿಸುವುದು (One-to-one Correspondence) |
| * ಉದ್ದ (length) | |

| 5. ಸಂಖ್ಯಾಜ್ಞಾನ (Number Sense) |
|---|
| * ಎಣಿಸಿ ಎಷ್ಟು ಎಂದು ಹೇಳುವುದು. (Count and tell how many) |
| * ಸಂಖ್ಯಾಸೂಚಕಗಳನ್ನು ಗುರುತಿಸುವುದು. (Numeral recognition) |
| * ಅನುಕ್ರಮಣಿಕೆ ಜ್ಞಾನ (Sense of order) |

| 6. ಸಂಖ್ಯಾ ಮೂಲಕ್ರಿಯೆಗಳು (Number Operations) | |
|---|---|
| * ಸಂಕಲನ (Addition) | * ಗುಣಾಕಾರ (Multiplication) |
| * ವ್ಯವಕಲನ (Subtraction) | * ಭಾಗಾಕಾರ (Division) |

| 7. ಅಳತೆ (Measurement) | |
|---|---|
| * ಗಾತ್ರ (Volume) | |
| * ಉಷ್ಣತೆ (Temperature) | |
| 8. ಆಕೃತಿಗಳು (Data Handling) | |
| * 2, 3 ಆಯಾಮದ ಆಕೃತಿಗಳು (2, 3 D Shapes) | * ಸಮತಲ (Plain) |
| * ಸರಳ ರೇಖೆ (Straight line) | * ವಕ್ರ ಮೇಲ್ಮೈಗಳು (Curved Surface) |
| * ವಕ್ರ ರೇಖೆ (Curved Line) | |
| 9. | |
| ದತ್ತಾಂಶ ನಿರ್ವಹಣೆ (Data Handling) | |
| ವಿನ್ಯಾಸ (Pattern) | |
| ಕ್ಯಾಲೆಂಡರ್‌ಚಟುವಟಿಕೆ (Calendar Activity) | |
| ತಂತ್ರಜ್ಞಾನ ಬಳಕೆ (Use of Technology) | |

| | | |
|---|---|---|
| 13 | IL3.10 | 9 ರವರೆಗಿನ ಸಂಖ್ಯೆಗಳಲ್ಲಿ ಸೂಚಿತ ಸಂಖ್ಯೆಯಿಂದ ಮುಮ್ಮುಖ ಮತ್ತು ಹಿಮ್ಮುಖ ಸಂಖ್ಯೆಗಳನ್ನು ಹೇಳುವರು.<br>**IL3.10: Can count forward and backward from a particular number up to 9.** |
| 14 | IL3.11 | 9 ರವರೆಗಿನ ಅಂಕಿಗಳನ್ನು ಗುರುತಿಸಿ ಹೇಳುವರು ಮತ್ತು ಬರೆಯುವರು.<br>**IL3.11: Identifies numerals with numbers and writes numerals up to 9.** |
| 15 | IL 3.12 | ವಸ್ತುಗಳು ಕಡಿಮೆಯಾಗುತ್ತಾ ಹೋಗಿ ಇಲ್ಲವಾಗುತ್ತವೆ ಎಂಬ ಗ್ರಹಿಕೆಯನ್ನು ಪ್ರದರ್ಶಿಸುವರು. (ಉದಾ: ಮರದ ಕೊಂಬೆಯಲ್ಲಿ 3 ಹಕ್ಕಿಗಳು ಕುಳಿತುಕೊಂಡಿದ್ದವು. ಅವುಗಳಲ್ಲಿ ಒಂದಾದ ನಂತರ ಒಂದರಂತೆ ಹಾರಿ ಹೋದವು. ಕೊನೆಯಲ್ಲಿ ಯಾವುದೇ ಹಕ್ಕಿ ಕೊಂಬೆಯಲ್ಲಿ ಉಳಿದಿಲ್ಲ)<br>**IL3.12: Demonstrates the awareness that things reduce in number and become nil, (e.g. 3 birds sitting on a branch of tree flew away one by one at the end, no bird is left on the branch).** |
| 16 | IL3.13 | 10 ರವರೆಗೆ ಸಂಖ್ಯೆಗಳಲ್ಲಿ ಎರಡು ಸಂಖ್ಯೆಗಳನ್ನು ಹೋಲಿಸುತ್ತಾರೆ, ದೊಡ್ಡದು–ಚಿಕ್ಕದು ಪದ ಬಳಸಿ ಹೇಳುವರು.<br>**IL3.13: Compares two numbers up to 10 and uses vocabulary like more than, less than.** |
| | | **IL3.4: Places 5–6 objects of two groups in one-to-one correspondence.** |

| | | |
|---|---|---|
| 6 | IL3.5 | ವಸ್ತುಗಳ ಆಕಾರ, ಗಾತ್ರ, ಬಣ್ಣ ಇತ್ಯಾದಿ ಭೌತಿಕ ಲಕ್ಷಣಗಳನ್ನು ಆಧರಿಸಿ ಹೋಲಿಸಿ ವರ್ಗೀಕರಿಸುತ್ತಾರೆ ಮತ್ತು ಸ್ಥಾನ ಸೂಚಕ ಪದಗಳಾದ ಹಿಂದೆ–ಮುಂದೆ, ಅಕ್ಕ–ಪಕ್ಕ, ಒಳಗೆ–ಹೊರಗೆ ಬಳಸಿ ವಸ್ತುವಿನ ಸ್ಥಾನ ವಿವರಿಸುವರು.<br>**IL 3.5: Compares and classifies objects by three factors like shape, colour and size, etc. Correctly uses position words (beside, inside, under) to describe the location of objects.** |
| 7 | IL3.6 | 4 ರಿಂದ 5 ಚಿತ್ರ/ಚಿತ್ರಪಟ ಅಥವಾ ವಸ್ತುಗಳನ್ನು ಅನುಕ್ರಮವಾಗಿ ಜೋಡಿಸುವರು. (ಉದಾ: ಆಕಾರ, ಗಾತ್ರ, ಘಟನೆಗಳು ನಡೆಯುವ ಸಂದರ್ಭ)<br>**IL 3.6: Seriates/arranges 4–5 picture cards/objects in a sequence, e.g., shape, size and occurrence of events.** |
| 8 | IL3.7 | ಕಥೆಯಲ್ಲಿ ಬರುವ ಕಾಲಸಂಬಂಧಿತ ಘಟನಾಕ್ರಮಗಳನ್ನು ಅರ್ಥಮಾಡಿಕೊಳ್ಳುವರು. (ಯಾವುದು ಮೊದಲು ನಡೆಯಿತು? ರಾತ್ರಿಯಾರು ಬಂದರು? ಇತ್ಯಾದಿ)<br>**IL 3.7: When recited a story, can understand time related events like, What happened first?; Who came at night?; etc.** |

| | | |
|---|---|---|
| 9 | IL3.8 A | ಸರಳ ಸಮಸ್ಯೆಗಳನ್ನು ಪರಿಹರಿಸುವ ಸಂದರ್ಭದಲ್ಲಿ ತಾರ್ಕಿಕವಾಗಿ ಯೋಚಿಸಿ ಪರಿಹಾರಗಳನ್ನು ಸೂಚಿಸುವರು.<br>**IL3.8: (a) Provides solutions to simple problem solving situations with reasons.** |
| 10 | IL3.8 B | ಪರಿಸರದಲ್ಲಿನ ವಸ್ತುಗಳನ್ನು ಅನ್ವೇಷಿಸುವರು ಮತ್ತು ಬದಲಿಸುವುದರಲ್ಲಿ ತೊಡಗಿಸಿಕೊಳ್ಳುವರು. ಪ್ರಶ್ನೆಗಳನ್ನು ಕೇಳುವರು, ವಿಚಾರಿಸುವರು, ಹುಡುಕುವರು ಮತ್ತು ತಾವೇ ಸ್ವತಃ ಪರಿಕಲ್ಪನೆ ಬೆಳೆಸಿಕೊಳ್ಳುವರು ಮತ್ತು ಊಹಿಸುವರು.<br>**IL3.8: (b) Engages in investigating and manipulating objects in the environment, asks questions, inquires, discovers and constructs one's own ideas and predicts.** |
| 11 | IL3.8 C | ಪರಿಸರದ ಅರಿವು ಮತ್ತು ಕಾಳಜಿಯನ್ನು ಪ್ರದರ್ಶಿಸುವರು. ಉದಾ: ನೀರನ್ನು ಪೋಲು ಮಾಡಬೇಡಿ, ಬಳಕೆಯಲ್ಲಿ ಇಲ್ಲದಿದ್ದಾಗ ಲೈಟುಗಳನ್ನು ಆರಿಸಬೇಕು.<br>**IL3.8: (c) Demonstrates awareness and sensitivity towards environmental concerns, e.g., do not waste water, switching of lights when not in use, etc.** |
| 12 | IL3.9 | ಹತ್ತರವರೆಗೆ ವಸ್ತುಗಳನ್ನು ಎಣಿಸುವರು.<br>**IL3.9: Counts up to 10 objects.** |

| | | |
|---|---|---|
| 17 | IL3.14 | 9 ಕ್ಕೆ ಮೀರದಂತೆ ಎರಡು ಗುಂಪು ಗಳಲ್ಲಿರುವ ವಸ್ತುಗಳನ್ನು ಒಟ್ಟು ಮಾಡುವರು ಮತ್ತು ಮರು ಎಣಿಸುವರು.<br>**IL3.14: Combines two groups up to 9 objects and recounts.** |
| 18 | IL3.15 | 9ರವರೆಗಿನ ವಸ್ತುಗಳಲ್ಲಿ ಕೆಲವನ್ನು ಹೊರಗೆತೆಗೆಯುವರು ಮತ್ತು ಮರುಎಣಿಕೆ ಮಾಡುವರು.<br>**IL3.15: Takes out objects from a collection up to 9 objects and recounts.** |
| 19 | IL3.20 | ಭಾರತೀಯ ಚಲಾವಣೆಯ ನಾಣ್ಯ ಮತ್ತು ನೋಟುಗಳನ್ನು ಗುರುತಿಸುವರು.<br>**IL3.20: Identifies Indian currency notes.** |
| 20 | IL3.21 | 3 ವಸ್ತುಗಳ ಉದ್ದ ಆಧರಿಸಿ ಅತೀಉದ್ದ, ಅತೀಚಿಕ್ಕ ಮತ್ತು ಅತೀಎತ್ತರ, ಅತೀಗಿಡ್ಡ ಎಂದು ಹೋಲಿಸುವರು.<br>**IL3.21: Compares three objects in terms of their length as longest/shortest and tallest/shortest.** |
| 21 | IL3.22 | 2 ವಸ್ತುಗಳ ತೂಕ ಆಧರಿಸಿ ಅತಿಭಾರ – ಅತಿಹಗುರ ಎಂದು ಹೋಲಿಸುವರು.<br>**IL 3.22: Compares two objects in terms of their weight as heavierthan/lighter than.** |
| 22 | IL3.23 | ಎರಡು ಪಾತ್ರೆಗಳ ಧಾರಣ ಸಾಮರ್ಥ್ಯವನ್ನು ಲೋಟ, ಚೊಂಬು, ಬಾಟಲ್, ಮತ್ತು ಬಕೆಟ್ ಇತ್ಯಾದಿಗಳಲ್ಲಿ ಹೋಲಿಸುವರು.<br>**IL3.23: Compares capacities of two vessels like bottles, glasses, bucket, etc.** |
| 23 | IL3.25 | ಸಮತಲ ಮೇಲ್ಮೈನಲ್ಲಿ 2 ಆಯಾಮ ಮತ್ತು 3 ಆಯಾಮದ ವಸ್ತುಗಳನ್ನು ಬಳಸಿ ಅಚ್ಚು ತೆಗೆಯುವರು.<br>**IL 3.25: Identifies 2-D shapes by tracing the faces of 3-D shapes on a plane surface.** |
| 24 | IL3.26 | ಅರ್ಧರೊಟ್ಟಿ, ಅರ್ಧತುಂಬಿದ ಲೋಟ ಇತ್ಯಾದಿ ಪದಗಳನ್ನು ತಮ್ಮ ನಿತ್ಯಜೀವನದ ಸಂದರ್ಭಗಳಲ್ಲಿ ಬಳಸುವರು.<br>**IL 3.26: Uses vocabulary like half roti/half a glass of water, etc., in daily context.** |
| 25 | IL3.27 | ಎಲೆಗಳ ಒತ್ತು ಚಿತ್ರ, ಬೆರಳು ಒತ್ತು ಚಿತ್ರ ಇತ್ಯಾದಿಗಳ ಮೂಲಕ ಹೊಸ ವಿನ್ಯಾಸಗಳನ್ನು ರಚಿಸುವರು.<br>**IL3.27: Creates new patterns with leaf printing or thumb printing, etc.** |
| 26 | IL3.28 | ತನ್ನ ಸುತ್ತಲಿನ ಸನ್ನಿವೇಶಗಳಿಂದ ತೀರ್ಮಾನಗಳನ್ನು ತೆಗೆದುಕೊಳ್ಳುವರು. (ಉದಾ: ನನ್ನಲ್ಲಿ ನೀಲಿ ಪೆನ್ಸಿಲ್‌ಗಳಿಗಿಂತ ಕೆಂಪು ಪೆನ್ಸಿಲ್‌ಗಳು ಹೆಚ್ಚು ಇವೆ)<br>**IL3.28: Draws inferences from situations that surround her/him, e.g., I have more red pencils than blue.** |
| 27 | IL3.29 | ವಾರದ ದಿನಗಳು ಮತ್ತು ವರ್ಷದ ತಿಂಗಳುಗಳ ಹೆಸರನ್ನು ಹೇಳುವರು.<br>**IL3.29: Recites the names of the days of the week andmonths of the year.** |
| 28 | IL3.30 | ತನ್ನ ಸುತ್ತಮುತ್ತಲೂ ಸಾಮಾನ್ಯವಾಗಿ ಲಭ್ಯವಿರುವ ತಾಂತ್ರಿಕ ಸಾಧನಗಳನ್ನು ವಿವರಿಸುವರು.<br>**IL3.30: Describes usage of commonly availabletechnological tools around her/him.** |

**ಆಟದ ಅವಧಿಗಳು: ಏನು? ಏಕೆ? ಹೇಗೆ?**

- ವಿದ್ಯಾಪ್ರವೇಶದಲ್ಲಿ ಒಟ್ಟು 11 ಆಟದ ಅವಧಿಗಳಿವೆ.
- ಶನಿವಾರ ಹೊರತು ಪಡಿಸಿ ಉಳಿದ ದಿನಗಳಲ್ಲಿ ಪ್ರತಿದಿನ 9 ಆಟದ ಅವಧಿಗಳಿವೆ.
- ಪ್ರತಿ ಶನಿವಾರ ಪ್ರತಿಬಿಂಬ ಮತ್ತು ನನ್ನ ಸಾಧನೆಯ ಅವಧಿ ಇರುತ್ತದೆ.
- ಕಲಿಕೆಯ ಅವಧಿಗಳನ್ನು ವೇಳಾಪಟ್ಟಿಯಲ್ಲಿ ಸಮನ್ವಯಗೊಳಿಸಲು ಶುಭಾಶಯ ವಿನಿಮಯ ಮತ್ತು ಮಾತುಕತೆ ಅವಧಿಗಳನ್ನು ಸೇರ್ಪಡೆಗೊಳಿಸಿ ಪ್ರತಿ ದಿನ 8 ಆಟದ ಅವಧಿಗಳನ್ನಾಗಿ ಮಾಡಲಾಗಿದೆ.
- ವಾರದ ಐದು ದಿನಗಳಿಗೆ ಕಲಿಕಾ ಅವಧಿಗಳನ್ನು ನಿಗದಿ ಪಡಿಸಿದೆ.
- ಕಲಿಕಾ ಅವಧಿಯು ನಮ್ಯವಾಗಿದ್ದು, ನಿಗದಿ ಪಡಿಸಿದ ಚಟುವಟಿಕೆಗಳಿಗೆ ತಕ್ಕಂತೆ ಸಮಯವನ್ನು ಹೊಂದಾಣಿಕೆ ಮಾಡಿಕೊಳ್ಳಲು ಶಿಕ್ಷಕರಿಗೆ ಮುಕ್ತ ಅವಕಾಶ ಕಲ್ಪಿಸಿದೆ.
- ಪ್ರತಿ ಶನಿವಾರದ ಅವಧಿಗಳನ್ನು ವಾರದ ಚಟುವಟಿಕೆಗಳ ಪುನರಾವರ್ತನೆ ಹಾಗೂ ಮುಂದಿನ ವಾರದ ಕಾರ್ಯಯೋಜನೆಗೆ ಮೀಸಲಿಟ್ಟಿದೆ.

## ಒಂದು ದಿನದ 8–ಆಟದ ಅವಧಿಗಳ ಮಾದರಿ ವೇಳಾಪಟ್ಟಿ

| ಅವಧಿಗಳು | ಸಮಯ (ವಿ.ಪ್ರ) | ಚಟುವಟಿಕೆಗಳು | 8 ಅವಧಿಗಳು |
|---|---|---|---|
| 1 | 30 ನಿಮಿಷ | ಶುಭಾಶಯ ವಿನಿಮಯ ಮತ್ತು ಮಾತುಕತೆ | 40 ನಿಮಿಷ |
| 2 | 30 ನಿಮಿಷ | ನನ್ನ ಸಮಯ | 40 ನಿಮಿಷ |
| | 10 ನಿಮಿಷ | ಅಲ್ಪ ವಿರಾಮ | |
| 3 | 30 ನಿಮಿಷ | ಬುನಾದಿ ಸಂಖ್ಯಾ ಜ್ಞಾನ | 40 ನಿಮಿಷ |
| 4 | 30 ನಿಮಿಷ | ಸೃಜನಶೀಲ ಕಲೆ | 40 ನಿಮಿಷ |
| | 40 ನಿಮಿಷ | ಊಟದ ವಿರಾಮ | |
| 5 | 60 ನಿಮಿಷ | ಭಾಷಾಭಿವೃದ್ಧಿ (ಆಲಿಸುವಿಕೆ+ಮಾತನಾಡುವಿಕೆ, ಓದುವಿಕೆ, ಬರೆವಣಿಗೆ) | 60 ನಿಮಿಷ |
| 6 | 30 ನಿಮಿಷ | ಹೊರಾಂಗಣ ಆಟಗಳು | 40 ನಿಮಿಷ |
| | 10 ನಿಮಿಷ | ಅಲ್ಪ ವಿರಾಮ | |
| 7 | 20 ನಿಮಿಷ | ಕಥಾ ಸಮಯ | 40 ನಿಮಿಷ |
| 8 | 10 ನಿಮಿಷ | ಮತ್ತೆ ಸಿಗೋಣ | 20 ನಿಮಿಷ |

**ಆಟದ ಅವಧಿ–1 ಶುಭಾಶಯ ವಿನಿಮಯ– Greet-Meet *(Teacher-initiated Morning group activit)***


- 'ಶುಭಾಶಯ ವಿನಿಮಯ' ಎಂಬುದು ತರಗತಿ ಪ್ರಾರಂಭವಾಗುವ ಮೊದಲು ಶಿಕ್ಷಕರು ಮಕ್ಕಳೊಂದಿಗೆ ಸೇರಿ ಮಾಡಿಸುವ ಚಟುವಟಿಕೆಯಾಗಿದೆ. ಶಿಕ್ಷಕರು ಮಕ್ಕಳನ್ನು ತರಗತಿಗೆ ಸ್ವಾಗತಿಸಬೇಕು; ಮಕ್ಕಳನ್ನು ಅವರವರ ಹೆಸರಿನಿಂದ ಕರೆಯಿರಿ ಮತ್ತು ಅವರಲ್ಲಿ ಆತ್ಮೀಯತೆ, ಪ್ರೀತಿ ಮತ್ತು ಭದ್ರತೆಯ ಭಾವವನ್ನು ಬೆಳೆಸಲು ಚರ್ಚೆಯನ್ನು ಪ್ರಾರಂಭಿಸಿ.
- ದಿನದ ಮೊದಲ ಚಟುವಟಿಕೆಯಾಗಿರುವ ಈ ಚಟುವಟಿಕೆಯು ಮಗುವಿಗೆ ಸಕಾರಾತ್ಮಕ ಆಲೋಚನೆಗಳೊಂದಿಗೆ ದಿನವನ್ನು ಪ್ರಾರಂಭಿಸಲು ಪ್ರಚೋದನೆಯನ್ನು ನೀಡುತ್ತದೆ.

**ಶುಭಾಶಯ ವಿನಿಮಯ– ಹೇಗೆ? (ವಿಧಾನ–ಶಿಕ್ಷಕರಿಗೆ ಸೂಚನೆ/ ಮಾರ್ಗದರ್ಶನ)**

- ➢ ಅತ್ಯಂತ ಪ್ರೀತಿ ಮತ್ತು ಉತ್ಸಾಹದಿಂದ ಮಕ್ಕಳನ್ನು ಸ್ವಾಗತಿಸಿ.
- ➢ ಮಕ್ಕಳು ತರಗತಿಯನ್ನುಸಾಲಾಗಿ ಪ್ರವೇಶಿಸಲಿ.
- ➢ ಪ್ರತಿ ಮಗುವನ್ನು ಅದರ ಹೆಸರಿನಿಂದ ಕರೆಯುವ ಮೂಲಕ ಮಗುವಿನಲ್ಲಿ ವಿಶೇಷ ಭಾವನೆ ಮೂಡಿಸಿ.
- ➢ ಪ್ರತಿದಿ ನಮಕ್ಕಳನ್ನು ವಿವಿಧ ವಿಧಾನಗಳಿಂದ ಅಭಿನಂದಿಸಿ.
- ➢ ದಿವ್ಯಾಂಗ ಮಕ್ಕಳಿಗೆ ವಿಶೇಷ ಗಮನ ನೀಡಿ.
- ➢ ಸ್ಪಷ್ಟವಾಗಿ ಶುಭಾಶಯ ಕೋರಿ, ಪ್ರತಿ ಮಗುವಿಗೂ ಮಹತ್ವ ನೀಡಿ ಮತ್ತು ಅಗತ್ಯವಿದ್ದರೆ ಶುಭಾಶಯವನ್ನು ಪುನರಾವರ್ತಿಸಿ.
- ➢ ಮುಂದಿನ ಮಗುವಿಗೆ ಶುಭಾಶಯ ಹೇಳುವ ಮೊದಲು, ಮಗು ನಿಮ್ಮ ಶುಭಾಶಯಗಳಿಗೆ ಪ್ರತಿಕ್ರಿಯಿಸುವವರೆಗೆ ಕಾಯಿರಿ.
- ➢ ಮಗುವಿನ ನೈರ್ಮಲ್ಯವನ್ನು ಗಮನಿಸಿ, ಟಿಪ್ಪಣಿ ಮಾಡಿಟ್ಟುಕೊಳ್ಳಿ ಮತ್ತು ಅದನ್ನು ಪ್ರತ್ಯೇಕವಾಗಿ ಹಿಮ್ಮಾಹಿತಿ ನೀಡಿ.
- ➢ ತರಗತಿಯನ್ನು ಪ್ರವೇಶಿಸಿದ ನಂತರ ಆರಾಮವಾಗಿ ಕುಳಿತುಕೊಳ್ಳಲು ಮಕ್ಕಳಿಗೆ ಸೂಚಿಸಿ.

**ಆಟದ ಅವಧಿ–2 : ನನ್ನ ಸಮಯ**

ಮಗುವಿನ ಬೌದ್ಧಿಕ, ಭಾವನಾತ್ಮಕ, ಶಾರೀರಿಕ ಹಾಗೂ ಸೂಕ್ಷ್ಮ ಚಲನಾ ಕೌಶಲಗಗಳ ಅಭಿವೃದ್ಧಿಗೆ "ನನ್ನ ಸಮಯ"ವು ಸಹಕಾರಿಯಾಗಬೇಕು. ಈ ನಿಟ್ಟಿನಲ್ಲಿ ಇದೊಂದು ಸ್ವತಂತ್ರ ಚಟುವಟಿಕೆಗಳ ನಿರ್ವಹಣೆಗೆ ಪ್ರೇರೇಪಿಸುವ ಮುಕ್ತ ಸಮಯವಾಗಿದೆ. ಇದಕ್ಕಾಗಿ ವಿದ್ಯಾಪ್ರವೇಶದಲ್ಲಿ ಎಂಟು ಮೂಲೆ (ಸ್ಥಳ)ಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗಿದ್ದು, ಪ್ರತಿ ಮೂಲೆಗೂ ಒಂದೊಂದು ಹೆಸರನ್ನು ನೀಡಲಾಗಿದೆ




**ವಿದ್ಯಾಪ್ರವೇಶ ಚಟುವಟಿಕೆಗಳ ಪರಿಚಯ**

| **ವಾರ–1** | | **ದಿನ–1** |
|---|---|---|
| ದಿನಗಳು | ಚಟುವಟಿಕಾ ಅವಧಿಗಳು | ಚಟುವಟಿಕೆಯ ವಿವರ |
| 1 | ಶುಭಾಶಯ ವಿನಿಮಯ *(ಮಕ್ಕಳೊಂದಿಗೆ ಶಿಕ್ಷಕರ ಬೆಳಗಿನ ಕುಶಲೋಪರಿ)* | ಸಾಮರ್ಥ್ಯ: ಶುಭಾಶಯಗಳು ಮತ್ತು ಸ್ವಾಗತದಂತಹ ಸಾಮಾಜಿಕ ನಡವಳಿಕೆಯ ಅಭಿವೃದ್ಧಿ.<br>ಚಟುವಟಿಕೆಯ ಉದ್ದೇಶ: ಆತ್ಮೀಯತೆ ಭಾವನೆಯನ್ನು ಮೂಡಿಸುವುದು.<br>ಸಾಮಗ್ರಿ: ಬಲೂನ್/ಹೂವು/ಚಾಕಲೇಟ್<br>ವಿಧಾನ:<br>1. ಮಕ್ಕಳು ಚಪ್ಪಾಳೆ ತಟ್ಟುತ್ತಾ ತರಗತಿಯನ್ನು ಪ್ರವೇಶಿಸಲಿ.<br>2. ಮಗು ತರಗತಿಯನ್ನು ಪ್ರವೇಶಿಸುವಾಗ ಶಿಕ್ಷಕರು ಮಗುವಿಗೆ " ನಮಸ್ತೆ, ಗುಡ್ ಮಾರ್ನಿಂಗ್" ಎಂದು ಗ್ರೀಟ್ ಮಾಡುವುದು.<br>3. ನಂತರ ಪ್ರತಿ ಮಗುವಿನ ಹೆಸರನ್ನು ಕೇಳಿ, ಅವನ/ಅವಳ ಹೆಸರನ್ನು ಹೇಳಿ ಹೂ/ಬಲೂನ್/ಚಾಕಲೇಟ್ ನೀಡಿ ಸ್ವಾಗತಿಸಿ.<br>ಉದಾ : "ಗೀತಾ, ನಿನಗೆ ಸ್ವಾಗತ,welcome" ಎಂದು ಹೇಳಿ ಸ್ವಾಗತಿಸುವುದು. |

| | | |
|---|---|---|
| 1 | ಮಾತು ಕತೆ *( ಶಿಕ್ಷಕರು – ಮಕ್ಕಳೊಂದಿಗಿನ ಬೆಳಗಿನ ಸಾಮೂಹಿಕ ಚಟುವಟಿಕೆ)* | ಚಟುವಟಿಕೆ–1: ನನ್ನ ಕುರಿತು (ಗುರಿ–1)<br>ಸಾಮರ್ಥ್ಯ: ಸ್ವಯಂ ಪ್ರಜ್ಞೆ, ಧನಾತ್ಮಕ ವೈಯುಕ್ತಿಕ ಪರಿಕಲ್ಪನೆಗಳ ಅಭಿವೃದ್ಧಿ, ಆಲಿಸುವುದು ಮತ್ತು ಮಾತನಾಡುವುದು.<br>ಉದ್ದೇಶ: ತನ್ನ ಕುರಿತು ಮಾತನಾಡಲು ಪ್ರೇರೇಪಿಸುವುದು.<br>ಸಾಮಗ್ರಿ:<br>ವಿಧಾನ: ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ..<br>2. "ಹಲೋ, ಮಕ್ಕಳೇ ಗುಡ್ ಮಾರ್ನಿಂಗ್" (ನಿಮ್ಮ ಕೈಬೀಸಿ) ಎಂದು ಹೇಳುವ ಮೂಲಕ ಅವರನ್ನು ಸ್ವಾಗತಿಸಿ ಮತ್ತು ಮೂರು ಬಾರಿ ಚಪ್ಪಾಳೆ ತಟ್ಟಿ.<br>3. ಹಾಯ್ ಟೀಚರ್, ಗುಡ್ ಮಾರ್ನಿಂಗ್" (ಕೈ ಬೀಸುವ ಮೂಲಕ) ಎಂದು ಹೇಳುವ ಮೂಲಕ ಪ್ರತಿಕ್ರಿಯಿಸಲು ಮಕ್ಕಳಿಗೆ ತಿಳಿಸಿ ಮತ್ತು ಮೂರು ಬಾರಿ ಚಪ್ಪಾಳೆ ತಟ್ಟಲು ತಿಳಿಸಿ..<br>4. ಅವರ ಬಗ್ಗೆ ಮಾತನಾಡಲು ಪ್ರೋತ್ಸಾಹಿಸಿ.<br>( ಉದಾ : "ಮಹೇಶ, ಬೆಳಿಗ್ಗೆ ಏನು ತಿಂಡಿ ತಿಂದು ಬಂದೆ?", " ಸಲೀನಾ, ನಿನಗೆ ಯಾವ ತಿಂಡಿ ಇಷ್ಟ ? )<br>*2ನೇ ತರಗತಿಯ ಮಕ್ಕಳು ಅವರ, ಪೋಷಕರು ಹಾಗೂ ಒಡಹುಟ್ಟಿದವರ ಹೆಸರುಗಳನ್ನು ಹೇಳಲು ಪ್ರೋತ್ಸಾಹಿಸಬಹುದು; ಮೂರನೇ ತರಗತಿಯವರು ತಮ್ಮ ಕುಟುಂಬದ ಬಗ್ಗೆ ಮಾತನಾಡಬಹುದು. |

## ನಲಿಕಲಿ ಮತ್ತು ಕಲಿಕಾ ಚೇತರಿಕೆ :

- ರಾಷ್ಟ್ರೀಯ ಶಿಕ್ಷಣ ನೀತಿ – 2020 ಕ್ಕನುಗುಣವಾಗಿ ನಿಪುಣ್ ಭಾರತ ಮಿಷನ್‌ನ ಕಲಿಕಾ ಫಲಗಳಿಗನುಗುಣವಾಗಿ ಮತ್ತು ಪರಿಕಲ್ಪನೆಗಳಿಗನುಗುಣವಾಗಿ ಚಟುವಟಿಕೆಗಳನ್ನು ಅಳವಡಿಸಿದೆ.
- 1 ರಿಂದ 3ನೇ ತರಗತಿಯವರೆಗಿನ ಮಕ್ಕಳಿಗೆ ಪ್ರತ್ಯೇಕವಾಗಿ ಚಟುವಟಿಕೆ ಪುಸ್ತಕಗಳನ್ನು ತಯಾರಿಸಲಾಗಿದೆ.
- ಪ್ರತಿ ಪರಿಕಲ್ಪನೆಗಳಿಗೂ ಅಭ್ಯಾಸ, ಬಳಕೆ ಮತ್ತು ಮೌಲ್ಯಮಾಪನ ಚಟುವಟಿಕೆಗಳನ್ನು ನೀಡಲಾಗಿದೆ.
- ಸಧ್ಯ ಇರುವ ಅಭ್ಯಾಸ ಪುಸ್ತಕಗಳಿಗೆ ಅನುಗುಣವಾಗಿಯೇ ಮ್ಯಾಪಿಂಗ್ ಮಾಡಲಾಗಿದೆ.
- ಪ್ರತಿ ಮಗುವಿಗೂ ಒಂದೊಂದು ಚಟುವಟಿಕೆ ಪುಸ್ತಕ ಇಲಾಖೆಯಿಂದ ಪೂರೈಕೆಯಾಗುತ್ತದೆ.
- ಮಗು ಸುಲಭವಾಗಿ ಅರ್ಥೈಸಿಕೊಂಡು ಚಟುವಟಿಕೆ ನಿರ್ವಹಿಸುವಂತೆ ಸೂಚನೆಗಳನ್ನು ಸರಳವಾಗಿ ನೀಡಲಾಗಿದೆ.
- ಮಗುವಿಗೆ ಚಟುವಟಿಕೆ ನಿರ್ವಹಿಸುವ ವಿಧಾನ ಬಹು ಬೇಗನೇ ಅರ್ಥವಾಗುವಂತಾಗಲು 'ಮಾದರಿ'ಯನ್ನು ನೀಡಲಾಗಿದೆ.
- ಸೂಚನೆಗಳಲ್ಲಿ 'ಹೊಂದಿಸೋಣ', 'ಮಾತನಾಡೋಣ', 'ಬರೆಯೋಣ', 'ಓದೋಣ' ಇಂತಹ ಪದಗಳನ್ನು ಬಳಸಲಾಗಿದೆ.
- ಅಭ್ಯಾಸದ ಹಾಳೆಯ ಮಧ್ಯದಲ್ಲಿ ಚಟುವಟಿಕೆಯ ಶೀರ್ಷಿಕೆಯನ್ನು ನೀಡಲಾಗಿದೆ.
- ಎಡಗಡೆಗೆ ನಿಪುಣ್ ಭಾರತ್ ಕಲಿಕಾ ಫಲದ ಕ್ರಮ ಸಂಖ್ಯೆಯನ್ನು ನೀಡಲಾಗಿದೆ, ಬಲಗಡೆಗೆ ಚಟುವಟಿಕೆಗಳ ಕ್ರಮ ಸಂಖ್ಯೆಯನ್ನು ನೀಡಲಾಗಿದೆ.
- 2 ಮತ್ತು 3ನೇ ತರಗತಿಗಳಿಗೆ ಆರಂಭದಲ್ಲಿ ಹಿಂದಿನ ತರಗತಿಯ ಚಟುವಟಿಕೆಗಳನ್ನು ನೀಡಲಾಗಿದೆ.

**2ನೇ ತರಗತಿಯ ಕನ್ನಡ ಚಟುವಟಿಕೆ ಪುಸ್ತಕದ ಪರಿಚಯ**


**ಪರಿವಿಡಿ**


**(ಎರಡನೇ ತರಗತಿ ಕಲಿಕಾ ಫಲಗಳು)**

| ಕ್ರ ಸ | ಕಲಿಕಾ ಫಲಗಳ ಸಂಖ್ಯೆ | ಕಲಿಕಾ ಫಲಗಳು | ಪುಟ ಸಂಖ್ಯೆ |
|---|---|---|---|
| 1. | FLN | ಅಕ್ಷರ ಬರೆಯೋಣ–1.2 | |
| 2. | FLN | ಗುಣಿತಾಕ್ಷರಗಳನ್ನು ಬರೆಯೋಣ–1.2 | |
| 3. | FLN | ಓದಿ ಬರೆಯೋಣ | |
| 4. | ECL 1 -5.1 | ಅಭಿಪ್ರಾಯ ವ್ಯಕ್ತಪಡಿಸಲು ಹಾಗೂ ವಿವಿಧ ಉದ್ದೇಶಗಳಿಗೆ ಪ್ರಶ್ನೆ ಕೇಳಲು ಶಾಲಾ ಮಾಧ್ಯಮದ ಭಾಷೆಯನ್ನು ಬಳಸುವರು. | |
| 5. | ECL 1 5.3b | ತರಗತಿ/ ಶಾಲೆಯಲ್ಲಿ ನಡೆಯುವ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವರು. | |
| 6. | NKK | ಅಕ್ಷರ ಅಭ್ಯಾಸ | |
| 7. | ECL 1 5.3a | ತಮ್ಮದೇ ಭಾಷೆ ಹಾಗೂ ಶೈಲಿಯಲ್ಲಿ ಸರಳ ಕಥೆ ಹಾಗೂ ಪ್ರಾಸಗೀತೆಗಳನ್ನು ಹೇಳುವರು. | |
| 8. | NKK | ಅಕ್ಷರ ಅಭ್ಯಾಸ | |
| 9. | ECL 1 .5.5b | ಇಷ್ಟವಾದ–ಇಷ್ಟವಾಗದ ವಿಷಯಗಳ ಕುರಿತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವರು ಹಾಗೂ ಪ್ರಶ್ನೆ ಕೇಳುವರು. | |
| 10. | ECL 1 .5.7 | ಕಥೆ/ಪದ್ಯ/ಘಟನೆ ಹಾಗೂ ಇತರ ಪಠ್ಯಗಳಲ್ಲಿ ಬರುವ ಪಾತ್ರಗಳ ಬಗ್ಗೆ ಮಾತನಾಡುವರು. | |
| 11. | NKK | ಅಕ್ಷರ ಅಭ್ಯಾಸ | |
| 12. | IL 1 5.3a | ಏಕಕಾಲದಲ್ಲಿ ವೀಕ್ಷಿಸಿದ ಹಲವಾರು ವಸ್ತುಗಳನ್ನು ಸ್ಮರಿಸುವರು ಹಾಗೂ ಅವುಗಳಲ್ಲಿ ಕೆಲವು ವಸ್ತುಗಳ ಬಗ್ಗೆ ತಮ್ಮದೇ ಮಾತುಗಳಲ್ಲಿ ವಿವರಿಸುವರು. | |

| | | | |
|---|---|---|---|
| 13. | ECL 1 .5.5 c | ಪರಿಚಿತ ಹಾಗೂ ಅಪರಿಚಿತ ಪಠ್ಯವನ್ನು ಓದಲು ಮತ್ತು ಅವುಗಳ ಕುರಿತು ಮಾತನಾಡಲು ಪ್ರಯತ್ನಿಸುವರು. | |
| 14. | NKK | ಅಕ್ಷರ ಅಭ್ಯಾಸ | |
| 15. | ECL 1 .5.5a | ಪರಿಚಿತ ಸನ್ನಿವೇಶವನ್ನು ಆಧರಿಸಿದ ಪಠ್ಯ ಮತ್ತು ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಊಹಿಸುವರು ಮತ್ತು ಓದುವರು. | |
| 16. | ECL 1 5.4 | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸ ಗೀತೆಗಳಲ್ಲಿರುವ ಪ್ರಾಸ ಪದಗಳನ್ನು ಮತ್ತು ಒಂದೇ ಧ್ವನಿಯನ್ನು ಹೋಲುವ ಪದಗಳನ್ನು ಹೇಳುವರು ಮತ್ತು ಬರೆಯುವರು. | |
| 17. | NKK | ಅಕ್ಷರ ಅಭ್ಯಾಸ | |
| 18. | ECL1 5.6 | ಚಿತ್ರ ಕಥೆ/ಕಥಾ ಪುಸ್ತಕದಲ್ಲಿರುವ ಪಾತ್ರಗಳು ಮತ್ತು ಘಟನೆಗಳನ್ನು ಅರ್ಥಮಾಡಿಕೊಳ್ಳುವರು. ಮತ್ತು ಅವುಗಳ ಕುರಿತು ಭಾಷಾ ನಿಯಮಗಳನ್ನು ಅನುಸರಿಸಿ ಬರೆಯುವರು. | |
| 19. | NKK | ಅಕ್ಷರ ಅಭ್ಯಾಸ | |
| 20. | ECL 1 5.2 | ಪರಿಚಿತ ಕಥೆಯಲ್ಲಿನ ಪಾತ್ರಗಳ ಬಗ್ಗೆ ಮಾತನಾಡುವರು ಹಾಗೂ ತಮಗಿಷ್ಟವಾದ ಪಾತ್ರದ ಚಿತ್ರ ಬರೆದು ಹೆಸರಿಸುವರು. | |
| 21. | NKK | ಅಕ್ಷರ ಅಭ್ಯಾಸ | |
| 22. | ECL 1 5.3c | ತಮ್ಮ ಆಯ್ಕೆಯ ಕಥೆ ಅಥವಾ ಪದ್ಯಗಳನ್ನು ಹೇಳುವರು. | |
| 23. | NKK | ಅಕ್ಷರ ಅಭ್ಯಾಸ | |
| 24. | ECL1 5.8 | ಭಾಷಾ ನಿಯಮಗಳನ್ನಾಧರಿಸಿದ ಬರವಣಿಗೆಯಲ್ಲಿ ಸೂಕ್ತ ಪದಗಳು/ ವಾಕ್ಯಗಳು ಹಾಗೂ ಅಭಿವ್ಯಕ್ತಿಯ ವಿವಿಧ ರೂಪಗಳನ್ನು ಬಳಸುವರು. | |
| 25. | ECL 1 5.9 | ಸೃಜನಶೀಲತೆ ಹಾಗೂ ಕಲ್ಪನೆಯನ್ನು ಆಧರಿಸಿ ಕಥೆಯನ್ನು ವಿಸ್ತರಿಸುವರು ಹಾಗೂ ಬರವಣಿಗೆಯಲ್ಲಿ ವ್ಯಕ್ತಪಡಿಸುವರು. | |
| 26. | NEW | ಕನ್ನಡ ಅಂಕಿಗಳ ಪರಿಚಯ | |


## ಹಿಂದಿನ ತರಗತಿಯ ಪರಿಕಲ್ಪನೆಗಳನ್ನಾಧರಿಸಿದ ಪೂರ್ವಭಾವಿ ಚಟುವಟಿಕೆಗಳು









ಇಅಐ1 5.3b ತರಗತಿ/ ಶಾಲೆಯಲ್ಲಿ ನಡೆಯುವ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವರು










## ಕಲಿಕಾ ಚೇತರಿಕೆ: 4ರಿಂದ 7ನೇ ತರಗತಿ ಗಣಿತ ಕಲಿಕಾ ಫಲಗಳ ಹರಿವು ಮತ್ತು ಕಲಿಕಾ ಹಾಳೆಗಳು

**ಶಾಲಾ ಗಣಿತದ ಉದ್ದೇಶಗಳು**

- ಮಕ್ಕಳು ತಾರ್ಕಿಕವಾಗಿ ಚಿಂತನೆ ಮಾಡುವಂತಾಗಬೇಕು. (Logical thinking)
- ಮಕ್ಕಳು ಗಣಿತದ ಮೂಲ ರಚನೆಯನ್ನು ಗ್ರಹಿಸಬೇಕು. (Structure)
- ಮಕ್ಕಳು ಗಣಿತೀಯವಾಗಿ ಆಲೋಚಿಸಬೇಕು ಮತ್ತು ಸಂವಹನ ಮಾಡಬೇಕು. (Mathematical thinking and communication)
- ಮಕ್ಕಳು ಸಂದರ್ಭಕ್ಕನುಗುಣವಾಗಿ ಅಂದಾಜಿಸುವಂತಾಗಬೇಕು. (Estimation)
- ಮಕ್ಕಳು ಗಣಿತದ ಮೂಲಕ ಸೌಂದರ್ಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. (Aesthetic sense)
- ಮಕ್ಕಳು ಇರುವ ಅವಕಾಶ ಅಥವಾ ಸಂದರ್ಭಗಳಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಿಕೊಳ್ಳಬೇಕು. (Optimisation)
- ಮಕ್ಕಳು ಅರ್ಥಪೂರ್ಣ ಸಮಸ್ಯೆಗಳನ್ನು ಮುಂದಿಟ್ಟು ಅವುಗಳಿಗೆ ಸ್ವತಃ ಪರಿಹಾರಗಳನ್ನು ಹುಡುಕಿಕೊಳ್ಳುವಂತಾಗಬೇಕು. (Heuristics)
- ಮಕ್ಕಳು ಸಾಮಾನ್ಯೀಕರಿಸುವ ಕೌಶಲವನ್ನು ಗಳಿಸಬೇಕು. (Generalization)
- ಮಕ್ಕಳು ವಿವಿಧ ಸಂದರ್ಭಗಳಲ್ಲಿ ಅಮೂರ್ತತೆಯನ್ನು ನಿರ್ವಹಿಸುವಂತಾಗಬೇಕು. (Abstraction)
- ನಿತ್ಯ ಜೀವನದಲ್ಲಿ ಬಳಕೆ (Day today life transaction)

**ಎನ್.ಸಿ.ಎಫ್ 2005: ಗಣಿತ ಶಿಕ್ಷಣದ ಗುರಿಗಳು**


- ಹೆಚ್ಚು ಗಣಿತವನ್ನು ತಿಳಿದುಕೊಳ್ಳುವುದಕ್ಕಿಂತ ಮಗುವಿನ ಯೋಚನಾ ಲಹರಿಯನ್ನು ಗಣಿತೀಕರಿಸುವುದು ಬಹುಮುಖ್ಯ
- ಮಗುವು ಯೋಚಿಸಿ ತರ್ಕಿಸುವಂತೆ, ಊಹೆಗಳನ್ನು ತಾರ್ಕಿಕ ನಿರ್ಣಯಗಳಿಗೆ ತಲುಪಿಸುವಂತೆ ಮತ್ತು ಅಮೂರ್ತವಾದವುಗಳನ್ನು ನಿರ್ವಹಿಸುವಂತೆ ಮಗುವಿನ ಸಂಪನ್ಮೂಲ ಜ್ಞಾನವನ್ನು ಬೆಳೆಸುವುದು.
- ಅದು ಸಂಯೋಜನಾತ್ಮಕವಾಗಿ ಇರಬೇಕು. ಅಂದರೆ, ಬಿಡಿಬಿಡಿಯಾಗಿ ದೊರಕುವ ವಿಧಾನ ಮತ್ತು ಕೌಶಲಗಳು (ಅಂಕಗಣಿತ, ಬೀಜಗಣಿತ, ರೇಖಾಗಣಿತ) ಬೇರೆ ಕ್ಷೇತ್ರಗಳಾದ ವಿಜ್ಞಾನ ಮತ್ತು ಸಾಮಾಜಿಕ ಅಧ್ಯಯನಗಳ ವತಿಯಿಂದ ಬರಬಹುದಾದ ಸಮಸ್ಯೆಗಳನ್ನು ಕುರಿತು ವಿವೇಚಿಸುವ ಸಾಮರ್ಥ್ಯವನ್ನು ಪಡೆಯುವಂತಾಗಬೇಕು.
- ಶಾಲೆಯಲ್ಲಿ ಗಣಿತ ಶಿಕ್ಷಣವು ಚಟುವಟಿಕೆ ಆಧಾರಿತವಾಗಿರಬೇಕು.
- ಗಣಿತವು ಸೂತ್ರ ಮತ್ತು ತಾಂತ್ರಿಕ ವಿಧಾನಗಳಿಗಿಂತ ಹೆಚ್ಚಿನದಾಗಬೇಕು.
- ಮಕ್ಕಳು ತಮ್ಮೊಳಗೆ ಮಾತನಾಡಿಕೊಳ್ಳಲು, ಚರ್ಚೆ ಮಾಡಲು, ಒಟ್ಟಿಗೆ ಕೆಲಸ ಮಾಡಲು ಮತ್ತು ಸಂವಹನಕ್ಕಾಗಿ ಗಣಿತವನ್ನು ಪರಿಗಣಿಸಬೇಕು.
- ಮಕ್ಕಳು ಗಣಿತದ ಅಮೂರ್ತ ಕಲ್ಪನೆಗಳನ್ನು, ಸಂಬಂಧಗಳನ್ನು ಗ್ರಹಿಸಲು, ರಚನೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ತರ್ಕಬದ್ಧವಾಗಿ ಚಿಂತಿಸಲು ಬಳಸುವಂತಿರಬೇಕು.

**ಕಲಿಕಾಫಲಗಳ ಮರು ಹೊಂದಾಣಿಕೆ ಕಾರ್ಯ ಅಥವಾ ಪರ್ಯಾಯ ಪಠ್ಯಕ್ರಮವನ್ನು ಸಿದ್ಧಪಡಿಸುವುದು**

| ಮೂಲಭೂತ ಸಂಖ್ಯಾಜ್ಞಾನ (ನಿಪುಣ್ ಭಾರತ್) | + | ಹಿಂದಿನ ಎರಡು ತರಗತಿಗಳ ಅವಶ್ಯಕ ಕಲಿಕಾ ಫಲಗಳು | + | ಆಯಾ ತರಗತಿಯ ಅವಶ್ಯಕ ಕಲಿಕಾ ಫಲಗಳು |
|---|---|---|---|---|


***ಸೂಚನೆ:*** *ಎನ್.ಇ.ಪಿ–2020 ರ ಪ್ರಕಾರ ಮಕ್ಕಳು ಮೂಲಭೂತ ಸಂಖ್ಯಾಜ್ಞಾನದಲ್ಲಿ ತೀರಾ ಹಿಂದುಳಿದಿರುವುದನ್ನು ಕಾಣಬಹುದು. ಆದ್ದರಿಂದ ಈ ಶೈಕ್ಷಣಿಕ ವರ್ಷವು ನಿಪುಣ ಭಾರತ್ ಆಶಯದಂತೆ, ಮೂಲಭೂತ ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದ ಕಲಿಕಾ ಫಲಗಳನ್ನು ಈ ಸಾಹಿತ್ಯದಲ್ಲಿ, ಪ್ರತಿ ತರಗತಿಯಲ್ಲಿ ಅಳಡಿಸಲಾಗಿದೆ.*

**ಕಲಿಕಾ ಫಲಗಳನ್ನು ಥೀಮ್‌ಗಳಾಗಿ ವಿಂಗಡಿಸಿರುವುದು**




***ಸೂಚನೆ:*** *ಹಿರಿಯ ತರಗತಿಗಳಲ್ಲಿ ಸಂಖ್ಯೆಗಳು ಮತ್ತು ಮೂಲಕ್ರಿಯೆಗಳು ಒಟ್ಟೊಟ್ಟಿಗೆ ಹೋಗಿರುವುದು ಕಂಡುಬರುತ್ತದೆ. ಬಹುತೇಕ ಎಲ್ಲಾ ತರಗತಿಗಳಲ್ಲೂ ಈ ಥೀಮ್‌ಗಳು ನಿರಂತರತೆಯನ್ನು ಕಾಯ್ದುಕೊಂಡಿರುವುದನ್ನು ಕಾಣಬಹುದು.*

**ಅಭ್ಯಾಸ ಹಾಳೆ ಮತ್ತು ಕಲಿಕಾ ಹಾಳೆಗಳ ವೈಶಿಷ್ಟ್ಯ**




**ಕಲಿಕಾ ಫಲಗಳ ಮರುಹೊಂದಾಣಿಕೆ – ತರಗತಿವಾರು**

| ತರಗತಿ | ಹಿಂದಿನ ಎರಡು ತರಗತಿಯ ಕಲಿಕಾ ಫಲಗಳ ಸಂಖ್ಯೆ | | ಪ್ರಸ್ತುತ ತರಗತಿಯ ಕಲಿಕಾ ಫಲಗಳ ಸಂಖ್ಯೆ (ಸಾಮನ್ಯ ದಿನಗಳಲ್ಲಿ) | ಒಟ್ಟು | ಕಲಿಕಾ ಚೇತರಿಕೆ – ಮರುಹೊಂದಾಣಿಕೆ ಮಾಡಿದ ಕಲಿಕಾ ಫಲಗಳ ಸಂಖ್ಯೆ | |
|---|---|---|---|---|---|---|
| 4 ನೇ | 19 (2) | 22 (3) | 20 | 61 | 12 | ಅತಿ ಮುಖ್ಯ ಹಾಗೂ ಮುಂದಿನ ತರಗತಿಯ ಕ.ಫ ಗಳನ್ನು ಸಂಯೋಜಿಸಿ ಮರುಹೊಂದಾಣಿಕೆ ಮಾಡಿದೆ. |
| 5 ನೇ | 22 (3) | 20 (4) | 19 | 61 | 13 | |
| 6 ನೇ | 20 (4) | 19 (5) | 23 | 62 | 11 | |
| 7 ನೇ | 19 (5) | 23 (6) | 22 | 64 | 14 | |
| ಒಟ್ಟು | 80 | 84 | 84 | 248 | 50 | |

**ಸಂಖ್ಯಾಜ್ಞಾನ ಹಾಗೂ ಮೂಲಕ್ರಿಯೆಗಳು ಗಣಿತದ ಮೂಲಕೌಶಲವಾಗಿದ್ದು, ಪ್ರತಿ ತರಗತಿಯಲ್ಲಿಯೂ ಪ್ರಮುಖ ಕಲಿಕಾ ಫಲಗಳಾಗಿ ಮುಂದುವರೆಸಲಾಗಿದೆ.**

# ಕಲಿಕಾ ಹಾಳೆಯ ಪರಿಚಯ – ಒಂದು ಕಲಿಕಾ ಫಲದ ಪರಿಚಯದೊಂದಿಗೆ,

**7) ಕಲಿಕಾ ಫಲ: $\frac{1}{2}$, $\frac{1}{4}$, $\frac{3}{4}$ ಇವುಗಳನ್ನು ಕೊಟ್ಟಿರುವ ಚಿತ್ರಗಳಲ್ಲಿ ಮತ್ತು ಸಂಗ್ರಹಿಸಿದ ವಸ್ತುಗಳಲ್ಲಿ ಗುರುತಿಸಿ ಸಂಕೇತಗಳಲ್ಲಿ ಸೂಚಿಸುವರು.**

**ಕಲಿಕಾ ಫಲದ ವ್ಯಾಪ್ತಿ ಮತ್ತು ಮಹತ್ವ:** ನಿತ್ಯ ಜೀವನದಲ್ಲಿ ಕಾಲು, ಅರ್ಧ ಹಾಗೂ ಮುಕ್ಕಾಲು ಪದಗಳನ್ನು ಬಳಕೆ ಮಾಡುತ್ತೇವೆ. ಅದರ ಸಾಂಕೇತಿಕ ರೂಪವನ್ನು ಅರ್ಥಮಾಡಿಕೊಳ್ಳುವುದು ಭಿನ್ನರಾಶಿ ಪರಿಕಲ್ಪನೆಗೆ ಅವಶ್ಯವಾಗಿ ಬೇಕಾಗುತ್ತದೆ. ಭಿನ್ನರಾಶಿಗಳನ್ನು ಪೂರ್ಣದ ಭಾಗವೆಂದು ತಿಳಿಸುತ್ತಿದ್ದರೂ ನಾವು ಖರೀದಿಸುವ ಸಾಮಗ್ರಿಗಳಾದ ಅರ್ಧ ಕೆ.ಜಿ. ಸಕ್ಕರೆ, ಚಹಾಪುಡಿ ಹಾಗೂ ಅರ್ಧ ಲೀಟರ್ ಹಾಲುಗಳನ್ನು ಪೂರ್ಣದಂತೆ ಒಂದು ಪ್ಯಾಕೇಟ್‌ನಲ್ಲಿ ನೀಡುತ್ತಾರೆ. ಅದ್ದರಿಂದ ಮಕ್ಕಳಿಗೆ ಪೂರ್ಣ, ಪೂರ್ಣದ ಒಟ್ಟು ಸಮಭಾಗಗಳು, ಸಮಭಾಗಗಳಲ್ಲಿ ಆಯ್ದ ಭಾಗಗಳನ್ನು ಅನುಕ್ರಮವಾಗಿ ಅರ್ಥಮಾಡಿಸುತ್ತಾ ನಿತ್ಯಜೀವನದಲ್ಲಿ ಬಳಸುವ ಕಾಲು, ಮುಕ್ಕಾಲು ಹಾಗೂ ಅರ್ಧವನ್ನು ಸಂಕೇತದ ಮೂಲಕ ಮಕ್ಕಳು ಪ್ರತಿನಿಧಿಸುವಂತಾಗಬೇಕು. ಈ ಸಾಮರ್ಥ್ಯವು ಮಗುವು ಭಿನ್ನರಾಶಿಯನ್ನು ಚಿತ್ರದಿಂದ ಸಂಕೇತಕ್ಕೂ ಹಾಗೂ ಸಂಕೇತದಿಂದ ಚಿತ್ರದಲ್ಲಿ ಬರೆಯುವದನ್ನು ಒಳಗೊಂಡಿದ್ದು ಈ ಸಾಮರ್ಥ್ಯದ ಬೆಳೆವಣಿಗೆಗೆ ಮಕ್ಕಳಿಗೆ ವಿವಿಧ ಆಯಾಮಗಳಲ್ಲಿ ಅಭ್ಯಾಸ ಚಟುವಟಿಕೆಗಳನ್ನು ನೀಡಬೇಕಾಗುತ್ತದೆ. ಈ ಕಲಿಕೆಯ ಮೂಲಕ ಮಗುವು ನಿತ್ಯ ಜೀವನದಲ್ಲಿ ಭಿನ್ನರಾಶಿ ಹಾಗೂ ಅದರ ಸಾಂಕೇತಿಕ ರೂಪವನ್ನು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಬಳಸಲು ಶಕ್ತನಾಗುತ್ತಾರೆ.



**ಚಟುವಟಿಕೆ ಸಂಖ್ಯೆ-1: ಸಮೂಹದಲ್ಲಿನ ಒಟ್ಟು ವಸ್ತುಗಳನ್ನು ಅರ್ಧ, ಕಾಲು ಹಾಗೂ ಮುಕ್ಕಾಲು ಭಾಗಗಳಾಗಿ ಬೇರ್ಪಡಿಸುವದನ್ನು ಕಲಿಸುವುದು.**

**ಉದ್ದೇಶ:** ವಸ್ತುಗಳನ್ನು ಅರ್ಧ, ಕಾಲು ಹಾಗೂ ಮುಕ್ಕಾಲು ಭಾಗಗಳಾಗಿ ಬೇರ್ಪಡಿಸುತ್ತಾರೆ.

**ಚಟುವಟಿಕೆಯ ವಿವರ:** ಮಕ್ಕಳು ಗುಂಪಿನಲ್ಲಿ ಇರುವ ಒಟ್ಟು ವಸ್ತುಗಳನ್ನು ಎಣಿಸುವರು. ಒಟ್ಟು ಗುಂಪಿನಲ್ಲಿನ ವಸ್ತುಗಳನ್ನು ಸೂಚಿಸಿದಂತೆ ಅರ್ಧ, ಕಾಲು ಹಾಗೂ ಮಕ್ಕಾಲು ಭಾಗದಂತೆ ಬೇರ್ಪಡಿಸುವುದನ್ನು ಅರ್ಥಮಾಡಿಸಬೇಕು. ಈ ಪ್ರಕ್ರಿಯೆ ಮೂಲಕ ಗುಂಪಿನ ಒಟ್ಟು ವಸ್ತುಗಳನ್ನು ಬೇರ್ಪಡಿಸಿದ ವಸ್ತುಗಳನ್ನು ಬರೆಯುವ ಮೂಲಕ ಕಾಲು, ಅರ್ಧ ಹಾಗೂ ಮುಕ್ಕಾಲು ಪದಗಳ ಅರ್ಥ ಹಾಗೂ ಪ್ರಮಾಣಗಳನ್ನು ತಿಳಿದುಕೊಳ್ಳುತ್ತಾರೆ. ಪೂರ್ಣವೆನ್ನುವುದು ಒಂದು ವಸ್ತು ಅಥವಾ ಸಮೂಹ/ಗುಂಪನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಮಕ್ಕಳಿಗೆ ಅರ್ಥಮಾಡಿಸುವದಕ್ಕಾಗಿ ನಿತ್ಯಜೀವನದಲ್ಲಿ ಬಳಸುವ ಕೇಕ್‌ನ ಕತ್ತರಿಸಿದ ಭಾಗ, ತರಗತಿಯ ಒಟ್ಟು ವಿದ್ಯಾರ್ಥಿಗಳಲ್ಲಿ ಅರ್ಧಭಾಗ ಇತ್ಯಾದಿ ಸನ್ನಿವೇಶಗಳ ಮೂಲಕ ಭಿನ್ನರಾಶಿಯ ಅರ್ಥವನ್ನು ತಿಳಿಸುವುದು.

ಸಾಮಾನ್ಯವಾಗಿ ಬಳಸುವ ಆಯತ, ಚೌಕ ಹಾಗೂ ವೃತ್ತ ಆಕೃತಿಯ ಹೊರತಾಗಿ ಬೇರೆ ಆಕಾರದ ಆಕೃತಿಗಳನ್ನು ಕೂಡಾ ಸಮಭಾಗ ಮಾಡುವ ಅವಕಾಶಗಳಿಗೆ ಹೆಚ್ಚು ಗಮನ ನೀಡುವದು.

| | |
|---|---|
| ಒಟ್ಟು ಚೆಂಡುಗಳ ಸಂಖ್ಯೆ ________ |  |
| ಅವುಗಳಲ್ಲಿ ____ ಚೆಂಡುಗಳಿಗೆ ವೃತ್ತ ಸುತ್ತಿದೆ.<br>ಒಟ್ಟು ಚೆಂಡುಗಳ ಸಂಖ್ಯೆಯ ______ದಷ್ಟಕ್ಕೆ ವೃತ್ತ ಸುತ್ತಿದೆ. |  |
| ವೃತ್ತ ಸುತ್ತಿದ ಚೆಂಡುಗಳ ಸಂಖ್ಯೆ ________<br>ಒಟ್ಟು ಚೆಂಡುಗಳಲ್ಲಿ ಕಾಲು ಭಾಗದಷ್ಟು (ಅರ್ಧದಲ್ಲಿ ಅರ್ಧದಷ್ಟು) ಚೆಂಡುಗಳಿಗೆ ವೃತ್ತ ಸುತ್ತಿದೆ. |  |


ಕೆಳಗಿನ ಚಿತ್ರಗಳಿಗೆ ಮೂರು ಕಾಲು ಭಾಗದ (ಮುಕ್ಕಾಲು) ಸಂಖ್ಯೆಯಷ್ಟು ಚಿತ್ರಗಳಿಗೆ ಉದಾಹರಣೆಯಂತೆ ಬಣ್ಣ ತುಂಬು ಅಥವಾ ಶೇಡ್ ಮಾಡು:-

ಉದಾ:





ಕೆಳಗಿನ ಚಿತ್ರದ ಅರ್ಧ ($\frac{1}{2}$) ಭಾಗಕ್ಕೆ ಬಣ್ಣ ತುಂಬು ಅಥವಾ ಶೇಡ್ ಮಾಡು:-

ಕೆಳಗಿನ ಚಿತ್ರದ ಮುಕ್ಕಾಲು ($\frac{3}{4}$) ಭಾಗಕ್ಕೆ ಬಣ್ಣ ತುಂಬು ಅಥವಾ ಶೇಡ್ ಮಾಡು:-







**ಕಲಿಕಾ ಹಾಳೆಯ ಚಟುವಟಿಕೆ ಸಂಖ್ಯೆ:** 7.1, 7.2, 7.3, 7.4, 7.5, 7.6, 7.7, 7.8, 7.9, 7.10, 7.11.

## ಕಲಿಕಾ ಹಾಳೆ – ಚಟುವಟಿಕೆಯ ಅಂತರ್ ಸಂಬಂಧ (ಜೋಡಣೆ)




7.18 ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ.


| | |
|---|---|
| ಈ ಚಿತ್ರದಲ್ಲಿ $\frac{1}{2}$ ರಷ್ಟು ವೃತ್ತಗಳಿಗೆ ಬಣ್ಣ ಹಚ್ಚಿ. |  |
| ಈ ಚಿತ್ರದಲ್ಲಿ $\frac{1}{4}$ ರಷ್ಟು ವೃತ್ತಗಳಿಗೆ ಬಣ್ಣ ಹಚ್ಚಿ. |  |
| ಈ ಚಿತ್ರದಲ್ಲಿ $\frac{1}{2}$ ರಷ್ಟು ಚೆಂಡುಗಳಿಗೆ ವೃತ್ತ ಹಾಕಿ. |  |
| ಈ ಚಿತ್ರದಲ್ಲಿ $\frac{3}{4}$ ರಷ್ಟು ಚಾಕಲೇಟ್‌ಗಳಿಗೆ ವೃತ್ತ ಹಾಕಿ. |  |

## ಕಲಿಕಾ ಹಾಳೆ – ಚಟುವಟಿಕೆಯ ಹಾಗೂ ಪಠ್ಯಪುಸ್ತಕದ ಉಪಯೋಗ

7.22 ಕೆಳಗೆ ಕೊಟ್ಟಿರುವ ಆಕೃತಿಗಳಲ್ಲಿ $\frac{3}{4}$ ಬಣ್ಣ ಹಚ್ಚಿರುವ ಚಿತ್ರವನ್ನು ಗುರುತಿಸಿ ಹಾಗೂ ಸರಿಯಾದ ಚಿತ್ರಕ್ಕೆ ಟಿಕ್ ಹಾಕಿ ( ✓) ಇಲ್ಲವಾದರೆ ( × ) ಹಾಕಿ.



ಪಠ್ಯ ಪುಸ್ತಕದಲ್ಲಿ ಪುಟ ಸಂಖ್ಯೆ 144 ಮತ್ತು 146 ರಲ್ಲಿರುವ ಲೆಕ್ಕಗಳನ್ನು ಮನೆಯಲ್ಲಿ ಹಿರಿಯರ ಸಹಾಯದೊಂದಿಗೆ ನೋಟ್‌ಪುಸ್ತಕದಲ್ಲಿ ಮಾಡಿ ಶಿಕ್ಷಕರಿಗೆ ತೋರಿಸು. (ಅಗತ್ಯವೆನಿಸಿದರೆ ಶಿಕ್ಷಕರ ಸಹಾಯವನ್ನೂ ಪಡೆ.)



7.23 ನಾನು ಮತ್ತು ನನ್ನ ಕಲಿಕೆ (ಈವರೆಗೆ ಕಲಿತಿದ್ದನ್ನು ಸ್ವ-ಅವಲೋಕನ ಮಾಡಿಕೊಳ್ಳುವೆ)

1) ಈ ಚಿತ್ರದ ಅರ್ಧ ($\frac{1}{2}$) ಭಾಗಕ್ಕೆ ಬಣ್ಣ ತುಂಬು

2) ಈ ಚಿತ್ರದ ಕಾಲು ($\frac{1}{4}$) ಭಾಗಕ್ಕೆ ಬಣ್ಣ ತುಂಬು

3) ಈ ಚಿತ್ರದ ಕಾಲು ($\frac{1}{4}$) ಭಾಗಕ್ಕೆ ಬಣ್ಣ ತುಂಬು


4) ಕೋಷ್ಟಕ ಪೂರ್ಣಗೊಳಿಸು:-

| ಭಿನ್ನರಾಶಿ ಸಂಖ್ಯೆ | ಓದುವ ಕ್ರಮ | ಛೇದ | ಅಂಶ |
|---|---|---|---|
| $\frac{1}{2}$ | ಎರಡರಲ್ಲಿ ಒಂದು | 2 | |
| $\frac{1}{4}$ | | | 1 |
| $\frac{3}{4}$ | | | |
| $\frac{4}{4}$ | ನಾಲ್ಕರಲ್ಲಿ ನಾಲ್ಕು | | |

ಮೌಲ್ಯಮಾಪನದ ಸ್ತರಗಳು (ನನ್ನ ಕಲಿಕೆ ಹೇಗಾಗಿದೆ? ✓ ಗುರುತು ಹಾಕುವೆ)

| ಕಲಿಕಾ ಫಲ | ಸ್ತರ–1 | ಸ್ತರ–2 | ಸ್ತರ–3 | ಸ್ತರ–4 |
|---|---|---|---|---|
| $\frac{1}{2}, \frac{1}{4}, \frac{3}{4}$ ಇವುಗಳನ್ನು ಕೊಟ್ಟಿರುವ ಚಿತ್ರಗಳಲ್ಲಿ ಮತ್ತು ಸಂಗ್ರಹಿಸಿದ ವಸ್ತುಗಳಲ್ಲಿ ಗುರುತಿಸಿ ಸಂಕೇತಗಳಲ್ಲಿ ಸೂಚಿಸುವೆನು. | $\frac{1}{2}, \frac{1}{4}, \frac{3}{4}$ ಇವುಗಳನ್ನು ಸಂಗ್ರಹಿಸಿದ ವಸ್ತುಗಳಲ್ಲಿ ಗುರುತಿಸುವೆನು. | $\frac{1}{2}, \frac{1}{4}, \frac{3}{4}$ ಇವುಗಳನ್ನು ಸಂಗ್ರಹಿಸಿದ ವಸ್ತುಗಳಲ್ಲಿ ಗುರುತಿಸಿ ಸಂಕೇತಗಳಲ್ಲಿ ಸೂಚಿಸುವೆನು. | $\frac{1}{2}, \frac{1}{4}, \frac{3}{4}$ ಇವುಗಳನ್ನು ಕೊಟ್ಟಿರುವ ಚಿತ್ರಗಳಲ್ಲಿ ಮತ್ತು ಸಂಗ್ರಹಿಸಿದ ವಸ್ತುಗಳಲ್ಲಿ ಗುರುತಿಸಿ ಸಂಕೇತಗಳಲ್ಲಿ ಸೂಚಿಸುವೆನು. | $\frac{1}{2}, \frac{1}{4}, \frac{3}{4}$ ಇವುಗಳನ್ನು ಕೊಟ್ಟಿರುವ ಚಿತ್ರಗಳಲ್ಲಿ ಮತ್ತು ಸಂಗ್ರಹಿಸಿದ ವಸ್ತುಗಳಲ್ಲಿ ಗುರುತಿಸಿ ಸಂಕೇತಗಳಲ್ಲಿ ಸೂಚಿಸುವೆನು. ಅಂಶ, ಛೇದ ಗುರುತಿಸಿ ಓದುವೆನು. |
| | | | | |

## ಮೌಲ್ಯಮಾಪನ




### ಕಲಿಕಾ ಚೇತರಿಕೆಯಲ್ಲಿ ಗಮನಿಸಬೇಕಾದ ಅಂಶಗಳು

- ಕಲಿಕಾ ಹಾಳೆಗಳು ಸ್ವ–ಕಲಿಕಾ ಸಾಮಗ್ರಿಗಳು ಎಂದು ಭಾವಿಸಬಾರದು. ಈ ಕಲಿಕಾ ಹಾಳೆಗಳನ್ನು ಶಿಕ್ಷಕರು ಉಪಯೋಗಿಸಿ ಮಕ್ಕಳಲ್ಲಿ ಕಲಿಕಾ ಫಲಗಳನ್ನು ಈಡೇರಿಸಬೇಕಾಗುತ್ತದೆ.
- ಕಲಿಕಾ ಚೇತರಿಕಾ ವರ್ಷವು ಸಿಲಬಸ್ ಮುಗಿಸುವುದಲ್ಲ, ಬದಲಾಗಿ ಮರುಹೊಂದಾಣಿಕೆ ಮಾಡಿರುವ ಕಲಿಕಾ ಫಲಗಳನ್ನು ಎಲ್ಲಾ ಮಕ್ಕಳಲ್ಲಿ ಈಡೇರಿಸುವ ಆಶಯವನ್ನು ಹೊಂದಿದೆ.
- ಈ ಕಲಿಕಾ ಹಾಳೆಗಳು ಪಾಠ ಮಾಡಿ ಮುಗಿಸಿ ಉಪಯೋಗಿಸುವ ಮೌಲ್ಯಮಾಪನ ಸಾಧನವಲ್ಲ, ಬದಲಾಗಿ ಪ್ರತಿ ಕಲಿಕಾಫಲಗಳನ್ನು ಈಡೇರಿಸಲು ಉಪಯೋಗಿಸುವ ಬೋಧನಾ ಕಲಿಕಾ ಪ್ರಕ್ರಿಯೆ.
- ಒಂದು ಕಲಿಕಾ ಹಾಳೆ ಒಂದು ಅವಧಿಗೆ/ದಿನಕ್ಕೆ ಎಂದು ಪಟ್ಟುಬೀಳದೇ ಮಕ್ಕಳ ಕಲಿಕೆಗೆ ತಕ್ಕಂತ ಉಪಯೋಗಿಸುತ್ತಾ ಹೋಗಬೇಕಾಗುತ್ತದೆ.
- ಕಲಿಕಾ ಹಾಳೆಗಳನ್ನು ಮನೆಗೆಲಸಕ್ಕೆ ಸೀಮಿತವಾಗಿಸಲು ಪ್ರಯತ್ನಿಸಬೇಡಿ.
- ಕಲಿಕಾ ಹಾಳೆಗಲ್ಲಿರುವ ಬಿಟ್ಟ ಸ್ಥಳ ತುಂಬಿದರೆ ಮಕ್ಕಳು ಕಲಿತುಬಿಡುತ್ತಾರೆ ಎನ್ನುವುದರಲ್ಲಿ ಅರ್ಥವಿಲ್ಲ. ಪ್ರತಿ ಚಟುವಟಿಕೆಯ ಹಿಂದೆ–ಮುಂದೆ ಚಟುವಟಿಕೆಗಳನ್ನು ಜೋಡಿಸುವುದು ಶಿಕ್ಷಕರ ಕರ್ತವ್ಯವಾಗಿರುತ್ತದೆ. ಅದರ ಜೊತೆಗೆ ಅಲ್ಲಿ ನೀಡಿರುವ ಸೂಕ್ತ ಕಲಿಕೋಪಕರಣಗಳನ್ನು ತರಗತಿಯಲ್ಲಿ ಉಪಯೋಗಿಸಿ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸಬೇಕಾಗುತ್ತದೆ.
- ಈ ಚಟುವಟಿಕೆಗಳನ್ನು ಮುಂದಿಟ್ಟುಕೊಂಡು ಮಕ್ಕಳು ಉತ್ತರ ಮಾಡಲು ಅವಕಾಶ ಕೊಟ್ಟು ಚರ್ಚಿಸಬೇಕಾಗುತ್ತದೆ. ಒಂದು ಮಗುವಿನ ಉತ್ತರವನ್ನು ನೋಡಿ ಎಲ್ಲರೂ ಉತ್ತರವನ್ನು ಬರೆದುಕೊಳ್ಳುವುದರಿಂದ ಆಶಯವನ್ನು ಈಡೇರಿಸಿದಂತಾಗುವುದಿಲ್ಲ.

**ಕಲಿಕಾ ಚೇತರಿಕೆ: 7ನೇ ತರಗತಿ ವಿಜ್ಞಾನ ಕಲಿಕಾ ಫಲಗಳ ಹರಿವು ಮತ್ತು ಕಲಿಕಾ ಹಾಳೆಗಳು**

| ಥೀಮ್ | ಘಟಕ | 5ನೇ ತರಗತಿ | 6ನೇ ತರಗತಿ | 7ನೇ ತರಗತಿ | ಒಟ್ಟು ಕಲಿಕಾ ಫಲಗಳು | ಆಯ್ದ ಕಲಿಕಾ ಫಲಗಳು |
|---|---|---|---|---|---|---|
| ಆಹಾರ | ಸಸ್ಯಗಳಲ್ಲಿ ಪೋಷಣೆ<br>ಪ್ರಾಣಿಗಳಲ್ಲಿ ಪೋಷಣೆ | 6 | 6 | 8 | 20 | 12 |
| ಪದಾರ್ಥಗಳು | ಉಷ್ಣ | 1 | 0 | 4 | 5 | 4 |
| ಪದಾರ್ಥಗಳು | ಆಮ್ಲಗಳು ಮತ್ತು ಪ್ರತ್ಯಾಮ್ಲಗಳು | 1 | 0 | 2 | 3 | 3 |
| ವಸ್ತುಗಳು | ಭೌತ ಬದಲಾವಣೆ ಮತ್ತು ರಾಸಾಯನಿಕ ಬದಲಾವಣೆ | 1 | 2 | 2 | 5 | 4 |
| | ಹವಾಮಾನ ವಾಯುಗುಣ ಮತ್ತು ವಾಯುಗುಣಕ್ಕೆ ಪ್ರಾಣಿಗಳ ಹೊಂದಾಣಿಕೆ | 2 | 0 | 5 | 7 | 2 |
| ನೈಸರ್ಗಿಕ ವಿದ್ಯಾಮಾನಗಳು. | ಮಾರುತಗಳು, ಬಿರುಗಾಳಿಗಳು ಮತ್ತು ಚಂಡಮಾರುತಗಳು: | 0 | 1 | 4 | 5 | 4 |
| ಜೀವ ಪ್ರಪಂಚ | ಜೀವಿಗಳಲ್ಲಿ ಉಸಿರಾಟ, ಪ್ರಾಣಿಗಳು ಮತ್ತು ಸಸ್ಯಗಳಲ್ಲಿ ಉಸಿರಾಟ, ಸಸ್ಯಗಳಲ್ಲಿ ಸಂತಾನೋತ್ಪತಿ | 5 | 6 | 13 | 24 | 14 |
| ಚಲಿಸುವ ವಸ್ತುಗಳು, ಜನರು ಮತ್ತು ಆಲೋಚನೆಗಳು. | ಚಲನೆ ಮತ್ತು ದೂರದ ಅಳತೆ | 0 | 4 | 5 | 9 | 5 |
| ವಸ್ತುಗಳು ಹೇಗೆ ಕೆಲಸ ಮಾಡುತ್ತವೆ? | ವಿದ್ಯುತ್ ಪ್ರವಾಹ ಮತು ಅದರ ಪರಿಣಾಮಗಳು | 0 | 9 | 6 | 15 | 7 |
| ನೈಸರ್ಗಿಕ ವಿದ್ಯಾಮಾನಗಳು | ಬೆಳಕು | 0 | 5 | 6 | 11 | 9 |
| | ನೀರು: ಒಂದು ಅಮೂಲ್ಯ ಸಂಪನ್ಮೂಲ | 2 | 3 | 7 | 12 | 4 |

ಒಟ್ಟು ಥೀಮ್: 7

ಒಟ್ಟು ಕಲಿಕಾ ಫಲಗಳು: 116

ಆಯ್ದ ಕಲಿಕಾ ಫಲಗಳು: 68

| ಕ್ರ.ಸಂ. | ಘಟಕ | ಕಲಿಕಾ ಫಲಗಳು |
|---|---|---|
| 01 | ಸಸ್ಯಗಳಲ್ಲಿ ಪೋಷಣೆ | • ಆಹಾರ ವೈವಿಧ್ಯತೆ ಗುರುತಿಸುವರು.<br>• ಆಹಾರ ವ್ಯರ್ಥವಾಗುವುದನ್ನು ಅರ್ಥಮಾಡಿಕೊಳ್ಳುವರು.<br>• ಆಹಾರ ಸಂರಕ್ಷಣೆಯ ಮಹತ್ವವನ್ನು ವಿವರಿಸುವರು.<br>• ಆಹಾರದ ಮೂಲಗಳನ್ನು ವರ್ಗೀಕರಿಸುವರು.<br>• ಆಹಾರದ ಮೂಲಗಳನ್ನು ಆಧರಿಸಿ ಪ್ರಾಣಿಗಳನ್ನು ವರ್ಗೀಕರಿಸುವರು.<br>• ಆಹಾರದ ಘಟಕಗಳ ಪ್ರಾಮುಖ್ಯತೆಯನ್ನು ವಿವರಿಸುವರು.<br>• ಆಹಾರ ಸೇವನೆಯ ಕೊರತೆಯಿಂದ ಬರುವ ರೋಗಗಳಿಗೆ ಕಾರಣ ಮತ್ತು ಪರಿಹಾರಗಳನ್ನು ಹುಡುಕುವರು.<br>• ಸ್ವಪೋಷಕಗಳು ಮತ್ತು ಪರಪೋಷಕಗಳನ್ನು ವ್ಯತ್ಯಾಸಿಸುವರು.<br>• ದ್ಯುತಿಸಂಶ್ಲೇಷಣೆಯನ್ನು ಅರ್ಥೈಸಿಕೊಳ್ಳುವರು. |
| 02 | ಪ್ರಾಣಿಗಳಲ್ಲಿ ಪೋಷಣೆ | • ಮಾನವನ ಜೀರ್ಣಾಂಗವ್ಯೂಹದ ಚಿತ್ರ ಬಿಡಿಸಿ ಭಾಗಗಳನ್ನು ಗುರ್ತಿಸುವರು.<br>• ಮಾನವನಲ್ಲಿ ಜೀರ್ಣಕ್ರಿಯೆಯನ್ನು ವಿವರಿಸುವರು.<br>• ಮೆಲುಕು ಹಾಕುವ ಪ್ರಾಣಿಗಳಲ್ಲಿ ಜೀರ್ಣಕ್ರಿಯೆಯನ್ನು ವಿವರಿಸುವರು. |

## ಘಟಕ: ಸಸ್ಯಗಳಲ್ಲಿ ಪೋಷಣೆ

## ಕಲಿಕಾಫಲ – 1: ಆಹಾರದ ವೈವಿಧ್ಯತೆ ಗುರುತಿಸುವರು, ಆಹಾರ ವ್ಯರ್ಥವಾಗುವುದನ್ನು ಅರ್ಥಮಾಡಿಕೊಳ್ಳುವರು ಮತ್ತು ಆಹಾರ ಸಂರಕ್ಷಣೆಯ ಮಹತ್ವವನ್ನು ವಿವರಿಸುವರು.

**ಕಲಿಕಾಫಲದ ವ್ಯಾಪ್ತಿ ಮತ್ತು ಮಹತ್ವ:**
ನಾವು ಸೇವಿಸುವ ಆಹಾರದಲ್ಲಿನ ವೈವಿಧ್ಯತೆಯನ್ನು ಗುರುತಿಸುವರು. ವಿವಿಧ ಬಗೆಯ ಆಹಾರ ಸೇವನೆಯ ಅಗತ್ಯವನ್ನು ಅರಿತುಕೊಳ್ಳುವರು.

**ಚಟುವಟಿಕೆ–1.1**

**ಚಟುವಟಿಕೆಯ ಹೆಸರು:** ಕೋಷ್ಟಕವನ್ನು ತುಂಬುವುದು.

**ಚಟುವಟಿಕೆಯ ಉದ್ದೇಶ:** ನಾವು ವಿವಿಧ ಬಗೆಯ ಆಹಾರವನ್ನು ಸೇವಿಸುತ್ತೇವೆ ಎಂಬುದನ್ನು ಮನದಟ್ಟು ಮಾಡಿಸುವುದು.

**ಚಟುವಟಿಕೆಯ ವಿಧಾನ:** ಚರ್ಚೆ

**ಬಳಸುವ ಕಲಿಕೋಪಕರಣಗಳು/ಸಾಧನಗಳು:**
ಶಿಕ್ಷಕರ/ಸುಗಮಕಾರರ ವಿದ್ಯಾರ್ಥಿಗಳಿಗೆ ಚಿತ್ರ ಬಿಡಿಸಲು ಪ್ರೋತ್ಸಾಹಿಸಿ. ಅವರು ಚರ್ಚೆಯಲ್ಲಿ ತೊಡಗಿ ಕೋಷ್ಟಕವನ್ನು ತುಂಬುವಂತೆ ಅನುಕೂಲಿಸಿ.

**ಚಟುವಟಿಕೆ–1.2**

**ಚಟುವಟಿಕೆಯ ಹೆಸರು:** ವಿವಿಧ ಪ್ರದೇಶದ ಆಹಾರ ವೈವಿಧ್ಯ ಗಮನಿಸುವುದು.

**ಚಟುವಟಿಕೆಯ ಉದ್ದೇಶ:** ನಮ್ಮ ನೆರೆಯ ರಾಜ್ಯಗಳಲ್ಲಿ ಇರುವ ಆಹಾರ ಪದ್ಧತಿಯ ಭಿನ್ನತೆಯನ್ನು ತಿಳಿಸುವುದು.

**ಚಟುವಟಿಕೆಯ ವಿಧಾನ:** ಚರ್ಚೆ

**ಬಳಸುವ ಕಲಿಕೋಪಕರಣಗಳು/ಸಾಧನಗಳು:**

ಶಿಕ್ಷಕರು/ಸುಗಮಕಾರರು ಮಕ್ಕಳಿಗೆ ಆಹಾರದ ವೈವಿಧ್ಯತೆಗೆ ಕಾರಣವನ್ನು ವಿವರಿಸಿ.

**ಚಟುವಟಿಕೆ–1.3**
**ಚಟುವಟಿಕೆಯ ಹೆಸರು:** ಕೋಷ್ಟಕ ತುಂಬುವುದು.

**ಚಟುವಟಿಕೆಯ ಉದ್ದೇಶ:** ಆಹಾರ ವ್ಯರ್ಥವಾಗುವುದನ್ನು ಮಕ್ಕಳು ಗಮನಿಸುವಂತೆ ಮಾಡುವುದು.

**ಚಟುವಟಿಕೆಯ ವಿಧಾನ:** ಚರ್ಚೆ

**ಬಳಸುವ ಕಲಿಕೋಪಕರಣಗಳು/ಸಾಧನಗಳು:**

ಶಿಕ್ಷಕರು/ಸುಗಮಕಾರರು ಮಕ್ಕಳಿಗೆ ಚರ್ಚೆಯಲ್ಲಿ ಪಾಲ್ಗೊಳ್ಳಲು ಅನುಕೂಲಿಸಿ, ಕೋಷ್ಟಕ ತುಂಬಲು ಮಾರ್ಗದರ್ಶಿಸಿ.

**ಕಲಿಕಾ ಹಾಳೆ**

**ಚಟುವಟಿಕೆ 1.1:**

ಪ್ರಿಯ ವಿದ್ಯಾರ್ಥಿಗಳೆ, ತಮ್ಮ ನೆಚ್ಚಿನ ಆಹಾರ ಯಾವುದು? ಮತ್ತು ಏಕೆ? ಎಂಬುದನ್ನು ನಿಮ್ಮ ಸ್ನೇಹಿತರಿಗೆ ತಿಳಿಸಿ.

ನಾವು ಪ್ರತಿ ದಿನ ವಿವಿಧ ರೀತಿಯ ಆಹಾರವನ್ನು ಸೇವಿಸುತ್ತೇವೆ ಅಲ್ಲವೇ? ಹಾಗೆಯೇ ಬೇರೆ ಜೀವಿಗಳು ವಿವಿಧ ಬಗೆಯ ಆಹಾರ ಸೇವಿಸುತ್ತವೆ ಎಂದು ನಿಮಗೆ ತಿಳಿದಿದೆಯೆ? ಹಾಗಾದರೆ ಇದನ್ನೊಮ್ಮೆ ಪ್ರಯತ್ನಿಸು.

ನಿಮ್ಮ ಸ್ನೇಹಿತರನ್ನು ಕೇಳಿ ಅವರು ಒಂದು ದಿನದಲ್ಲಿ ತಿನ್ನುವ ಎಲ್ಲಾ ಆಹಾರ ಪದಾರ್ಥಗಳನ್ನು ಕೆಳಗಿನ ಕೋಷ್ಟಕದಲ್ಲಿ ಬರೆಯಿರಿ.

| ವಿದ್ಯಾರ್ಥಿಯ ಸ್ನೇಹಿತ/ಸ್ನೇಹಿತೆಯ ಹೆಸರು | ಒಂದು ದಿನದಲ್ಲಿ ತಿಂದಿರುವ ಆಹಾರ ಪದಾರ್ಥಗಳು | | |
|---|---|---|---|
| | ಬೆಳಗ್ಗೆ | ಮಧ್ಯಾಹ್ನ | ರಾತ್ರಿ |
| ಬೇಬಿ | ಚಿತ್ರಾನ್ನ | ಅನ್ನ ಸಾಂಬಾರ್ | ಚಪಾತಿ ತರಕಾರಿ ಪಲ್ಯ |
| | | | |
| | | | |
| | | | |

ನಾವೇಕೆ ಇಷ್ಟೊಂದು ಬಗೆಯ ಆಹಾರ ಸೇವಿಸುತ್ತೇವೆ ಎಂದು ಯೋಚಿಸಿರುವಿರಾ?

ನಮ್ಮ ದೇಹಕ್ಕೆ ವಿವಿಧ ರೀತಿಯ ಪೋಷಕಗಳ ಅಗತ್ಯವಿದೆ. ಅವುಗಳೆಲ್ಲವು ಒಂದೇ ಆಹಾರದಲ್ಲಿ ಸಿಗುವುದಿಲ್ಲ. ಆದ ಕಾರಣ ನಾವು ವಿವಿಧ ರೀತಿಯ ಆಹಾರ ಸೇವಿಸಬೇಕು.

**ಚಟುವಟಿಕೆ 1.2:**

ವಿವಿಧ ಪ್ರದೇಶಗಳಲ್ಲಿ ನಾವು ಆಹಾರ ವೈವಿಧ್ಯವನ್ನು ಗಮನಿಸಬಹುದು.

ದಕ್ಷಿಣ ಕರ್ನಾಟಕದಲ್ಲಿ ರಾಗಿ ಮುದ್ದೆ ಪ್ರಮುಖ ಆಹಾರ. ಏಕಿರಬಹುದು? ಸಹಪಾಠಿಗಳೊಂದಿಗೆ ಸೇರಿ ಆಲೋಚಿಸಿ ಉತ್ತರಿಸು.

- ರಾಗಿ ಅಲ್ಲಿನ ಪ್ರಮುಖ ಬೆಳೆ.
- ರಾಗಿ ಅವರಿಗೆ ಇಷ್ಟ.
- ರಾಗಿ ಬಿಟ್ಟರೆ ಅವರಿಗೆ ಬೇರೆ ಅವಕಾಶವೇ ಇಲ್ಲ.

ಹೌದು, ನಿಮ್ಮ ಊಹೆ ಸರಿಯಿದೆ. ಕರ್ನಾಟಕದಲ್ಲಿ ರಾಗಿ ಪ್ರಮುಖ ಬೆಳೆಯಾಗಿದೆ ಹಾಗು ಇದು ದಕ್ಷಿಣ ಕರ್ನಾಟಕದ ಸಂಪ್ರದಾಯಿಕ ಆಹಾರವಾಗಿದೆ ಆ ಕಾರಣಕ್ಕೆ ಅಲ್ಲಿ ರಾಗಿ ಮುದ್ದೆ ಪ್ರಮುಖ ಆಹಾರ ಆಗಿದೆ.

ಹಾಗೆಯೇ, ಕೆಳಗಿನ ಕೋಷ್ಟಕವನ್ನು ತುಂಬಲು ಪ್ರಯತ್ನಿಸು.

| ಕರ್ನಾಟಕದ ನೆರೆ ರಾಜ್ಯಗಳು | ಅಲ್ಲಿನ ಪ್ರಮುಖ ಆಹಾರ |
|---|---|
| ತಮಿಳುನಾಡು | ಪೊಂಗಲ್, ಇಡ್ಲಿ ಸಾಂಬಾರು |
| ಗೋವ | |
| ಕೇರಳ | |
| ಆಂಧ್ರಪ್ರದೇಶ | |
| ತೆಲಾಂಗಾಣ | |
| ಮಹಾರಾಷ್ಟ್ರ | |

ನೀನೀಗ ಕೋಷ್ಟಕದಲ್ಲಿ ಗಮನಿಸಿದಂತೆ ವಿವಿಧ ಪ್ರದೇಶಗಳಲ್ಲಿ ಅಲ್ಲಿನ ಆಹಾರ ಲಭ್ಯತೆಯ ಅನುಗುಣವಾಗಿ ಆಹಾರ ಅಭ್ಯಾಸಗಳನ್ನು ರೂಢಿಸಿಕೊಂಡಿರುತ್ತಾರೆ ಮತ್ತು ಅದರೊಂದಿಗೆ ಆಹಾರ ಅಭ್ಯಾಸದ ಮೇಲೆ ಜನರ ಸಂಸ್ಕೃತಿಯ ಪ್ರಭಾವವು ಇರುತ್ತದೆ.

**ಮೌಲ್ಯಾಂಕನ ಸ್ಥರಗಳು**

| ಕಲಿಕಾಫಲ | 1 | 2 | 3 | 4 |
|---|---|---|---|---|
| ಆಹಾರದ ವೈವಿಧ್ಯತೆ ಗುರುತಿಸುವರು | ತಮ್ಮ ಮನೆಯಲ್ಲಿನ ಆಹಾರದ ವೈವಿಧ್ಯತೆಯನ್ನು ಗುರುತಿಸುವರು | ಸ್ಥಳೀಯ ಆಹಾರದ ವೈವಿಧ್ಯತೆಯನ್ನು ಗುರುತಿಸುವರು | ಪ್ರಾದೇಶಿಕ ಆಹಾರದ ವೈವಿಧ್ಯತೆಯನ್ನು ಗುರುತಿಸುವರು | ಹಲವು ರಾಜ್ಯಗಳ ಆಹಾರದ ವೈವಿಧ್ಯತೆಯನ್ನು ಗುರುತಿಸುವರು |
| | | | | |

| | | | | |
|---|---|---|---|---|
| ಆಹಾರ ವ್ಯರ್ಥವಾಗುದನ್ನು ಅರ್ಥ ಮಾಡಿಕೊಳ್ಳುವರು | ತಮ್ಮ ಮನೆಯಲ್ಲಿ ಆಹಾರ ವ್ಯರ್ಥವಾಗುದನ್ನು ಅರ್ಥ ಮಾಡಿಕೊಳ್ಳುವರು | ಸ್ಥಳೀಯವಾಗಿ ಆಹಾರ ವ್ಯರ್ಥವಾಗುದನ್ನು ಅರ್ಥ ಮಾಡಿಕೊಳ್ಳುವರು | ಪ್ರಾದೇಶಿಕವಾಗಿ ಆಹಾರ ವ್ಯರ್ಥವಾಗುದನ್ನು ಅರ್ಥ ಮಾಡಿಕೊಳ್ಳುವರು | ಆಹಾರ ವ್ಯರ್ಥವಾಗುವುದರಿಂದ ಆಗುವ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವರು |
| | | | | |
| ಆಹಾರದ ಸಂರಕ್ಷಣೆಯ ಮಹತ್ವವನ್ನು ವಿವರಿಸುವರು | ಆಹಾರದ ಸಂರಕ್ಷಣೆಯ ಮಹತ್ವವನ್ನು ವಿವರಿಸಲು ಪ್ರಯತ್ನಿಸುವರು | ಆಹಾರದ ಸಂರಕ್ಷಣೆಯ ಮಹತ್ವವನ್ನು ಭಾಗಶಃ ವಿವರಿಸುವರು | ಆಹಾರದ ಸಂರಕ್ಷಣೆಯ ಮಹತ್ವವನ್ನು ಬಹುತೇಕ ವಿವರಿಸುವರು | ಆಹಾರದ ಸಂರಕ್ಷಣೆಯ ಮಹತ್ವವನ್ನು ಸಂಪೂರ್ಣ ವಿವರಿಸುವರು |

## ಕಲಿಕಾ ಚೇತರಿಕೆ: ಸಮಾಜ ವಿಜ್ಞಾನದ ಪಠ್ಯಕ್ರಮದ ಮರು ಹೊಂದಾಣಿಕೆ

ಸಮಾಜ ವಿಜ್ಞಾನವನ್ನು ಕಲಿಯುವುದರ ಮೂಲಕ ಮಕ್ಕಳು ತಮ್ಮ ದೈನಂದಿನ ಜೀವನದಲ್ಲಾಗುವ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳ ಪರಿಣಾಮಗಳನ್ನು ವಿಶ್ಲೇಷಿಸುವ ಮನೋಭಾವವನ್ನು ಬೆಳೆಸಿಕೊಳ್ಳುವ ಮೂಲ ಆಶಯವಿದೆ. ಸದರಿ ಕಲಿಕಾ ಚೇತರಿಕೆ ಉಪಕ್ರಮದ ಅಡಿಯಲ್ಲಿ 4–9ನೇ ತರಗತಿಯ ಮಕ್ಕಳು ಸಮಾಜ ವಿಜ್ಞಾನದಲ್ಲಿ (ಇತಿಹಾಸ, ಭೂಗೋಳ, ಪರಿಸರ ಅಧ್ಯಯನ, ಸಮಾಜಿಕ ಮತ್ತು ರಾಜಕೀಯ ಜೀವನ ಮತ್ತು ಅರ್ಥಶಾಸ್ತ್ರ) ಈ ಕೇಳಗಿನ ಸಾಮಾರ್ಥ್ಯಗಳನ್ನು ಗಳಿಸುವುದಕ್ಕೆ ಪೂರಕವಾಗಿ ಕಲಿಕಾ ಚೇತರಿಕೆ ಉಪಕ್ರಮವನ್ನು ವಿನ್ಯಾಸಪಡಿಸಲಾಗಿದೆ.

**ಇತಿಹಾಸ:**

- ಮಕ್ಕಳು ಇತಿಹಾಸದಲ್ಲಿ ಕಾಲವನ್ನು ಗುರುತಿಸುವ, ವರ್ಗಿಕರಿಸುವ ಸಾಮಾರ್ಥ್ಯವನ್ನು ಗಳಿಸುವರು.
- ಮಕ್ಕಳು ಇತಿಹಾಸ ನಿರ್ಮಾಣದಲ್ಲಿ ಮೂಲಾಧಾರಗಳ ಪಾತ್ರಗಳನ್ನು ಗುರುತಿಸಿ ವಿಶ್ಲೇಷಿಸುತ್ತಾರೆ.

**ಸಾಮಾಜಿಕ ಮತ್ತು ರಾಜಕೀಯ ಜೀವನ:**

- ಮಕ್ಕಳು ಸಾಂವಿಧಾನಿಕ ಮೌಲ್ಯಗಳನ್ನು ಪ್ರಶಂಸಿಸುವರು ಮತ್ತು ಪೌರತ್ವದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವರು.
- ಮಕ್ಕಳು ಭಾರತೀಯ ಪ್ರಜಾಪ್ರಭುತ್ವ, ವ್ಯವಸ್ಥೆ ಮತ್ತು ಅದರ ಮೌಲ್ಯಗಳನ್ನು ಪ್ರಶಂಷಿಸುವರು, ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ (ಸಾಂಸ್ಥಿಕ ವಿನ್ಯಾಸಗಳು) ಕುರಿತು ಅರಿತುಕೊಳ್ಳುವರು.
- ಮಕ್ಕಳು ತನ್ನ ಕುಟುಂಬ, ಸಮುದಾಯ, ಸಮಾಜ ಮತ್ತು ಇತರೆ ಸಾಮಾಜಿಕ ಸಂಸ್ಥೆಗಳ ನಡುವಿನ ಅಂತರ್ ಸಂಬಂಧವನ್ನು ಅರಿಯುವರು.

**ಭೂಗೋಳ:**

- ಮಕ್ಕಳು ಭೂಮಿ ಮತ್ತು ಮಾನವರ ನಡುವಿನ ಅಂತರ್ ಸಂಬಂಧವನ್ನು ಅರಿತುಕೊಳ್ಳುವರು. (ಭೂಮಿಯ ಚಲನೆ ಮತ್ತು ಅದರ ಪರಿಣಾಮ,)
- ಮಕ್ಕಳು ನಕ್ಷೆ ರಚಿಸುವ, ಗುರುತಿಸುವ ಕೌಶಲಗಳು ಬೆಳೆಸಿಕೊಳ್ಳುವರು.
- ಮಕ್ಕಳು ಭಾರತದ ಭೌಗೋಳಿಕ ಸಂಪನ್ಮೂಲ ಮತ್ತು ಇದರ ವೈವಿಧ್ಯತೆಗಳು ಅರಿತುಕೊಳುವರು ಜೊತೆಗೆ ಮಾನವರ ಮೇಲಾಗುವ ಪರಿಣಾಮಗಳನ್ನು ಅರಿತುಕೊಳ್ಳುವರು.

**ಪರಿಸರ ಅಧ್ಯಯನ:** ತರಗತಿ 4–5ರ ಪರಿಸರ ಅಧ್ಯಯನದ ಅಗತ್ಯ ಕಲಿಕಾ ಫಲಗಳನ್ನು ಗುರುತಿಸಿ 6–9ನೇ ತರಗತಿಗಳ ಹಂತದಲ್ಲಿ ಸಮ್ಮಿಳಿತಗೊಳಿಸಲಾಗಿದೆ. ಹಾಗೇಯೆ ಅರ್ಥಶಾಸ್ತ್ರದ ಮೂಲ ಪರಿಕಲ್ಪನೆಗಳಿಗೆ ಇತ್ತು ನೀಡಲಾಗಿದೆ.

ಈ ಮೇಲಿನ ಇತಿಹಾಸ, ಭೂಗೋಳ, ಪೌರನೀತಿ, ಪರಿಸರ ಅಧ್ಯಯನದ ಮೂಲ ಸಾಮರ್ಥ್ಯಗಳನ್ನು ಗಮನದಲ್ಲಿ ಇಟ್ಟುಕೊಂಡು ತರಗತಿವಾರು ಕಲಿಕಾ ಫಲಗಳನ್ನು ನೀಡಿ ಮರುಹೊಂದಾಣಿಕೆ ಮಾಡಲಾಗಿದೆ. NEP-2020ರ ಆಶಯದಂತೆ ಕಲಿಕಾ ಚೇತರಿಕೆಯ ಉಪಕ್ರಮದಲ್ಲಿ ಕಲಿಕಾ ಹಾಳೆಗಳು/ಶಿಕ್ಷಕರ ಕೈಪಿಡಿ ಈ ಕೆಳಗಿನ ಮುಖ್ಯ ಅಂಶಗಳ ಹಿನ್ನೆಲೆಯಲ್ಲಿ ವಿನ್ಯಾಸಪಡಿಸಿದೆ.

- ವಿಷಯವಸ್ತುವಿನ ಸ್ಥಳೀಕರಣ
- ಚಟುವಟಿಕೆ ಆಧಾರಿತ
- ಕಲಿಕೆಯ ಜೊತೆಗೆ ಸ್ವಮೌಲ್ಯಮಾಪನ
- ಸ್ಥಳೀಯತೆಯಿಂದ ಜಾಗತಿಕ ವಿಷಯಗಳ ಕಡೆಗೆ